

ಉಪವನ

ಕೆ. ಎಸ್. ನರಸಿಂಹಸ್ವಾಮಿ

ವ್ಯಾಲಯ : : ಪ್ರಕಾಶಕರು
ಮೈಸೂರು

ಕನ್ನಡ ಕಾವ್ಯಮಾಲೆ

ಉಪವನ

ಕೆ. ಎಸ್. ನರಸಿಂಹಸ್ವಾಮಿ

ಕಾವ್ಯಾಲಯ ಪ್ರಕಾಶಕರು
ಮೈಸೂರು

ಮೊದಲನೆಯ ಮುದ್ರಣ : ೧೯೫೮

Published by K. Chidambaram
at Kavyalaya, Mysore

ಬೆಲೆ : ರೂ. ೨·೨೫ (ಮತ್ತು ೩·೭೫)

ಮುದ್ರಕರು :
ಜಿ. ಎಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
ಮೈಸೂರು

ಉಪವನ

ವಿಷಯ ಸೂಚಿಕೆ

ಉಪವನ

ಕಳೆದ ಹತ್ತು ಹನ್ನೆರಡು ವರುಷಗಳಲ್ಲಿ 'ಪುಸ್ತಕ ಪ್ರಪಂಚ' 'ಪ್ರಬುದ್ಧ ಕರ್ಣಾಟಕ', 'ಕನ್ನಡ ನುಡಿ', 'ಪ್ರಜಾವಾಣಿ' ಪತ್ರಿಕೆಗಳಲ್ಲಿ, 'ವಿ.ಸೀ.' ಅವರ ಮೇಲಿನ ಲೇಖನಸಂಗ್ರಹದಲ್ಲಿ ಬೆಳಕು ಕಂಡ ಶ್ರೀ ನರಸಿಂಹಸ್ವಾಮಿಯವರ ಸಾಹಿತ್ಯಗಂಧಿಯಾದ ಅವಲೋಕನಗಳ ಮತ್ತು ಬಾನುಲಿಯಿಂದ ಪ್ರಸಾರಿತವಾದ ಅವರ ಬಾಯಿಮಾತುಗಳ ಸಂಕಲನವಿದು. ಇವುಗಳ ವಿವರಗಳನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ. ಹೀಗೆ ಪ್ರಥಮ ಪ್ರಕಟನೆಗೆ ಅವಕಾಶವಿತ್ತವರಿಗೆಲ್ಲ ನಮ್ಮ ಕೃತಜ್ಞತೆ ಸಲ್ಲುತ್ತದೆ. ಕಾಲಕ್ರಮವೊಂದೇ ಇಲ್ಲಿ ಅನುಸರಿಸಿರುವ ಕ್ರಮ. ಲೇಖನಗಳಲ್ಲಿ ಎಲ್ಲೋ ಕೆಲವು ಸಣ್ಣಪುಟ್ಟ ಸರಿಪಡಿಸುವ ಕೆಲಸವನ್ನು ಈಗವರು ಮಾಡಿರುತ್ತಾರಾದರೂ, ಹೆಚ್ಚು ಬದಲಾವಣೆಗಳನ್ನು ಎಲ್ಲೂ ಮಾಡಿಲ್ಲ. ಹಾಗೆ ಮಾಡುವ ಆವಶ್ಯಕತೆ ಇಲ್ಲವೆಂದು ಅವರ ನಂಬಿಕೆ.

ಇಲ್ಲಿ 'ಕೇವಲ ಪುಸ್ತಕಾವಲೋಕನ ಮಾತ್ರ ನಡೆದಿಲ್ಲ', ಜೊತೆಗೆ ಸಾಹಿತ್ಯವಸ್ತುವಾಗಬಲ್ಲ ಜೀವನಾನುಭವಗಳಲ್ಲಿ ಕೆಲವದರ ವಿಷಯವೂ ಬಂದಿದೆ. 'ಗದ್ಯ ತನ್ನ ಮಾಧ್ಯಮವಲ್ಲವೇನೋ!' ಎಂದು ಇನ್ನೂ ಶಂಕಿಸುತ್ತಿರುವ ಕವಿಯೊಬ್ಬರ ಮೊದಲನೆಯ ಗದ್ಯಸಂಗ್ರಹವಿದು. ಆದರೆ ಅವರ ಕವನಗಳಲ್ಲಿ ಕಂಡುಬರುವ ನವುರನ್ನೂ ಗದ್ಯಬಂಧಕ್ಕೆ ಆವಶ್ಯಕವಾದ ಒಂದು ಬಿಗಿಯನ್ನೂ ವಾಚಕರು ಇಲ್ಲಿನ ಲೇಖನಗಳಲ್ಲಿ ಕಾಣದಿರಲಾರರು.

ಇದಕ್ಕೆ 'ಉಪವನ'ವೆಂಬ ಹೆಸರನ್ನು ಕೊಟ್ಟು ಶ್ರೀ ನರಸಿಂಹಸ್ವಾಮಿಯವರು ಒಟ್ಟಾರೆ ಲೇಖನಕ್ಕೂ ಪ್ರತಿಯೊಂದು ಲೇಖನಕ್ಕೂ ಒಂದು ಅರ್ಥವತ್ತಾದ ಮಿತಿಯನ್ನು ಕಲ್ಪಿಸಿದ್ದಾರೆ. ಮನೆ ಸುತ್ತ ಇರುವಷ್ಟು ಸ್ಥಳದಲ್ಲಿ ತಮಗೆ ಇಷ್ಟವಾದ ಹೂಗಿಡಗಳನ್ನು ಬೆಳಸಿಕೊಂಡು ಸಂತೋಷಪಡುವ ಜೀವನಕ್ರಮದಲ್ಲಿ ತಪ್ಪೇನಿದೆ? ಆ ಕ್ರಮವನ್ನೆ ಸಾಹಿತ್ಯವನ್ನು ಕುರಿತ ಲೇಖನಗಳಿಗೆ ಇವರು ಇಲ್ಲಿ ಅನ್ವಯಿಸಿದ್ದಾರೆ. ಇದನ್ನು ನಮ್ಮ ಓದುಗರು ವಿಶ್ವಾಸದಿಂದಲೇ ಬರಮಾಡಿಕೊಳ್ಳುವರೆಂದು ನಾವು ನಂಬಿದ್ದೇವೆ.

ಪ್ರಕಾಶಕರು

ಮುಗುದೆಯರ ಪತ್ರಗಳು*

ಉರಿಬಿಸಿಲನ್ನೂ ಚಳಿಗಾಳಿಯನ್ನೂ ಯಾರುತಾನೆ ಬಯಸಿ ಬಯಸಿ ಬೇಕೆನ್ನುತ್ತಾರೆ. ಎಲ್ಲರೂ ಬಯಸುವುದು ಸುಖವನ್ನೇ, ಸಂತೋಷವನ್ನೇ, ಸಮೃದ್ಧಿಯನ್ನೇ. ಆ ಸುಖ, ಆ ಸಂತೋಷ, ಆ ಸಮೃದ್ಧಿ—ಪ್ರೇಮದ ಅನಂತ ಪ್ರಭಾವಗಳೆಂದು ಕವಿಗಳು ಎಲ್ಲ ಕಾಲಗಳಲ್ಲೂ ಸಾರುತ್ತಿದ್ದಾರೆ. ಆ ಪ್ರಭಾವವೇ ಪ್ರೇಮಪತ್ರಗಳಲ್ಲಿ, ಪ್ರೇಮಕಥೆಗಳಲ್ಲಿ, ಪ್ರೇಮ ಗೀತಗಳಲ್ಲಿ, ಪ್ರೇಮನಾಟಕಗಳಲ್ಲಿ, ಜೀವವಾಹಿನಿಯಾಗಿ ಹರಿದು ಜನತೆಯ ಹೃದಯುವನ್ನು ಗೆದ್ದು ಆಳುತ್ತದೆ. ಶ್ರೀ ಕೃಷ್ಣರ ಈ ಪ್ರೇಮಪತ್ರಗಳನ್ನು ಓದುವಾಗೆಲ್ಲ ಅಂಥ ಒಂದು ಎಲ್ಲ ಬಯಸುವ ಪ್ರಶಾಂತವಾದ ಮೆಡಿಟರೇನಿಯನ್ ಸಮುದ್ರ ಪ್ರಾಂತದ ವಾಯುಗುಣವೂ, ಆ ಹಿತಮಿತವಾದ ಆವರಣದಲ್ಲಿ ಸಣ್ಣದನಿಯಲ್ಲಿ ಪಲುಕುತ್ತಿರುವ ಹತ್ತಾರು ಕಿರುಹಕ್ಕಿಗಳ ಚಂದ್ರಾರಾಧನೆಯೂ, ದೂರದಲ್ಲಿ ಎಂದೋ ಕಂಡ ಕನಸಿನ ಬಿಸಿಲ್ಗುದುರೆಗಳಂತೆ, ನೆನಪಿಗೆ ಬರುತ್ತವೆ. ಎಲ್ಲಕ್ಕೂ ಎಲ್ಲೆಡೆಗಳಲ್ಲೂ ಕಟ್ಟುನಿಟ್ಟುಗಳೊದಗಿ ಉಸಿರಾಡುವುದೇ ಕಷ್ಟವಾಗಿರುವ ಇಂಥ ದುಷ್ಕಾಲದಲ್ಲಿ ಇಂಥ ಹಾಸ್ಯ, ಇಂಥ ಸಂತೋಷ, ಉಗುರು ಬೆಚ್ಚಗೆ ಅಲ್ಲಲ್ಲಿ ಸುಳಿಯುತ್ತಿರುವ ಮೊದಲ ಪ್ರೇಮದ ಈ ಸವಿಗನಸುಗಳು ತಮ್ಮದೇ ಆದ ಒಂದು ನೆಲೆಯನ್ನು ಆರಿಸಿಕೊಂಡು, ಬಾಳಿನ ಒಂದು ಘಟ್ಟದಲ್ಲಿ ಬೆಳದಿಂಗಳನ್ನು ಹರಡುತ್ತಿವೆ.

ಈ ಪುಸ್ತಕದಲ್ಲಿ ಮೂರುಕಟ್ಟು ಕಾಗದಗಳಿವೆ: 'ವಿಶಾಲಾಕ್ಷಿಗೆ ಆಕೆಯ ಗಂಡ ಮದುವೆಯಾದ ತರುಣದಲ್ಲಿ ಬರೆದ ಕಾಗದಗಳು; ವಿಶಾಲಾಕ್ಷಿ ಗಂಡನ ಮನೆಗೆ ಬಂದಮೇಲೆ ತನ್ನ ಸಂಸಾರದ ಸುಖಗಳನ್ನು ಕುರಿತು ಗೆಳತಿ ವೆಂಕೂಗೆ ಬರೆದಿರುವ ಪತ್ರಗಳು; ಮತ್ತು ಕಾಲೇಜಿನ ವಿದ್ಯೆಯನ್ನು ಮುಗಿಸಿಕೊಂಡು ಹಳ್ಳಿಯ ಮನೆಯನ್ನು ಸೇರಿರುವ ಇಂದಿರೆ ತನ್ನ ಮದುವೆಯ ಪ್ರಸ್ತಾಪವನ್ನೂ ಪ್ರಣಯಯಾತ್ರೆಯ ವಿವರವನ್ನೂ

---

* ಮುಗುದೆಯರ ಪತ್ರಗಳು—ಸಿ. ಕೃಷ್ಣ. ಪ್ರಕಾಶಕರು: ಕಾವ್ಯಾಲಯ, ಮೈಸೂರು.

ಗೆಳತಿ ಕಮಲೂಗೆ ತಿಳಿಸಿರುವ ಪತ್ರಗಳು: ಮೊದಲನೆಯ ಎರಡು ಪತ್ರ ಪರಂಪರೆಗಳಿಗೂ ನಾಯಿಕೆ ಒಬ್ಬಳೇ ಆಗಿದ್ದು ಆಂತರಿಕ ಸಂಬಂಧವಿದೆ; ಮೂರನೆಯ ಕಟ್ಟು ಮಾತ್ರ ಇವೆರಡರಿಂದಲೂ ಬೇರೆಯಾಗಿದೆ. ಇಂದಿರೆಯು ವಿಶಾಲಿಯಷ್ಟು ಮುಗ್ಧೆಯಲ್ಲ! ಒಟ್ಟಿನಲ್ಲಿ ಈ ಮೂರು ಕಟ್ಟುಗಳಿಗೂ ಕಾಲದೇಶಗಳ ಹಿನ್ನಲೆ ಒಂದೇ ಎನ್ನಬಹುದು. ಧನ ಧಾನ್ಯ ಸಮೃದ್ಧಿಯುಳ್ಳ ಒಂದು ಸುಕೃತದ ಕಾಲದಲ್ಲಿ ಜನಸಾಮಾನ್ಯದಲ್ಲಿ ಬಹುಭಾಗದ ಕಷ್ಟ ನಿಷ್ಠುರಗಳ ಕಡೆಗೆ ದೃಷ್ಟಿಯನ್ನು ಹರಿಯಬಿಡದೆ, ಮೊದಲಪ್ರೇಮದ ಉತ್ಸಾಹದಿಂದಲೂ ತೃಪ್ತಿಯಿಂದಲೂ ಶಾಂತಿಯಿಂದಲೂ ಬಾಳುತ್ತಿರುವ ಸುಸಂಸ್ಕೃತರಾದ ಇಬ್ಬರು ಮುಗ್ಧೆಯರ ಮತ್ತು ಒಬ್ಬ ತರುಣ ಪ್ರೇಮಿಯ ಪರಿಚಯ ನಮಗೆ ಇಲ್ಲಿ ಲಭಿಸುತ್ತದೆ. ಒಟ್ಟಿನಲ್ಲಿ ಇವರೆಲ್ಲ ಬೆಳದಿಂಗಳಲ್ಲಿ ಬೆಳೆದ ವ್ಯಕ್ತಿಗಳು. ಇಂದಿನ ಜೀವನದ ಕಷ್ಟಕಾರ್ಪಣ್ಯಗಳ, ಧೀರೋತ್ಸಾಹಗಳ, ಏಳು ಬೀಳುಗಳ ವಿಶಾಲ ಪ್ರಶ್ನೆಗಳು ಇಲ್ಲಿ ಸುಳಿದೂ ಇಲ್ಲ; ಅವಕ್ಕೆ ಉತ್ತರವೂ ಇಲ್ಲಿಲ್ಲ. ಕಾಗದಗಳ ಉದ್ದಕ್ಕೂ ಸಾಧಾರಣ ಪರಿಚಿತ ಸಂಗತಿಗಳು ಬಂದು ಅಲ್ಲಲ್ಲಿ ರುಚಿಯಾಗಿ ರಸಿಕಪ್ರಿಯವಾಗಿವೆ. ಆದರೆ ಇವೆಲ್ಲ ರಹಸ್ಯ ಪತ್ರವ್ಯವಹಾರಗಳು; ಇವುಗಳಿಂದ ನಿರ್ಧಾರಗಳನ್ನೆಳೆದರೆ ತಪ್ಪಾದೀತು. ಪಾಪ! ಆ ಮುಗುದೆಯರು ಮಾಡಿದ ತಪ್ಪೇನು; ಆ ಹುಡುಗ ಗಂಡ ಬಣ್ಣ ಬಣ್ಣದ ಮಾತನ್ನಾಡುವುದು ತಾನೇ ಸಹಜವಲ್ಲವೆ? ಇವರೆಲ್ಲ ನಿರ್ದೋಷಿಗಳು, ಸುಖಾಭಿಲಾಷಿಗಳು. ಹಾಗಿರಬಾರದೇಕೆ? ಅಂಥವರಿಲ್ಲವೆ?

ಇಂಥ ಕಾಗದಗಳು ಜೀವನದಲ್ಲಿ ಸಹಜವೇ ಎನ್ನುವುದು ಇವುಗಳ ಸೀಮೆಗೇ ಹೊರಗಾದ ಪ್ರಶ್ನೆ. ಮದುವೆಯಾದ ಹೊಸದರಲ್ಲಿ ಗಂಡು ಹೆಣ್ಣುಗಳ ಮನಸ್ಸಿನಲ್ಲಿ ಸುಳಿಯುವ ಹೊಂಗನಸುಗಳನ್ನೂ, ಭೂಮಿಯಲ್ಲಿ ಹುಟ್ಟಿ ಗಗನ ಮಂಡಲದಲ್ಲಿ ಬೆಳಕನ್ನು ಬೀರುವ ಆ ಪ್ರೇಮದ ಅಂತರಂಗವನ್ನೂ ಬಲ್ಲವರೇ ಬಲ್ಲರು; ಹೇಳಿ ಮುಗಿಸುವುದು ಸಾಧ್ಯವಾದೀತೆ? ಈ ಹುಡುಗಿಯರ ಮನಸ್ಸು ಅರ್ಥವಾಗುತ್ತದೆ. ಆದರೆ ವಿಶಾಲಾಕ್ಷಿಗೆ ಆಕೆಯ ಗಂಡ ಅಲ್ಲಲ್ಲಿ ಸಂಸಾರವನ್ನು ಕುರಿತು ಮಾಡಿರುವ ಉಪದೇಶಗಳೂ, ಒಂದು ಕಡೆಯಲ್ಲಿ ಮಾತ್ರ ಉದ್ಧರಿಸಿರುವ ಸುಪ್ರಸಿದ್ಧ ಸಂಸ್ಕೃತ

ಶ್ಲೋಕದ ಸಾರಾಂಶವೂ ಆಯಾ ಸಂದರ್ಭಗಳಲ್ಲಿ ಅನುಚಿತವಾಗಿ ಒಣ ತುಟಿಯ ವರದಿಗಳಾಗಿ ಕೃತಕತೆಯನ್ನು ತಂದಿವೆ. ಗಂಡ-ಹೆಂಡತಿಯರ ಪತ್ರವ್ಯವಹಾರದಲ್ಲಿ ನಾವು ಇನ್ನೇನನ್ನೂ ಹೇಳಬಾರದು. ಹೃದಯ ಮಾತಾಡಿಕೊಳ್ಳಲಿ; ಪಾಂಡಿತ್ಯ ಉಪದೇಶ ದೂರ ನಿಂತರೇ ಚೆನ್ನ.

ಕಾಗದಗಳ ಮೂಲಕ ಕಥೆಯನ್ನು ಹೇಳುವುದೇ ಇಲ್ಲಿಯ ದಾರಿ. ಈ ಮೂರು ಪತ್ರಗಳಲ್ಲೂ ಹಬ್ಬಿರುವ ಕಥೆಗಳನ್ನು ಇಲ್ಲಿ ವಿವರಿಸಿದರೆ ಓದುಗರು ತಮ್ಮ ಕುತೂಹಲವನ್ನು ಸೋಡಿಮಾಡಿಯಾರೆಂಬ ಭಯದಿಂದ ಆ ಗೋಜಿಗೆ ನಾವು ಹೋಗುವುದಿಲ್ಲ. ಭಾಷೆ ಶುಚಿರುಚಿಯಾಗಿದೆ; ಬಗೆದವರ ಮನಸ್ಸು ನಿರ್ಮಲವಾಗಿದೆ: ಹಾಸ್ಯ ಹದ್ದು ಮೀರದೆ ಮುಗ್ಧತೆರೆ ನೆರವಾಗಿದೆ. ಒಳ್ಳೆಯ ಮನಸ್ಸೂ ಒಳ್ಳೆಯ ಬರವಣಿಗೆಯೂ ಮೆಚ್ಚುವಂತಿವೆ; ಪುಸ್ತಕವೂ ಅಂದವಾಗಿ ಕೈಗೆ ಬಂದು ಮದುವೆಯ ಹೊಂಬಣ್ಣದ ನೆನಸನ್ನು ತರುತ್ತಿದೆ. ಸುಮಂಗಲಿಯರ ಸುದ್ದಿಗಳನ್ನು ಕೇಳಿ ಮನಸ್ಸಿಗೆ ಹರುಷವಾಗುತ್ತದೆ. ತಪ್ಪು ಎಲ್ಲಿಲ್ಲ, ಯಾರ ಬರೆವಣಿಗೆಯಲ್ಲಿಲ್ಲ. ಆ ಮಾತು ಹಾಗಿರಲಿ; ಇಂಥ ಸುಂದರವಾದ ಉಡುಗೊರೆಗಳನ್ನು ಕನ್ನಡಕ್ಕೆ ಓದಿಸುತ್ತಿರುವ ಶ್ರೀಕೃಷ್ಣರು ಅಭಿನಂದನಾರ್ಹರು; ಇಂಥ ಬರವಣಿಗೆಗೆ ಎಂದೆಂದಿಗೂ ಸುಸ್ವಾಗತವೇ.

ಬೇಂದ್ರೆಯವರ ಭಾಗ್ಯ

ಹೊಸಕಾಲದ ಕವನಗಳನ್ನು ಕುರಿತ ವಿಮರ್ಶೆಯು ಇನ್ನೂ ಹಳೆಯ ಜಾಡಿನಲ್ಲೇ ಸಾಗುತ್ತಿದೆ; ಇಂದಿನ ಬೆಲೆಗಳಿಗೆ ಸಾಲದ ಸಲ್ಲದ ಪದಪದಕಗಳನ್ನೇ ಇಂದಿನ ಕವಿಗಳಿಗೆ ಸಲ್ಲಿಸುತ್ತಿದೆ. ಹೊಸದೃಷ್ಟಿ ಕೋನಗಳಿಂದ ವಿಶ್ವತೋ ವಿಶಾಲವಾದ ಇಂದಿನ ಪ್ರಶ್ನೆಗಳಿಗೆ, ಅಭಿರುಚಿಗಳಿಗೆ, ಸಾಹಸಗಳಿಗೆ, ಸೋಲಿಗೆ, ಗೆಲವಿಗೆ, ಧರ್ಮಕ್ಕೆ, ದರ್ಶನಗಳಿಗೆ ಇಂದಿನ ಕವಿಗಳ ದುಡಿಮೆ ಹೇಗೆ ಬೆಂಬಲವಾಗಿದೆ, ಕಣ್-ಬಲವಾಗಿದೆ, ಕಾಣಿಕೆಯಾಗಿದೆ ಎಂಬುದರ ಪರೀಕ್ಷೆಗೆ ಕಾಲ ಒದಗಿದೆ; ಕಾರಣ ಒದಗಿದೆ. ಇಂದಿನ ಜಗತ್ತಿನ ಆಗು-ಹೋಗುಗಳ ಗೋಜಿಗೆ ಹೋಗದೆ ವಿಜೃಂಭಿಸುವವರ ಮಾತು ಹಾಗಿರಲಿ; ಅವರ ಒಪ್ಪಿಗೆಯನ್ನು ಕೋರುವ ಚಾಪಲ್ಯವಾದರೂ ಏಕೆ? ಅಂಥವರ ಕೃತಿಗಳನ್ನೂ ಈ ನೆಲೆಯಿಂದ ನೋಡಿದರೆ ಅವರಿಗೂ ನಾವು ಗೌರವವನ್ನೇ ಸೂಚಿಸಿದಂತಾಗುತ್ತದೆ; ಅರಿತೋ ಅರಿಯದೆಯೋ ಇಂದಿನ ಕೃತಿಗಳಲ್ಲಿ ಇಂದಿನ ಜಗತ್ತು ಬೆರೆಯುತ್ತಿದೆ. ಹೊಸತು ಎಂಬುದು ಬರಿಯ ಹೊರರೂಪಕ್ಕಲ್ಲ; ತಿರುಳೂ ಹೊಸತಾಗುತ್ತಿದೆ. ಚಕ್ರ ಹೀಗೆ ಹರಿಯುತ್ತಿದೆ; ರಥ ಸಾಗುತ್ತಿದೆ. ಬದುಕಲು ಬಯಸುವ ಎಲ್ಲ ಸಾಹಿತ್ಯಕ್ಕೂ ಇದೇ ಗತಿ.

ಬೇಂದ್ರೆಯರವ ಕವನಗಳಲ್ಲಿ ನಾವು ಕಾಣುವ ಚಿತ್ರಗಳೂ, ಕೇಳುವ ಧ್ವನಿಗಳೂ ನಿರ್ವಿವಾದವಾಗಿ ಹೊಸರೀತಿಯವು. ಅವರ ಮೊದಲ ಕವಿತೆ ಮೂಡುವ ಹೊತ್ತಿಗಾಗಲೇ ಹೊಸಗನ್ನಡ ಕಾವ್ಯಕ್ಷೇತ್ರದಲ್ಲ ಸ್ವತಂತ್ರ ಧ್ವನಿಗಳು ಕೇಳಿ ಬಂದು ಸುಪ್ರಭಾತವಾಗಿತ್ತು. ಬೇಂದ್ರೆಯವರ ಪ್ರತಿಭೆ ಆ ಪ್ರಭಾತಕಾಂತಿಗೆ ಕಾಣಿಕೆಯನ್ನು ಸಲ್ಲಿಸಿ ತನ್ನದೇ ಆದ ನಾದಪರಿಮಳವನ್ನು ಹರಡುತ್ತಿದೆ. ಅವರ ಸಂತೋಷದ ಪುಣ್ಯಫಲಗಳಾದ ಈ ಮೂರು ಕವನ ಸಂಗ್ರಹಗಳಲ್ಲಿ*—ಈ ಸಂಗ್ರಹಗಳಲ್ಲಿ ಪ್ರಜ್ವಲಿಸುತ್ತಿರುವ ನಾದರತ್ನಗಳಲ್ಲಿ—

---

* ೧. 'ಸಖೀಗೀತ'. ೨. 'ಮೂರ್ತಿ ಮತ್ತು ಕಾಮುಕಸ್ತೂರಿ.' ೩. 'ನಾದಲೀಲೆ.'

ಇಂದಿನ ಬದುಕು ಹೇಗೆ ಸುಳಿದಾಡುತ್ತಿದೆ, ಇಂದಿನ ಜೀವನದ ಸಮಸ್ಯೆಗಳ ಬಗೆಗೆ ಕವಿಯ ಕರುಳು ಹೇಗೆ ಹೊರಳುತ್ತಿದೆ ಎಂಬುದನ್ನು ಕುರಿತು ಇಲ್ಲಿ ನಾಲ್ಕು ಮಾತು ಹೇಳಿದೆ; ದತ್ತರ ಅದಿತಿ-ಶಕ್ತಿಯನ್ನು ಕುರಿತು ನೆನೆದು ನುಡಿದಿದೆ. ಕವಿ ಬೇಂದ್ರೆಯವರ ಪರಿಚಯವನ್ನು ಮಾಡಿಕೊಡುವುದಾಗಲೀ, ಅವರ ಬೆಳೆಯುತ್ತಿರುವ ಸಮಗ್ರ ಕಾವ್ಯರಾಶಿಯ ವಿಶಾಲ ಪರಿಚಯವನ್ನು ಮಾಡಿಕೊಡುವುದಾಗಲೀ ಇಲ್ಲಿನ ಗುರಿಯಲ್ಲ.

ಸಖೀಗೀತವು 'ಗುರುದೇವ' ರವೀಂದ್ರರಿಗೆ ಕಾಣಕೆಯನ್ನು ಸಲ್ಲಿಸಿ ಮೊದಲಾಗುತ್ತದೆ. ಹೂಬೇಲಿಯ ಬಾಗಿಲ ಹೂವೇ ಮನಸ್ಸನ್ನು ಸೆರೆ ಹಿಡಿಯುತ್ತದೆ. ಭಾರತದ ಭಂಗವನ್ನು ಅರಿಯದವರಿಲ್ಲ; ಅಂತೆಯೇ ರವೀಂದ್ರರ ಸಾಹಿತ್ಯ ಸಂಪತ್ತನ್ನು ಸ್ಮರಿಸದ ಭಾರತ ಪುತ್ರನಿಲ್ಲ. ನುಡಿದು ಬೇಸತ್ತಾಗ ದುಡಿದುಡಿದು ಸತ್ತಾಗ—(ಈ ಅನುಪ್ರಾಸದ ಆರೋಹಣವೇ ಸಾಕು. ಬೇರೆ ಚೂರಿ ಏಕೆ ?)—ಜನಕ ಹಿಗ್ಗಿನ ಹಾಡ ನೀಡಾಂವ, ಗುರುದೇವ. ಸ್ವಾತಂತ್ರ್ಯದ ಹೋರಾಟದ ಉದ್ದಕ್ಕೂ ಬಳಲಿದ ಬೆಂಡಾದ ನಾಡ ಬದುಕಿಗೆ ರವೀಂದ್ರರ ಹಾಡು ತಾಯಿಯ ಇನಿದನಿಯಂತೆ ಪ್ರೋತ್ಸಾಹಕರವಾಗಿದ್ದು ಉಸಿರು ಕುಗ್ಗಿ ಇಂಗಿಹೋಗದಂತೆ ತಡೆದು ಸಲಹಿತು. ರವೀಂದ್ರರ ಕನಸು ಕೈಗೂಡಬಹುದಾದ ಕಾಲದಲ್ಲಿ, "ಹಾಡಿ ಹಣ್ಣಾದ ದುಡಿದು ಸಣ್ಣಾದ" ಆ ಕವಿ ಪುಂಗವರನ್ನು ಕಂಬನಿಯ ಅರ್ಘ್ಯದೊಂದಿಗೆ ನೆನೆಯಬೇಕು.

ಹೀಗೆ ನೆನೆಯುತ್ತಿರುವಾಗಲೇ,

ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್ ಎಂದು 'ತುಂಬಿ ಬಂದಿತ್ತು'; ಅದರ ಇಂದಿನ ಚೆಲುವಿನ ವರ್ಣನೆ ಹಾಗಿರಲಿ; ಕಾಲದ ಹಾಂಗೆ ಕಪ್ಪಗಿತ್ತ, ಸಾವಿನ್ಹಾಂಗ ತೆಪ್ಪಗಿತ್ತ, ಹದ್ದು ಬಂದು ಹಾವಿನ ಮೇಲೆ ಎರಗಿದಂತಿತ್ತ ಎನ್ನುವ ರುದ್ರ ಸೂಚನೆ ಮೈನಡುಗಿಸುತ್ತದೆ. ಭಯ ಸಂಚಾರವಿಲ್ಲದ ಸೌಂದರ್ಯಾನುಭವವೇ ಇಲ್ಲವೇನೋ ! 'ಪರಾಗ' ಮತ್ತೊಮ್ಮೆ ಭೃಂಗವನ್ನು ಆಹ್ವಾನಿಸುತ್ತದೆ. ಆ ದಾರಿಯಲ್ಲೇ ನಮ್ಮ ರಸಿಕ ಮಿತ್ರ 'ಹುಬ್ಬಳ್ಳಿಯಾಂವ' ಕೂಡಿಕೊಳ್ಳುತ್ತಾನೆ. ಮುಚ್ಚು ಮರೆಯೇಕೆ, ಇದೊಂದು ಹಾಡಿಗಾಗಿ ನಾವು ಬೇಂದ್ರೆಯವರಿಗೆ ಚಕ್ರಬಡ್ಡಿ

ಕೊಟ್ಟರೂ ಅನ್ಯಾಯವಲ್ಲ. ಇದರ ನಡೆ, ತಡೆ, ನಿಲುಗಡೆ, ಆಟ, ಆ ಹೈದನ ಮಾಟ, ಈ ಬೀರಿಯ ಪರದಾಟ—ಇವೆಲ್ಲ ಏಕಕಾಲದಲ್ಲಿ ನಮ್ಮನ್ನು ಅಡ್ಡಗಟ್ಟಿ ಬೆರಗುಮಾಡುತ್ತವೆ. ಸೆಟ್ಟರ ಮಗನಿಗೆ ಹೃದಯವನ್ನು ಮಾರಿ ಕೊಂಡ ಬಿಂಕಗಾರ್ತಿಯ ಕಾತರವನ್ನು ಮರೆಯುವುದು ಅಸಾಧ್ಯ. ಆ ಹೈದನ ಶೀರ್ವಿಯೇನು ?, 'ಭಾರಿ ಜರದ ವಾರಿ ರುಮ್ಮಾಲೇನು', ಅವನು ತುಂಬವಿಗಾಸೆ ತೀಡಿಕೋತ ಹುಬ್ಬು ಹಾರಿಸೋದೇನು ? ಮಾತಿಗೆ ನುಣುಚಿ ಕೊಂಡು ದಾಟ ಹೋದದ್ದೆಲ್ಲಿಗೆ? ದಿನಕ್ಕೊಬ್ಬಳು ಬಂಗಾರದವಳನ್ನು ಕಟ್ಟಿ ಕೊಂಡು ಮೆರೆಯುವ ಜರ್ಬುಗಾರನಿಗೆ ಆಡಿದ ಮಾತಿನ ಮೇಲೆ ಅಭಿಮಾ ನವೇ ಇಲ್ಲವೇನೋ! 'ಇನ್ನೂ ಯಾಕ ಬರಲಿಲ್ಲ' ಎಂದು ಪರಿತಪಿಸುವ ಹೆಣ್ಣಿನ ಬಗೆಗೆ ಸಹಾನುಭೂತಿಯನ್ನು ಸೂಚಿಸಲೇ ಬೇಕಾಗಿದೆ. ಈ ಹಾಡೇನು ಪುಸ್ತಕದ ಬದನೆಕಾಯಿ ಅಲ್ಲ; ಕಳ್ಳಪೇಟೆಯ ರಸಿಕ ಜೀವನದ ಒಂದು ಹಾಳೆ.

ಹಿಗ್ಗಿದಮೇಲೆ ಮನಸ್ಸನ್ನು ಕುಗ್ಗಿಸಲು ಬಂದಳೇನೋ ಈ 'ಪುಟ್ಟ ವಿಧವೆ.' ಈ ಕವನವನ್ನು ಓದುವಾಗ ಕೆಂಡದಮೇಲೆ ನಡೆಯುವುದರ ಅನುಭವ ಬರುತ್ತದೆ. ಯಾವ ಒಂದು ಧರ್ಮವನ್ನು ಪ್ರಾಚೀನವೆಂದು ಪವಿತ್ರತಮವೆಂದು ನಂಬಿ ನಮಸ್ಕರಿಸಿ, ಅದರ ಪಾದಧೂಳಿಯನ್ನು ತಲೆಯಲ್ಲಿ ಧರಿಸುತ್ತೇವೋ ಅದರ ಒಂದು ವ್ಯವಹಾರದ ಬೆನ್ನಿನಲ್ಲಿ ಚಿಗುರಿದ ಹಿಂಸೆ ಯನ್ನು ಕುರಿತು ಇಲ್ಲಿ ಕವಿ 'ಉರಿಗಾಳನ್ನು' ಬಿತ್ತಿದ್ದಾರೆ. ಪತಿಗೆ ಮೀಸ ಲಾಗಿದ್ದ ಸೌಂದರ್ಯವನ್ನು ಇನ್ನು ಮುಂದೆಲ್ಲಿ ಅಪವ್ಯಯ ಮಾಡಿಯಾಳೋ ಎನ್ನುವ ಧರ್ಮಭೀತಿಯಿಂದ ವಿಧವೆಗೆ ಸಮಾಜ ಮಾಡುತ್ತಿರುವ ಮರ್ಯಾದೆ ಯನ್ನು ಕುರಿತು ಇಲ್ಲಿ ಕರುಳು ಕೂಗಿದೆ. ಇಲ್ಲಿ ಬರುವ ವಿಧವೆ ವಯಸ್ಸಿ ನಲ್ಲಿ ಚಿಕ್ಕವಳು; ಆಸೆ ಇನ್ನೂ ಹೂವಾಗಿರುವಾಗಲೇ ಇವಳಿಗೆ ವಿಧವೆಯ ದುಃಸ್ಥಿತಿ ಸಂದಿತು. ತಲೆಭಾರ ಇಳಿದಿತ್ತು; ಅಂಗಾರ ಬೆಳೆದಿತ್ತು, ಮೈಯನ್ನು ಮುಚ್ಚಿತ್ತು ಕೆಂಪುಸೀರೆ! ಈಕೆ ಸೌಭಾಗ್ಯವತಿಯಾಗಿದ್ದ ಕಾಲದಲ್ಲಿ ಮಹ ರಾಯ ಗಂಡನೇ ಏನೇನು ಚಿತ್ರಹಿಂಸೆಯಿತ್ತು ಕಾಡಿದ್ದನೋ; ಆತ ದುರ್ದೈವದಿಂದ ಬಾಳ್ಮರೆಯಾದಮೇಲೆ ಹಿತೈಷಿಗಳೂ, ಧರ್ಮೋದ್ಧಾರಕರೂ ಸೇರಿ ಇವಳಿಗೆ ಶಾಶ್ವತ ರಕ್ಷಣೆಯನ್ನು ಶಾಸ್ತ್ರದ ಹೆಸರಿನಲ್ಲಿ ದಾನಮಾಡಿ

ದ್ದಾರೆ. ಆ ರಕ್ಷಣಾವ್ಯವಸ್ಥೆಯಿರಲಿ; ಮುದ್ರೆಯೊತ್ತುವ ಕಣ್ಣು, ಮೋರೆ ನೋಡಿದ್ದೇಕೆ? ಶ್ರೀ ಕೃಷ್ಣಾಯ ನಮಃ! ಸಮಸ್ಯೆಯನ್ನು ಬಿಡಿಸುವುದರ ಗೋಜಿಗೆ ಇಲ್ಲಿ ಕವಿ ಹೋಗಿಲ್ಲ; ರುದ್ರವಾಗಿ ಟೀಕಿಸಿ, ಸಮಾಜಸೇವೆಗಾಗಿ ನಡುಕಟ್ಟಿ ನಿಂತ ಮಹನೀಯರಿಗೆ ಬಿನ್ನವತ್ತಳೆಯನ್ನು ಸಿದ್ಧಮಾಡಿದ್ದಾರೆ.

ಇಲ್ಲಿ ಎಸಳು-ಎಸಳಾಗಿ ಬಿಡಿಸಿದ ರಸಕೃತಿ ಎಂದರೆ, ಚಿಗರಿಗಂಗಳ ಚೆಲುವೆ; ಅದನ್ನು ಕುರಿತು ದತ್ತರು ಹೀಗೆ ಹೇಳಿದ್ದಾರೆ: "ಚಿಗರಿಗಂಗಳ ಚೆಲುವೆ-ಭೂಮಿ ತಾಯಿ—ತಾನೂ ಕೂಡ, ಒಡವೆಯಲ್ಲ ಮಗನೇ! ನಾನು ಉಸಿರಿದ್ದೊಡಲು, ಜೀವಕೋಟಿಯ ತಾಯಿ, ಅದನ್ನು ಹಿಗ್ಗಾ ಮುಗ್ಗಾ ಎಳೆದು ಹಂಚಬಾರದಾಗಿ—ಹೇಳುತ್ತಾಳೆ." ಬಹು ಎಚ್ಚರದಿಂದ ಇಲ್ಲಿನ ಒಂದೊಂದು ಸಾಲಿನಲ್ಲೂ ಬರುವ ಭಾವವನ್ನು ಗ್ರಹಿಸಬೇಕು. ಭೂಮಿ ತಾಯಿ ಮಾತಾಡುತ್ತಿದ್ದಾಳೆ. ಕಿವಿಗೊಟ್ಟು ಕೇಳಬೇಕು.

ಇನ್ನು, ಸಖೀಗೀತ ಕಾವ್ಯವು ಈ ಸಂಗ್ರಹಕ್ಕೇ ಹೆಸರುತಂದಿದೆ. ಈ ಗೀತವನ್ನು ನನ್ನ ಜೀವನ ಕಥೆಯ ಹಂದರದ ಮೇಲೆ ಹಬ್ಬಬಿಟ್ಟದ್ದೇನೆ, ಎಂದು ಕವಿ ಸೂಚಿಸಿದ್ದಾರೆ. ಮೊದಲ ಮಾತಿನಲ್ಲಿ ಅವರು ಪ್ರಾಚ್ಯ—ಪಾಶ್ಚಾತ್ಯ ಪ್ರಣಯಾರಾಧನ ವಿಧಿಗಳನ್ನು ಕುರಿತು ಮಾಡಿರುವ ವಿಮರ್ಶೆಯನ್ನು ಹೇಗೋ ದಾಟಿ, 'ಸಖೀಗೀತದ' ರಸಾಸ್ವಾದನೆಗೆ ಎಷ್ಟು ಬೇಕೋ ಅಷ್ಟು ವಿವರಗಳನ್ನು ನೆನಪಿನಲ್ಲಿಟ್ಟುಕೊಂಡರೆ ಸಾಕೆನಿಸುತ್ತದೆ. ಇಲ್ಲಿ ಕವಿಯೇ ಕಾವ್ಯನಾಯಕನಾಗಿದ್ದಾನೆ; ಈ ಕಾವ್ಯ ಪೂರ್ಣ ಸಖೀಗೀತದ 'ಪೂರ್ವಾನುರಾಗ'ವೆನ್ನುವ ಪೂರ್ವಾರ್ಧ. ಈ ಗೀತವನ್ನು ಹೇಳಿ, ಹಾಡಿ, ಕೋಲು ಹಾಕಿ, ದಂಪತಿಗಳು ರಿಂಗಣಗುಣಿತ ಮಾಡಿದಾಗ ಅದರ ಸ್ವಾರಸ್ಯವು ಇನ್ನೂ ಚೆನ್ನಾಗಿ ತೋರುವುದು, ಎಂದು ಕವಿ ಆಸೆ ಹುಟ್ಟಿಸಿದ್ದಾರೆ. ವಿವಿಧ ಲಯಗಳಲ್ಲಿ, ಚಿತ್ರಾಲಂಕಾರಗಳಿಂದಲೂ, ಮಂಜುಳಧ್ವನಿತರಂಗಗಳಿಂದಲೂ ಮೈತುಂಬಿ ಮುಂದುವರಿಯುತ್ತ, ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ, ಎಂಬ ಪಲ್ಲವಿಯ ಸದ್ದಿನ ಸೆರಗನ್ನು ಬೀಸುವ ಈ ಗೀತದ ಸೊಬಗನ್ನು ಹಾಡದೆ ತಿಳಿಯುವುದು ಸಾಧ್ಯವಲ್ಲ. ಒಂದೋ ಎರಡೋ ಕಡೆ ಈ ಗೀತ ಶಿಥಿಲವಾಗಿ ಕಷ್ಟವಾಗಿರುವುದು ದಿಟವೇ.

'**ಮೂರ್ತಿ**'ಯೂ '**ಕಾಮಕಸ್ತೂರಿ**'ಯೂ ಕೂಡಿ ಇನ್ನೊಂದು

ಸಂಗ್ರಹವಾಗಿದೆ. 'ಕಾಮುಕಸ್ತೂರಿ'ಯಲ್ಲಿ ಗಮುಗಮಿಸುವ ಸವಿಗಂಪಿದ್ದು ಪ್ರೇಮ ಕಮಲಕ್ಕೆ ಆಸರೆಯಾದ ಕಾಮುಪಂಕದ ಸುದ್ದಿಗಳನ್ನು ಕುರಿತ ಕವನಗಳಿವೆ. ಬೇಂದ್ರೆಯವರು ನುಡಿದಿರುವಂತೆ ಇವೆಷ್ಟೋ ಏಕತಾರಿಯ ಜೊತೆಗೆ ಹೇಳಬೇಕಾದುವು. ಇಲ್ಲಿ ಚಿತ್ರಕವನಗಳೂ ಇವೆ. 'ಒಲುಮಿಾಗೆ ದಿನದಿನ ಜಾತ್ರಿಯೆನಿಸಿತ್ತ ಜನುಮುವು ' ಎನುವ ಹಿಗ್ಗಿನಿಂದ ಮೊದಲಾಗುವ 'ಜನಮುದ ಜಾತ್ರಿ'ಯೂ 'ನೆರೀತಾದ ಚಿಕ್ಕಿಗಳ ಜಾತ್ರಿ ಮುಗಿಲಾಗ' 'ದಿನದ ದೇವರ ಯಾತ್ರಿ ಕಣ್ಣ ಮಿಟಕದ ರಾತ್ರಿ' ಎಂದು ಮುಗಿತಾಯ ಹೊಂದುವ 'ಸಂಸಾರ' ಗೀತವೂ ತುಂಬ ಸುಂದರವಾದುವು.

'ಮೂರ್ತಿ'ಯನ್ನು ಕುರಿತು ಕವಿ ಮುನ್ನುಡಿದಿರುವ ಕವನ ಸಂದರ್ಭದಲ್ಲಿ 'ಮನನದ ಭವ್ಯತೆಗೆ ಆತ್ಮ ಹೆಚ್ಚಲ್ಲ; ಕಲ್ಲು ಕಡಮೆಯಲ್ಲ' ಎಂಬ ತತ್ತ್ವವನ್ನು ಹೂಡಿ 'ಎಲ್ಲರಿಗೂ ಪೂಜ್ಯರೆನಿಸುವ ಸಾಧುಗಳಿರುವಂತೆ, ಸಾಧುಗಳಿಗೂ ಪೂಜ್ಯ ಎನಿಸುವ ಪವಿತ್ರ ಪ್ರತಿಮೆಗಳಿವೆ, ಪ್ರತಿಮೆಯ ಕಲ್ಲಿನಲ್ಲಿ ಯಾವುದೋ ಭಕ್ತನ ಅಂತಃಕರಣದಲ್ಲಿ ಶಿಲ್ಪಿಯ ಉಳಿಯಲ್ಲಿ ಮೂಡಿ ಬರುವುದುಂಟು. ಒಳ್ಳೆಯ ಕಲ್ಲಿಗೆ ಒಳ್ಳೆಯ ಮೂರ್ತಿಯಾಗುವ ವೈಗುಣವಿರುವಂತೆ ಅತುಲನೀಯ ಅಲೌಕಿಕತೆಯನ್ನು ಕಲಾರೇಖೆಯಲ್ಲಿ ಕಾಣುವ ಭಕ್ತಿಯ ವ್ಯಂಗ್ಯದೃಷ್ಟಿ ಮಾನವನ ಹೃದಯಕ್ಕಿದೆ' ಎಂದು ಸೂಕ್ಷ್ಮಭಾವಗಳನ್ನು ಗುರುತು ಹಾಕಿದ್ದಾರೆ. 'ಒಂದು ಕಲ್ಲಿನ ಗುಣ. ಒಂದು ಅರಸುಮನಸಿನ ಗುಣ, ಒಂದು ಶಿಲ್ಪಿಯ ಸಂಕಲ್ಪದ ಗುಣ, ಒಂದು ಜನತೆಯ ಭಾವುಕತೆಯ ಗುಣ —ಹೀಗೆ ರಸದ ಹನಿಗೂಡಿ ಹಳ್ಳವಾದದ್ದು, ಆಮೇಲೆ ಜನರ ಲೌಕಿಕತೆ, ಪೂಜಾರಿಗಳ ವಿಷಯ ಲೋಲುಪತೆ, ಮೂರ್ತಿ ಭಂಜಕರ ಧನದಾಶೆ ಇವುಗಳ ಮುಪ್ಪುರಿ ರಸವನ್ನು ಅಚ್ಚಿಸಿಬಿಡಲು, ಈಶ ಸಂಕಲ್ಪದಂತೆ ಕಲ್ಲಾಗಿ ಜಪಿಸಿ, ಮೂರ್ತಿಯಾಗಿ ಬೆಳೆದು ಮತ್ತೆ ಕಲ್ಲಾಗಿ ಉಳಿದ ಕೀರ್ತಿಶೇಷ ಮೂರ್ತಿಜೀವನದಲ್ಲಿ' ತಾವು ಸೂಕ್ಷ್ಮ ದೃಷ್ಟಿಯಿಂದ ಕಂಡ 'ಮೃತ್ಯುವನ್ನು ದಾಟಿದ ಅಮರತೆ'ಯನ್ನು ಕವಿ ಇಲ್ಲಿ ಆವೇಶದಿಂದ ಸಾರಿದ್ದಾರೆ. ಮುಂಬಲವಾಗಿರುವ 'ಪ್ರಳಯ ಸೃಷ್ಟಿ'ಯ ಆವರಣ ಆಶ್ಚರ್ಯಕರವಾದುದು. 'ಬಾಳಿನಲ್ಲಿ' ಕಲ್ಲನೆಲೆ ಕಾಣುತ್ತದೆ; ಅರಸು ಕನಸಿನಲ್ಲಿ ಕಲ್ಲಿನ ಬಗೆಗೆ ಒಲುಮೆ ನೆಲಸುತ್ತದೆ; ಅರಸನಾಜ್ಞೆ ತಲೆಯಲಿರಿಸಿ

'ಶಿಲ್ಪಿ' ಕಲ್ಲಿಗೆ ಮೂರ್ತಿ-ರೂಪವನ್ನು ಕೊಡುತ್ತಾನೆ; 'ಮೂರ್ತಿ' ನಾಟಿ ನಿಂತಿತು: 'ಕೀರ್ತಿ' ಹಬ್ಬಿತು; ಕಡೆಗೆ ಮುಪ್ಪೆರಗಿ ಪೂಜ್ಯವಸ್ತು ಶೂನ್ಯ ವಾಯಿತು, ದೇವಸನ್ನಿಧಿಯೇ ಹೀಗೆ ಲೌಕಿಕಾಡಂಬರದ ಒಡಲನೀಸುವ ತಂತ್ರಗಳ ರಂಗಭೂಮಿಯಾಯಿತು.

'ಮೂರ್ತಿಗಿಂತ ಮುಂದೆ ಇದರ
ಹೊನ್ನ ಕೀರ್ತಿ ಹಬ್ಬಿ ಸುಲಿಗೆ
ಯುವರ ಸೆಳೆಯುತಿತ್ತು; ಅಲಂ-
ಕಾರ ಭಾರವನ್ನು ಹೊರುವ
ವಸ್ತುವಾಯ್ತು ಮೂರ್ತಿ—ಹೀಗಾಗಲು

ಕವಿ ರೋಸಿ ಗರ್ಜಿಸಿದ್ದಾರೆ :—

ಕೊಡತಿಯೊಡೆಯ : ಹೊನ್ನಸೆರೆಯ
ಬಿಡಿಸಬಾರೊ ಮೂರ್ತಿಗೆ
ಮುಕ್ತಶಿಲೆಯು ಇರಲಿ ನೆಲೆಯು
ನಾಮ ಶೇಷ ಕೀರ್ತಿಗೆ.

ಟೀಕೆ ಟಿಪ್ಪಣಿಗಳ ಸಹಾಯವಿಲ್ಲದೆ 'ಮೂರ್ತಿ'ಯ ಅಂತರಂಗವನ್ನು ಅರಿಯಬಹುದು. ಬಾಯಿಬಿಟ್ಟು ಬಣ್ಣ ಕೆಡಸಿಕೊಳ್ಳುವ ಕೆಲಸಕ್ಕೇ ಕೈ ಹಾಕಬಾರದು. ಎಳ್ಳಷ್ಟೂ ಬೇಸರಕ್ಕೆ ಎಡೆಗೊಡದಂತೆ ಇಕ್ಕಟ್ಟಾದ ಮೂರು ಮಾತ್ರೆಯ ಗಣವನ್ನು ಹೀಗೆ ದೀರ್ಘವಾಗಿ ದಕ್ಷತೆಯಿಂದ ನಡಸಿದ ವರಕವಿಗೆ ನಮ್ಮ ನಮಸ್ಕಾರಗಳು.

'ನಾದಲೀಲೆ'ಯಲ್ಲಿ ಬೇಂದ್ರೆಯವರು ೫೦ ಭಾವಗೀತಗಳನ್ನು—ಗೀತಾದೀಪಗಳನ್ನು —ತೇಲಿಬಿಟ್ಟಿದ್ದಾರೆ, 'ಮುಗಿಲ ಬಾಯ ಗಾಳಿಕೊಳಲ ಬೆಳಕ ಹಾಡ ಬೀರಿ' ನಾದಲೀಲೆ ಸ್ವಾಗತಿಸುತ್ತಿದೆ. 'ಶಕುನದ ಹಕ್ಕಿ' ಶುಭ ನುಡಿಯುತ್ತಿದೆ. 'ಏಳು ಕನ್ನಿಕೆಯರು' ಬಂದು ಏಳು ಏಳೋ ಎಂದಿದ್ದಾರೆ. 'ನುಲ್ಲಾಡದ ಗಿಣಿ' ಬಟ್ಟಗಣ್ಣ ಬಿಟ್ಟುಬಿಟ್ಟು ನೋಡುತಲಿದೆ. 'ಎದೆಯ ಒಕ್ಕಲಿಗ, ಕರುಣದ ಕಸಬನ್ನು ತೋರೋ' ಎಂದು ಕವಿ ಕೋರುತ್ತಿದ್ದಾರೆ. 'ನಿರ್ಭಯ'ದಲ್ಲಿ ಕವಿಯ ಬಯಕೆ ಸೆರೆ ಬಿಡುತ್ತದೆ :—

ಬಿರುಗಾಳಿ ಕಡಲಿನೊಡ ಸರಸವಾಡುವ ಹಾಗೆ
ತೆರೆಯು ಕುದುರೆಯ ಸಾಲ ತರುಬಬೇಕೆನಿಸಿ
ಮೊರೆವ ಸಾಗರ ಸಿಂಹ ತೆರಳುತಿರೆ ತಾ ಗವಿಗೆ
ಕೊರಳ ಕೂದಲ ಹಿಡಿಯೆ ಜೀವ ತುಡಿಯುವುದು

ಈ ಭಾವ ಇಂದಿನ ಯುವಕರ ಧೀರೋತ್ಸಾಹಗಳ ಪ್ರತಿನಿಧಿಯಾಗಿದೆ. 'ಯಾರಿಗೂ ಹೇಳೋಣು ಬ್ಯಾಡಾ' ಎಂಬುದರ ಸುದ್ದಿಯನ್ನು ಯಾರಿಗೂ ಹೇಳಬಾರದು. 'ಮನುವಿನ ಮಕ್ಕಳ' ಪಾಡನ್ನು ನೆನೆಯುವಾಗ ಏಟು ಎಲ್ಲಿಂದಲೋ ಬಂದು ನಮ್ಮ ಬೆನ್ನಮೇಲೆಯೇ ಬೀಳುತ್ತದೆ.

ದುಡಿವರ ಉಸಿರಿಗೆ ದಣಿವಿಲ್ಲ
ಕೊನೆಗೂ ತಣಿವಿಲ್ಲ.
ಕೂಸುಗಳಾಟಕೆ ಕಳೆಯಿಲ್ಲ
ಭೂಮಿಗೆ ಬೆಳೆಯಿಲ್ಲ.
ಹೆಣ್ಣಿನ ಕಂಬನಿ ತೊಡೆದಿಲ್ಲ
ಗಂಡಿಗೆ ಬಿಡುವಿಲ್ಲ
ಹಸಿವಿನ ಕೂಗಿನ ಕಹಳೆಯ ಕೇಳಿ
ಜೀವವು ನಡುಗುವುದು.

ಇನ್ನು ದೇವರೇ ಗತಿ ಎನ್ನೋಣವೇ? ಅವನ

ಹತ್ತವತಾರದ ಹೇಡಿತನಕ್ಕೆ
ಮನ ಗೊಣಗುಟ್ಟುವದು :

ಹೀಗೆ ಕಡೆ ತಡೆ ಏನೂ ಕಾಣಿಸದಿದೆ. ಒಂದೊಂದು ಮಾತೂ ಹಲ್ಲುಮಸೆದು ಮುನ್ನುಗ್ಗುತ್ತದೆ. 'ಅನ್ನಾವತಾರವೂ' ಕಾದ ಕಬ್ಬಿಣ ಪ್ರವಾಹದಂತೆಯೇ ಇದೆ.

ಪ್ರಾಣದೇವನು ನಿಷ್ಪ್ರಾಣನಾಗುತ ಅಂದ
ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೋ
ಇನ್ನೂ ಬರಲಿಲ್ಲಾ.

ಅನ್ನದೇವರು ರಥಾರೂಢನಾಗಿ ಬಂದಾನೆಂದು ಲಕ್ಷ ಲಕ್ಷ ಜತೆ ಕಣ್ಣು ಕಾದಿವೆ. ಅನ್ನದ ಮಾತು ಹಾಗಾದರೆ, ಚಿನ್ನದ ಮಾತು ಹೀಗೆ ಬಂದಿದೆ.

'ಕುರುಡು ಕಾಂಚಾಣಾ.' ಧನಿಕ ಮಂಡಳಿಗಳಲ್ಲಿ ಈ ಹಾಡನ್ನು ಒಂದಲ್ಲ ನೂರುಸಲ ಲಯವನ್ನು ಹಿಡಿದು ಹಾಡಿದಲ್ಲಿ ಅವರಿಗೂ ದುಡ್ಡಿನ ಮೇಲಿನ ಅಭಿಮಾನ ಅಷ್ಟೋ ಇಷ್ಟೋ ಕಡಮೆಯಾದೀತು. ಕುರುಡು ಕಾಂಚಾಣದ ಭಯಂಕರ ಸ್ವರೂಪವನ್ನು ಗಮನಿಸಿದರೆ ಅದರ ಅಲಂಕಾರಗಳನ್ನು ನೆನೆದರೆ, ಅದರ ಕುಣಿತಗಳನ್ನು ನೋಡಿದರೆ ಅದು 'ಅಂಗಾತ ಬಿದ್ದಾಗ ಹೆಗಲಲ್ಲಿ ಎತ್ತೊ' ಎನ್ನುವಷ್ಟು ರೋಷ ಬರುತ್ತಿದೆ. ಕಾಂಚಾಣ ಹಲಕೆಲರ ಸ್ವತ್ತಾಗಿ; ಉಳಿದವರು ಅದರ ಸ್ನೇಹವಿಲ್ಲದೆ ನರಳುತ್ತಿದ್ದಾರೆ. ದುಡ್ಡು ಬೇಡ ಎಂದಲ್ಲ; ಅದರ ಹಂಚಿಕೆಯ ವಿಷಮತೆಯನ್ನು ಮಾತ್ರ ಖಂಡಿಸಿದೆ.

'ಮುಂದೆ ಸಚ್ಚಿದಾನಂದ'ದ ಪ್ರಾಸಾನುಪ್ರಾಸಗಳ ವ್ಯೂಹವನ್ನೂ ನೋಡಬಹುದು; ಹಾಗೆ ಮಾತು ನುಡಿಯುವುದು ಅವರಿಗೆ ಸಹಜವಾಗಿದೆ; ಉಳಿದವರಿಗೆ ಸಾಧ್ಯವಿಲ್ಲ. 'ಹೆಣದ ಹಿಂದೆ' ಹತ್ತು ಹೆಜ್ಜೆ ನಡೆದು 'ಭೂಮಿ ತಾಯಿ ಏಳಲಿಹಳು ತನ್ನ ದಿವ್ಯಲೀಲೆಗೆ' ಎಂದು ಕವಿ ಏಕೆ ಹೇಳಿದ್ದಾರೆ ಎಂಬುದನ್ನೂ ಅರಿಯಬಹುದು. ಆದರೆ ಬೆಳುದಿಂಗಳ ಹಾಡಿನ ಮಾಯೆಯನ್ನು ಅರಿಯುವುದಕ್ಕೆ ನಾವು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳದಿದ್ದರೆ ನಮಗೆ ಸೋಲು ಖಂಡಿತ. ಕನ್ನಡಿಯೋ ನೀರಿನ ಕೊಳವೋ ನೋಡಿ ಕಾಲಿಡುವುದು ಕ್ಷೇಮ. ಕವಿಯ ಮನಸ್ಸು ಎಷ್ಟು ಸೂಕ್ಷ್ಮವಾಗಿ ಸಂಚರಿಸಿ ಅಮಿತ ಸೌಂದರ್ಯವನ್ನು ಸೆರೆ ಹಿಡಿದಿದೆ ಎಂಬುದನ್ನು ಅನುಭವಿಸಿ ಹೇಳಬೇಕು. ಮನಸ್ಸು ಈ ಗೀತದ ಮಹಿಮೆಯಿಂದ ವಿರಮಿಸುವ ಮುನ್ನವೇ "ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ." ಈ ಭಾವಗೀತ ನಕ್ಷತ್ರಗಳನ್ನು ಮೆಟ್ಟಿದ ರತ್ನಗಂಬಳಿಯಂತೆ ಐಶ್ವರ್ಯಮಯವಾಗಿದೆ. ಅದೇ 'ಮಾತು ಮಾತು ಮಥಿಸಿ ಬಂದ ನಾದದ ನವನೀತ'ವನ್ನು ನಾವು 'ಕನ್ನಡ ಕಂದವ್ವನ ಲಾಲಿ'ಯಲ್ಲಿ ಕಣ್-ದಣಿಯ ನೋಡುತ್ತೇವೆ.

ನಿನ್ನ ತಳಿ ಬಳೆಯಲಾ ಹಳ್ಳಿ ಹಳ್ಳಿಗೆ ಕರಿಕೆ-ಕಳ್ಳಿಯೊಲು
ಕಂದ ಜೋ ಜೋ
ನಿನ್ನ ಹೊಳೆ ಹರಿಯಲೌ ಕೊಳ್ಳ ಕೊಳ್ಳಗಳಲ್ಲಿ ತಾವರೆಯ
ಬಳ್ಳಿ ಜೋ ಜೋ

ಎನ್ನುವ ನಾಲ್ಕು ಸಾಲುಗಳನ್ನು ಓದುವಾಗ 'ಶ್ರೀ' ಯವರ ಅಚ್ಚಗನ್ನಡ ಶೈಲಿಯ ನೆನಪು ಬರುತ್ತದೆ.

'ಮೊದಲಗಿತ್ತಿ'ಯ ಕಲ್ಪನೆ ಚಿರನೂತನವಾದುದು; ಆಗುಹೋಗುಗಳನ್ನೆಲ್ಲ ಮೀರಿ, ಈ ನೆಲವೆಣ್ಣು ಇನ್ನೂ ಮೊದಲಗಿತ್ತಿಯಂತೆಯೇ ಮೆರೆಯುತ್ತಿದಾಳೆ. 'ಎಂದು ಮಂಗಲ ನಿನ್ನ ದೇವಗರ್ಭಕೆ?' ಎಂದು ಕವಿ ಕೇಳಿದ್ದಾರೆ. ಅವರೇ ತಿಳಿದು ಹೇಳಬೇಕು!

ಈ ಸಂಗ್ರಹದಲ್ಲೆಲ್ಲ ತನ್ನದೇ ಆದ ನೆಲೆಯನ್ನು ಆರಿಸಿಕೊಂಡು, ಮೂರ್ತಿ ಚಿಕ್ಕದಾದರೂ ಅಖಂಡವಾಗಿ, ಒಂದು ಖಂಡದ ಐಶ್ವರ್ಯವನ್ನು ತುಂಬಿಕೊಂಡು ಬೆಳಗುತ್ತಿದ್ದರೂ ಗದ್ದಲವಿಲ್ಲದೆ ಎಲ್ಲರ ಹೃದಯವನ್ನೂ ಸೂರೆಗೊಳ್ಳುವ ಕವನವೆಂದರೆ 'ನಾನು ಬಡವಿ' ಎಂಬುದು. ಇದನ್ನು ವಿಮರ್ಶಿಸುವಾಗ ನಾವು ಪ್ರೇಮ ಸಂದೇಶವನ್ನೇ ಸ್ವಾಗತಿಸುತ್ತೇವೆ. 'ಆತ ಬಡವ, ತಾನು ಬಡವಿ'ಯೆಂಬುದನ್ನು ಆಕೆ ಮರೆತಿದ್ದಾಳೆ; ಅನುಕೂಲ ದಾಂಪತ್ಯದ ಪ್ರೇಮ ಸೌಭಾಗ್ಯವೇ ಅವರಿಗೆ ಸಕಲ ಸೌಭಾಗ್ಯವಾಗಿದೆ. ಇದರ ರಹಸ್ಯವನ್ನರಿಯದವರಿಗೆ ಇದರಲ್ಲಿ ನಂಬಿಕೆ ಬರಲಾರದು; ಅರಿತವರಿಗೆ ಬಂಗಾರದ ರೋಗದಿಂದ ಅಷ್ಟಾಗಿ ಭಯವಿಲ್ಲ. ಒಲವೆ ಬದುಕೊಗಿರುವಾಗ ಬದುಕಿಗೆ ಚಿಂತೆಯೇನು? ಹೀಗೆ ಮಾತಿಗೂ ಸಂಗತಿಗೂ ಅನುಕೂಲದಾಂಪತ್ಯ ಒದಗಿದ್ದು ಬೇಂದ್ರೆಯವರ ಭಾಗ್ಯ.

ಬೇಂದ್ರೆಯವರು ಭಾಗ್ಯಶಾಲಿಗಳು: ನಾಡ ಹಾಡಿನ ಜಾಡನ್ನರಿತವರು. ಕನ್ನಡ ಸಹಜವಾದ ಶೈಲಿಯಲ್ಲಿ ಅವರು ತೆರೆಯುತ್ತಿರುವ ಹೊಸ ಹೊಸ ನಾದಲೋಕಗಳಲ್ಲಿ ಇಂದಿನ ಬದುಕು ತನ್ನ ಸುಖವನ್ನೂ ದುಃಖವನ್ನೂ ಹಾಡಿ ತೋಡಿಕೊಳ್ಳುತ್ತಿದೆ. ದುಃಖ ಬರಿಯ ಗೋಳಾಗದೆ ಅಮರ ಕಾವ್ಯವಾಗಿದೆ; ಸುಖ ಬೆಂಡಾಗಿ ತೇಲದೆ ದುಂಡುಮುತ್ತಾಗಿ ಕನ್ನಡದ ಸಂಪತ್ತನ್ನು ಹೆಚ್ಚಿಸುತ್ತಿದೆ. ಎಚ್ಚತ್ತ ಜನ ಬೇಂದ್ರೆಯವರಿಗೆ ಕಾಣಿಕೆಯನ್ನು ಸಲ್ಲಿಸುತ್ತ ಬೇಂದ್ರೆ ಸಾಹಿತ್ಯದ ಬೆಳಕು ಕನ್ನಡ ನಾಡಿನ ಹಳ್ಳಿ ಹಳ್ಳಿಗೂ ಹಬ್ಬಲೆಂದು ಹರಸುತ್ತಿದಾರೆ.

' ಕುವೆಂಪು ' ಅವರ ಕೆಲವು ಕೃತಿಗಳು

ಶ್ರೀಮಾನ್ ಕೆ. ವಿ. ಪುಟ್ಟಪ್ಪನವರನ್ನು ನಾನು ನೋಡಿದ್ದೇನೆ. ಇವರೊಂದಿಗೆ ಮಾತಾಡಿದ್ದೇನೆ. ಇವರ ಧ್ವನಿಗೆ ಬೆರಗಾಗಿದ್ದೇನೆ. ಇವರ ನೋಟದಲ್ಲಿ ಗೆಲವಿದೆ. ನನಗೂ ಇವರ ಕವಿತೆಗೂ ಹದಿಮೂರು ವರುಷಗಳ ಸ್ನೇಹ. ಒಳ್ಳೆಯ ಕೃತಿಗಳಿಂದ ಪಡೆಯಬಹುದಾದಷ್ಟು ಸಂತೋಷವನ್ನು ನಾನಿವರ ಕೃತಿಗಳಿಂದ ಪಡೆದಿದ್ದೇನೆ.

" ಕುವೆಂಪು " ಅವರ ಪರಿಚಯವನ್ನು ಮಾಡಿಕೊಡುವ ಭಾರ ಅವರ ಕೃತಿಗಳಿಗಿರಲಿ; ಇಲ್ಲಿ ನಾನವರ ಹದಿನಾಲ್ಕು ಪುಸ್ತಕಗಳಲ್ಲಿ ಕಂಡ ಕೆಲವು ಮುಖ್ಯ ಸಂಗತಿಗಳನ್ನು ಮಾತ್ರ ಗುರುತುಹಾಕಿದ್ದೇನೆ; ಇಕ್ಕಟ್ಟಾದ ಚೌಕಟ್ಟಿನಲ್ಲಿ ಸಿಕ್ಕಿದ್ದೇನೆ. ಮೂರು ಪುಟಗಳಲ್ಲಿ ವರ್ಣಿಸಬಹುದಾದ್ದನ್ನು ಮೂರು ಸಾಲಿನಲ್ಲಿ ಹೇಳಿ ಮುಗಿಸಬೇಕಾಗಿದೆ. ಇಲ್ಲಿ ಬಹುಶಃ ಈ ಕೃತಿಗಳ ಒಟ್ಟು ನೋಟದ ಒಂದು ತೆಳುವಾದ ಪರಿಚಯ ಆದೀತು, ಅಷ್ಟೆ. ಇಷ್ಟರಿಂದಲೆ ಅವರ ಕವಿತಾವೈಭವದ ಸಮಗ್ರ ಪರಿಚಯವಾಗಲಾರದೆಂದು ನನ್ನ ಎಣಿಕೆ.

' ಕುವೆಂಪು ' ಅವರ ಕವಿತೆ ಒಂದೊಂದು ಸಲ ಹತ್ತಿರದಲ್ಲಿ ಅರಳಿದ ಹೂವಿನಂತೆ, ಇನ್ನೊಂದು ಸಲ ಎತ್ತರದಲ್ಲಿ ತೂಗುವ ಎಳನೀರ ಗೊಂಚಲಂತೆ ನಮ್ಮನ್ನು ಆಹ್ವಾನಿಸುತ್ತದೆ. ಏಕಗ್ರಾಹಿಗೆ ಇಲ್ಲಿ ಸ್ವಾಗತವಿಲ್ಲ. ಅಲ್ಲದೆ, ಈ ಕೃತಿಗಳ ಬಗೆ ನಡೆ ನುಡಿ ನೋಟಗಳ ವಿವಿಧತೆಯನ್ನೂ, ಹಲವಾರು ನೆಲೆಗಳ ಎತ್ತರ ಮಟ್ಟಗಳನ್ನೂ ಅರಿತವರಿಗೆ ಇವುಗಳ ಹೃದಯದಲ್ಲಿ ನೆಲಸಿ ನಿರ್ದೇಶಿಸುತ್ತಿರುವ ವ್ಯಕ್ತಿತ್ವ ಒಬ್ಬ ಕವಿಯದೇ ಎನ್ನುವುದು ಕಷ್ಟವಾಗುತ್ತದೆ.

ಇವರ ಶೈಲಿಯದೇ ಒಂದು ಚರಿತ್ರೆ. ಒಂದು ಕಾಲದಲ್ಲಿ ಅದು ದೇವರ ಪೆಪ್ಪರಮಿಂಟಿನಂತೆ ಪುಟ್ಟಮಕ್ಕಳ ಬಾಯಲ್ಲೂ ತಟ್ಟನೆ ಕರಗುತ್ತಿತ್ತು. ನಡುಗಾಲದಲ್ಲಿ ಅದು ತಾವರೆಯ ತೇರಾಯಿತು, ಕನಕ ರಥವಾಯಿತು. ಈಗ ಅಲ್ಲಿ

" ಪರ್ವತಗಳೆ ಪದಗಳಂತೆ
ಗಾನಗೊಂಡು ಗೇಯಮಾಗೆ
ನುಗ್ಗುತಿಹವು ವೇಗದಿ ! "

ಊಹೆಗೆ ಬಿಡಬಹುದಾದ್ದನ್ನೂ ಆಡಿ ಮುಗಿಸುವುದು ಇವರ ರೀತಿ. ಇಲ್ಲಿ ಬರುವ ಕಷ್ಟ ಕವಿತೆಯದಲ್ಲ; ಭಾಷೆಯದು.

ಕವಿತೆ

'ಕುವೆಂಪು' ಅವರು ಮುಖ್ಯವಾಗಿ ಕವಿಗಳು ; **'ಕೊಳಲು'** ಇದನ್ನು ನಿರ್ಧರಿಸಿದೆ. ಮಲೆನಾಡ ಚೆಲುವಿನಲ್ಲಿ ಕಣ್ತೆರೆದ ಕವಿಯ ಮನಸ್ಸು ತುಂಬ ಚಟುವಟಿಕೆಯಿಂದ ಚತುರತೆಯಿಂದ ಕಾವ್ಯವನ್ನು ಆರಂಭಮಾಡಿದೆ ; ಇದರ ಕೇಕೆ ಕನ್ನಡದ ನಾಡ ತುಂಬ ಹರಡಿದೆ. ಕೊಳಲಿನ ಸರಳತೆಯನ್ನೂ ಭರವಸೆಯನ್ನೂ ಕಂಡು ಶ್ರೀಯವರು ಕವಿಯನ್ನು ಹರಸಿದ್ದಾರೆ. ಒಲಿದು ಬಂದ ಮಾತಿನಲ್ಲಿ ಹೃದಯದಿಂದ ಬಂದ ಹಾಡು ಮನೆ ಮಾಡಿ ನೆಲಸಿದೆ.

ಈ ಕನ್ನಡದ ಇಂಪನ್ನು ಕೇಳಿ,—

'ತಾಯೇ ತುಂಗೆಯೆ ಸಿರಿ ಮಲೆನಾಡಿನ
ಪಚ್ಚೆಯ ಹಸುರಿನ ನೋಟಗಳೆ
ಬನಗಳ ಹೂಗಳ ಸೊಬಗನು ಮಾರುವ
ಚೆಲುವಿನ ಹೊಲಬಿಗ ಬಾಲೆಯರೆ . . . .

ಮತ್ತೆ ಈ 'ಮಿಣುಕು ಹುಳು'ಗಳ ಹೊಸ ಛಂದಸ್ಸಿನ ಹೆಜ್ಜೆಯನ್ನನುಸರಿಸಿ ಕೂಡುವ ಚೆದುರುವ ಚೆಲುವಿನ ಹಸೆಗಳನ್ನು ನೋಡಿ,—

ಮೇರೆಯೆ ಇಲ್ಲದ ಕತ್ತಲ ಕಡಲೊಳು
ಮಿಣಕಿ ಮಿಣಕಿ
ಮಿಂಚಿನ ಹನಿಗಳ ಮಳೆಯಂತೆ
ಹೊನ್ನೆಯ ಹುಳುಗಳು ಕತ್ತಲ ಕಡಲೊಳು
ಹೊಳೆದು ಅಳಿದು
ಅಳಿದು ಹೊಳೆದು
ಕುಸುಮಿತ ಮಿಂಚಿನ ಲತೆಯಂತೆ
ಉದುರುವ ಸುಮುಗಳ ತೆರದಿಂದ
ಗಡಿಪಾರಾದುಡುಗಣ ದಳದಂತೆ.
ಹೊಳೆದುದು ಹೊನ್ನೆಯ ಹುಳುಗಳ ಸಂತೆ.

ಬೇಸಾಯಗಾರರನ್ನು ಕವಿ 'ನೇಗಿಲ ಯೋಗಿ' ಎಂದು ಕರೆದಿದ್ದಾರೆ.

ಲೋಕಕ್ಕೆ ಅನ್ನವನೀಯುವವನು ಯೋಗಿಯಾಗಲಿ, ಭೋಗಿಯಾಗಲಿ, ಅಗ್ರಪೂಜೆಗೆ ಅರ್ಹನಾಗುತ್ತಾನೆ. ನಾಡ ಜೀವನದ ಎಲ್ಲ ವಲಯಗಳಲ್ಲೂ ಯೋಗಿಗಳು ವಿರಳವಾಗುತ್ತಿರುವ ಈ ಕಾಲದಲ್ಲಿ ಯೋಗದ ಅರ್ಥವೇ ಬದಲಾಯಿಸುತ್ತಿದೆ. ಆದರ್ಶಯೋಗಿಗಳ ಮಾತು ಹಾಗಿರಲಿ ;ಯಾವ ಒಂದು ಯೋಗವನ್ನಾಗಲಿ ಅದೊಂದನ್ನೇ ನಂಬಿ ಅವಲಂಬಿಸಿದ ಬದುಕು ಅಪೂರ್ಣವಾದೀತು. ಅಲ್ಲದೆ, ಈ ಬದುಕು ಚೆಲುವಾಗಿ ಶಕ್ತವಾಗಿ ಅಣಿಯಾಗಿರಲೆಂದು ಬಯಸಿ ಯಾರು ಯಾರು ತಮ್ಮ ತಮ್ಮ ಪ್ರೀತಿಯ ಕಾಣಿಕೆಗಳನ್ನು ಸಲ್ಲಿಸುತ್ತಿದ್ದಾರೆಯೋ ಅವರೆಲ್ಲ ತಮ್ಮ ತಮ್ಮ ವಲಯಗಳಲ್ಲಿ ಯೋಗಿಗಳೇ. ಇಂದಿನ ಭಾರತದ ಹಸಿದ ಕಣ್ಣು ನೇಗಿಲ ಯೋಗಿಯ ಕಡೆ ಹರಿದಿದೆ. ಧರ್ಮ ಇದೆ ನೇಗಿಲ ಮೇಲೆ; ನೆಲ ಇದೆ ಬೇಕಾದ ಹಾಗೆ. ಈ ಯೋಗವನ್ನು ಚುರುಕಾಗಿ ಸಾಧಿಸಿದರೆ ನಾಡಿಗೆ ಸಮೃದ್ಧಿ; ನೇಗಿಲ ಯೋಗಿಗೆ ಇಡಿಯ ನಾಡೆ ಕೃತಜ್ಞತೆಯ ಹಣತೆಯಾಗುತ್ತದೆ.

ಸುಗ್ಗಿ ಬರಬೇಕು, ಬೇಗ ಬೇಗ ಬರಬೇಕು. 'ಸುಗ್ಗಿ ಬರುತಿದೆ' ಹೇಗೆ? ಅದರ ಹೆಜ್ಜೆ ನೆಲ ಬಾನ್ಗಳಲ್ಲಿ ಹೊಳೆಯುತ್ತಿದೆ; ಗೆಜ್ಜೆಯ ದನಿ ಜೀವನ ಸಂತೋಷಗಳಲ್ಲಿ ಹೊಳಲುಗೊಡುತ್ತಿದೆ.

'ಅಡಿಯ ಗೆಜ್ಜೆ ಸಡುಗೆ ಹೆಜ್ಜೆಯಿಡುತ ಸುಗ್ಗಿ ಬರುವಳು'

ಎನ್ನುವ ಒಂದು ಸಾಲಿನಲ್ಲಿ ಕನ್ನಡದ ಹೆಜ್ಜೆಗಳು ಎದೆಯ ಮೇಲೆ ಹಾದು ಹೋಗುತ್ತವೆ.

ಚೆಲುವು ಇಂಪು ಸಂತೋಷ ಒಂದು ಕಾಲದಲ್ಲಿ ಕವಿ ಹೃದಯದಿಂದ ಮಾಯವಾಗುತ್ತವೆ; ಶಕ್ತಿ ಗರ್ಜನೆ ಅಶಾಂತಿ ತುಂಬಿಕೊಳ್ಳುತ್ತವೆ. ಕೊಳಲು ಕೈ ಜಾರುತ್ತದೆ; '**ಪಾಂಚಜನ್ಯ**' ತುಟಿಗೆ ಬರುತ್ತದೆ. ನಾಡಿನ ಪಾಡೆಲ್ಲ ಕವಿಯೊಡಲಿನಲ್ಲಿ ಕುದಿದು ಮೇಲೊತ್ತಿದ ಬಿಸಿಯುಸಿರೆ ಶಂಖದಲ್ಲಿ ನುಗ್ಗಿ ರುದ್ರಧ್ವಾನ ತರಂಗಗಳನ್ನು ಹರಡುತ್ತದೆ. ಇದು ಕಾಲದೇಶಗಳ ಆಡಳಿತದ ಮನೋಧರ್ಮ. ಹಾಡು ಸಂತೋಷದಿಂದಲೂ ಹುಟ್ಟುತ್ತದೆ; ದುಃಖದಿಂದಲೂ ಹುಟ್ಟುತ್ತದೆ. ಚೆಲುವಿಗೆ ಪ್ರಸನ್ನತೆಯೊಂದೇ ಸ್ಥಿತಿಯೂ ಅಲ್ಲ, ಗತಿಯೂ ಅಲ್ಲ. ಅದು ಮುನಿದರೂ ತನ್ನತನವನ್ನು ಉಳಿಸಿಕೊಳ್ಳುತ್ತದೆ. ಬಾಳಲಾರದ ಚೆಲುವು ಮಾತ್ರ ಬಾಡಿಹೋಗುತ್ತದೆ.

ನಮ್ಮದು ಅಸ್ವತಂತ್ರ ದೇಶ; ನಾವು ದಾಸಾನುದಾಸರು ಎನ್ನುವ ಕೊರಗು ಕವಿಯ ಜೀವವನ್ನು ಹೊಕ್ಕರೆ, ರುದ್ರಗೀತೆ ಹುಟ್ಟುವುದು ಅನಿವಾರ್ಯ; ಶ್ರೀಮಂತರ ಸ್ವಾಭಿಮಾನವನ್ನೂ ಬಡವರ ಗೋಳನ್ನೂ ಕಾವ್ಯಕ್ಕೆ ತರುವಾಗ ಕವಿ ಕಲ್ಕಿಯ ಕಹಳೆಯಾಗುತ್ತಾನೆ.

'ಕಲ್ಕಿ' ಎನ್ನುವ ಕವಿತೆ ಅದು ಅಚ್ಚಿನಲ್ಲಿ ಮೆಚ್ಚಿ ಮುಚ್ಚಿರುವಷ್ಟು ಸೌಮ್ಯ ಕೃತಿಯಲ್ಲ. ಬಡವರ ಒಡಲಿನ ಬಡಬಾನಲನಿಗೆ ಶ್ರೀಮಂತರ ಸೌಧಗಳು ಸಮಿತ್ತಾಗುವುದನ್ನು ನೋಡಿ ಕಣ್-ಬಿರಿಯುತ್ತದೆ; ಎದೆ ಜಗ್ಗೆನ್ನುತ್ತದೆ. ಇಲ್ಲಿ ಕರುಣೆಯೆನ್ನುವುದು ಬರಿಯ ಮೋಹ; ಕಲ್ಕಿಯೇ ರುದ್ರಶಕ್ತಿ.

'ಕೋಗಿಲೆ ಮತ್ತು ಸೋವಿಯೆಟ್ ರಷ್ಯ'. ಇಲ್ಲಿ ಕೊಳಲ ದನಿಯೂ ಇಲ್ಲ. ಪಾಂಚಜನ್ಯದ ಉದ್ಗಾರವೂ ಇಲ್ಲ. ಕಲ್ಪನೆಯ ಅದ್ಭುತಕ್ಕಿಂತ ಸಹಜತೆಯ ಆಧುನಿಕತೆಯ ಕಡೆಗೇ ಕವಿಯ ಒಟ್ಟು ಗಮನ. ಮೊದಲ ಕವಿತೆಯಲ್ಲಿ ಸೋವಿಯೆಟ್ಟಿನ ಸಮತಾವಾದವನ್ನು ಕುರಿತು ಒಂದು ಸುಟಿಯಾದ ಟೀಕೆಯಿದೆ. 'ಥ್ರಾಂ ಧ್ರೀಂ ಧ್ರೂ'ಮಿನಲ್ಲಿ ಪ್ರಖ್ಯಾತ ವಿಗ್ರಹವಿಭೇದಕನು ಗುಜರಾತಿನ ಸೋಮನಾಥ ದೇವಾಲಯವನ್ನು ಸೂರೆಗೊಂಡ ಸಂಗತಿಯನ್ನು ಧೀರವಾಗಿ ವರ್ಣಿಸುತ್ತಾ ಕವಿ ಪೂಜಾರಿಗಳ ಒಣಮಂತ್ರಗಳಿಗೆ ಒದಗಿದ ಫಲವನ್ನು ಸೂಚಿಸಿದ್ದಾರೆ. ಈ ಟೀಕೆ ಉಪ್ಪು ಮೆಣಸು ಹಚ್ಚಿದ ದಾಳಿಂಬರೆ ಕಾಳಿನಂತೆ ರುಚಿಯಾಗಿದೆ. ಆದರೆ ಒಂದು ಮಾತು: ಆ ಕಾಲದ ಆ ಪೂಜಾರಿಗಳಂತೆ ಈ ಕಾಲದಲ್ಲಿ ಇತರ ಜೀವನ ವಲಯುಗಳಲ್ಲಿ ಇತರರೂ ಅಂಥ ಆಟ ಹೂಡಿದರೆ ಸಮಾಜಕ್ಕೆ ಹಾನಿ ಶತಸ್ಸಿದ್ಧ. ಆತ್ಮರಕ್ಷಣೆಗೆ ನೆರವಾಗದ, ದುರ್ಬಲತೆಯನ್ನು ಹೆಚ್ಚಿಸುವ, ಕೇವಲ ಮಂತ್ರೋಚ್ಚಾರಣೆಯಿಂದಲೇ ಮುಕ್ತಿ ಲಭಿಸುತ್ತದೆ ಎನ್ನುವ, ಯುಕ್ತಿಯ ಉಪದೇಶಗಳಿಗೆ ಕಿವಿಗೊಟ್ಟು ಜನ ತಾವೂ ಉಳಿಯಲಿಲ್ಲ, ದೇವಾಲಯವನ್ನೂ ಉಳಿಸಿಕೊಳ್ಳಲಿಲ್ಲ. 'ಮುದುಕರಾದ ದೊಡ್ಡ ಮನುಷ್ಯರೊಬ್ಬರಿಗೆ' ಕವಿ ಬರೆದಿರುವ ಬಹಿರಂಗ ಪತ್ರವನ್ನೋದಿದರೆ ಕೃತಕೃತ್ಯರಾದ ದೊಡ್ಡ ಮನುಷ್ಯರೊಬ್ಬರು ಇಳಿ ವಯಸ್ಸಿನಲ್ಲಿ ಚಪಲತೆಗೆ, ಮುಖಸ್ತುತಿಗೆ ಮರುಳಾಗಿರುವುದನ್ನು ಕಾಣುತ್ತೇವೆ. ಹೀಗೆ ಯಾರೂ ತಮ್ಮ ಬದುಕನ್ನು ಹಗುರ ಮಾಡಿಕೊಳ್ಳಬಾರದು ಎನ್ನುವ ಮಾತಿನಲ್ಲಿ ಎದೆಗಾರಿಕೆಯಿದೆ. ಆದರೆ

ಇದೊಂದು ಪ್ರಮುಖ ಸಮಸ್ಯೆ; ಇಲ್ಲಿ ಬಿರು ನುಡಿಗೆ ಹೆಚ್ಚು ಅವಕಾಶವಿರಬಾರದು. ಬದುಕನ್ನು ಹತ್ತು ಕಡೆಗಳಿಂದ ಸ್ಥಿರವಾಗಿ ನಿಂತುನೋಡಿ ಒಟ್ಟು ನೋಟವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. 'ದಿವ್ಯ ನಿರ್ಲಕ್ಷತೆಯು ವರಕವಿಯ ಪಂಥ' ಎಂಬ ಮಾತು ಇನ್ನೊಂದು ಕವಿತೆಯಲ್ಲಿ ಬಂದಿದೆ. ನಿಜ, ಬಿರುದು ಬಾವಲಿ ಹೆಚ್ಚಲ್ಲ; ಹೆಸರು ಹೊಗಳಿಕೆ ಹಿರಿದಲ್ಲ. ಆದರೆ, 'ದಿವ್ಯ ನಿರ್ಲಕ್ಷತೆ'ಯೂ ಹತ್ತಾರು ಬಣ್ಣದ ಗಾಜಿನ ದೀಪವೇ. ಚಮತ್ಕಾರ ಯಾವುದು, ಸಾಕ್ಷಾತ್ಕಾರ ಯಾವುದು ಎನ್ನುವುದು ಕವಿಗೆ ಹೊಳೆದಂತೆ ಜನಕ್ಕೂ ತಿಳಿಯುವಂತೆ ಮಾಡುವುದು ಕವಿಯ ಕರ್ತವ್ಯವಲ್ಲದಿದ್ದರೂ, ಅದು ಕವಿತೆಯ ಕರ್ತವ್ಯವೂ ಅಲ್ಲ ಎಂದರೆ ನಾನು ನಂಬುವುದಿಲ್ಲ.

'**ಚಿತ್ರಾಂಗದೆ**'ಯ ಕಥೆ ನಮ್ಮ ಜನಕ್ಕೆ ಪರಿಚಿತವಾದದ್ದು. ಈ ಕಾವ್ಯವು ೨,೪೯೬ ಸಾಲುಗಳನ್ನೊಳಕೊಂಡಿದೆ. ಸರಳ ರಗಳೆಯನ್ನೂ (blank verse) ಮಹಾಛಂದಸ್ಸನ್ನೂ (grand style) ಮಹೋಪಮೆಗಳನ್ನೂ (Homeric simile) ಇಷ್ಟು ದೊಡ್ಡ ಕಾವ್ಯಕ್ಕಾಗಿ ಕನ್ನಡದಲ್ಲಿ ಬಳಸಿರುವುದು ಇದೇ ಮೊದಲು. ಈ ಕಾವ್ಯಕ್ಕೆ ಚಿತ್ರಾಂಗದೆ ನಾಯಿಕೆ. ಕಥೆ ಆರು ಪರ್ವಗಳಲ್ಲಿ ಹರಿಯುತ್ತಿದೆ; ಕನ್ನಡದ ಪ್ರಾಚೀನ ಕಾವ್ಯಗಳನ್ನು ನೆನಪಿಗೆ ತರುತ್ತಿದೆ. ಪ್ರಕೃತಿ ವರ್ಣನೆ ರಮ್ಯನೂತನವಾಗಿದೆ; ಶೈಲಿ ಅಲ್ಲಲ್ಲಿ ಸಂಸ್ಕೃತಪದಭೂಯಿಷ್ಠವಾಗುವಾಗ ಬೇಸರವನ್ನು ತರುವಂತಿದ್ದರೂ ಅಲ್ಲಲ್ಲೇ ಕನ್ನಡದ ಇಂಪಿನ ಕೋಡಿಗಳಿವೆ. ನಾಲ್ಕನೆಯ ಪರ್ವವೇ ಈ ಕಾವ್ಯದ ರಾಜಧಾನಿ.

ಮನೋಹರಂ
ಮೋಹನ ಮಯೂರಮಿಥುನಂ ಬೆಳಗು ಪೊಳ್ತಿನೊಳೆ
ನವಿಲು ಕಲ್ಲಿನ ಕಾಡಿನೆತ್ತರದ ಕೋಡಿನಿಂ
ಬೆಳೆದ ಗದ್ದೆಯ ಹಳದಿಗಿಳಿತಂದು, ಮೆಲ್ಲನೆಯೆ
ಮೂಲೆ ಗದ್ದೆಯಲಿ ಮೆಲ್ಲುತೆ ನೆಲ್ಲನೊಚ್ಚತಂ
ಪಾರಿದಪವೊಲ್ಮೆವೊಯ್ಯರದಿಂ ಗಿರಿನೆತ್ತಿಗೆ

ಈ ಚಿತ್ರದ ಐಶ್ವರ್ಯಕ್ಕೆ ಮನಸೋಲದವರು ನಿರ್ಭಾಗ್ಯರು.

ಈ ಕಾವ್ಯದಲ್ಲಿ ಚಿತ್ರಾಂಗದೆ ಹೇಗೆ ಬಂದಿದ್ದಾಳೆ ಎನ್ನುವುದು ಮುಖ್ಯ

ಪ್ರಶ್ನೆ. ನಿಜ, ಈಕೆ ಅತಿಮಾನುಷ ಪೌರಾಣಿಕತೆಯಿಂದ ಪಾರಾಗುವ ಸಂದರ್ಭವೂ ಇಲ್ಲಿಲ್ಲ. ತಾರುಣ್ಯದ ಸಂಯಮರಹಿತ ವ್ರತಭ್ರಷ್ಟತೆಗೆ ಪ್ರಾಯಶ್ಚಿತ್ತ ವಿಹೀನವಾದ ಭೋಗಕಿರೀಟವನ್ನಿಟ್ಟು ಪ್ರೇಮದ ಮಂಗಳಾರತಿಯನ್ನೂ ಇಲ್ಲಿ ಎತ್ತಿಸಿಕೊಂಡಿಲ್ಲ. ಇರಬಹುದು. ಆದರೆ ತಾರುಣ್ಯದಲ್ಲಿ ಈಕೆ ಅರ್ಜುನನ ಹೃದಯದಲ್ಲಿ ಸಂಗಮಿಸಿ ಸುಖಪಟ್ಟ ಪುಣ್ಯಭಾಗಿನಿ ; ಆಮೇಲೆ ಬಹುಕಾಲ ಅರ್ಜುನನ ಮನಸ್ಸು ಆಕೆಯಿಂದ ದೂರವಾಯಿತು. ಅರ್ಜುನನಿಗೆ ತಕ್ಕ ಮಗ-ಬಭ್ರುವಾಹನ-ಆಕೆಯ ಪುಣ್ಯಪುತ್ರ. ಮತ್ತೆ ಅರ್ಜುನ ಮಣಿಪುರಕ್ಕೆ ಬಂದದ್ದು ಅಶ್ವಮೇಧಯಾಗದ ವಿಜಯಯಾತ್ರೆಯ ಸಂದರ್ಭದಲ್ಲಿ. ಬಭ್ರುವಾಹನ ಆ ಕುದುರೆಯನ್ನು ಕಟ್ಟಿಹಾಕಿ ಯುದ್ಧವನ್ನು ಆಹ್ವಾನಿಸುತ್ತಾನೆ. ರಕ್ತಪಾತ ಅನಿವಾರ್ಯವಾಗುತ್ತದೆ ; ಯುದ್ಧ ಸಾಗುತ್ತದೆ.

ಇಂತುಟಾ ದಿನಮೆಲ್ಲ ರಣದ ಕೋಲಾಹಲಂ
ಕೊಲೆಯ ಹಾಲಾಹಲಂ ಹರಿದುದೆಡಬಿಡದಲ್ಲಿ
ಮಣಿಪುರ ಧರಣಿಯಲ್ಲಿ.*

ಆ ಕಾಲದಲ್ಲಿ

ಬಭ್ರುವಾಹನನ ಜನನಿ
ತಿಳಿಯದೇನೊಂದುಮಂ ತೃಣಕುಟೀರದ ಮಧ್ಯೆ
ಬೇಡುತಿರ್ದಳ್ ಬಿಡದೆ ಫಣಿಧರ ಪಿನಾಕಿಯಂ
ತನ್ನಭೀಷ್ಟಮಂ.

ಕಥೆ ಹೇಗೆ ಮುಂದೆ ನಡೆಯುತ್ತದೆ ಎಂಬುದನ್ನು ಕಾವ್ಯ ಓದಿ ತಿಳಿಯಬಹುದು. ಆದರೆ ಅರ್ಜುನನಿಗೆ ಆಕೆ ಹೃದಯಾರ್ಪಣ ಮಾಡಿದ್ದು ಸಂಯಮರಹಿತ ವ್ರತಭ್ರಷ್ಟತೆಯೆಂದೂ, ಅದಕ್ಕೆಲ್ಲ ಈ ಬಗೆಯ ತಪಸ್ಸೇ ಪ್ರಾಯಶ್ಚಿತ್ತ

---

* ಇದನ್ನೋದುವಾಗ, ಟೆನಿಸನ್ ಕವಿಯ

‘So all day long the noise of battle roll'd
Among the mountains by the winter sea’

ಸಾಲು ನೆನಪಿಗೆ ಬರುತ್ತದೆ.

ವೆಂದೂ ಈ ಕಾಲದಲ್ಲಿ ಹೇಳಿದರೆ ನಂಬಿಕೆ ಬರಲಾರದು. ಕಾವ್ಯದ ಉದ್ದಕ್ಕೂ ಮೈತುಂಬಿ ಬೆಳೆದ ರಮಣಿ, ಘೋರ ತಪಸ್ಸಿಗೆ ಸೆರೆಯಾಗಿ, ಕಟ್ಟಕಡೆಯಲ್ಲಿ ಸಮರಾಂಗಣಕ್ಕೆ ನುಗ್ಗಿ ಅರ್ಜುನ ಬಭ್ರುವಾಹನರ ನಡುವೆ ಬಿದ್ದು ಹತಳಾಗಿದ್ದಾಳೆ. ಈ ಕಾವ್ಯದ ಮುಗಿವಿನಲ್ಲಿ ಸ್ವಲ್ಪ ಅವಸರ ಕಾಣುತ್ತಿದೆ.

ಪ್ರೇಮಗೀತಗಳು

'ಕುವೆಂಪು' ಅವರ **'ಪ್ರೇಮ ಕಾಶ್ಮೀರ'** ವನ್ನು ಆಸೆಯಿಂದ ಓದಿದ್ದೇನೆ. ಗಿರಿ ವನ ನದಿ ತಟಾಕಗಳಿಂದ ಸಾಂದ್ರಮನೋಹರವಾದ ಸುಂದರಪ್ರದೇಶವಂತೆ ಕಾಶ್ಮೀರ; ತರುಣ ದಂಪತಿಗಳ ಪ್ರೇಮವಿಹಾರಗಳಿಗೆ ಅಣಿಯಾದ ಬಂಗಾರದ ನಾಡಂತೆ. ಕಾಶ್ಮೀರದ ಕನಸು ತುಂಬ ಪ್ರಿಯವಾದುದು; ಆದರೆ ಪ್ರೇಮಜೀವನದ ಯಾವ ವಿಶಿಷ್ಟ ಸಂಗತಿಯಾಗಲಿ ಕವಿ ತನ್ನದಾಗಿ ಪ್ರೇಮಕ್ಕೆ ಅರ್ಪಿಸಿದ ಯಾವ ವಿಶಿಷ್ಟ ಕಾಣಿಕೆಯಾಗಲಿ ಇಲ್ಲಿ ಕಾಣದು. ಇಲ್ಲಿ ಪ್ರೇಮಕ್ಕಿಂತ ಹೆಚ್ಚಾಗಿ ಶೃಂಗಾರವಿದೆ, ತತ್ತ್ವಗಳಿವೆ; ಮಾತುಗಾರಿಕೆಯಿದೆ.

ಇಲ್ಲಿ ಬರುವ ರಮಣಿಯ ಚಿತ್ರವೂ ಸುಪರಿಚಿತವಾದದ್ದೇ. ಬಿಂಬಾಧರೆ, ಲತಾಂಗಿ ಇ-ಇ. ಆಕೆಯ 'ಕಣ್ಣು ತಾವರೆಯಲ್ಲಿ ತುಂಬಿ ಸೆರೆ' ಎನ್ನುವ ಹೋಲಿಕೆ ಚೆನ್ನಾಗಿದೆ; ಆದರೆ ಈ ಮಾತು ಹಿಂದೆ ಸಂಸ್ಕೃತದಲ್ಲೂ, ಬ್ರೌನಿಂಗ್ ಕವಿಯಲ್ಲೂ* ಬಂದು ಪ್ರಸಿದ್ಧವಾಗಿದೆ. ಇವು ಬಂದದ್ದು ಸರಿಯೆ; ಹೆಣ್ಣು ಕಡೆಗೂ ಚಿತ್ರದ ಬೊಂಬೆಯಾಗಿದ್ದಾಳೆ. ಆಕೆಯ ಧ್ವನಿಯೂ ಅಸ್ಪಷ್ಟ; ಹಿನ್ನೆಲೆಯ ಸಂಗೀತವೇ ಪ್ರಧಾನ.

'ಮೈಗೆ ಮೈ ಸೋಂಕಿದರೆ' ಎಂಬ ಕವಿತೆಯಲ್ಲಿ ಬರುವ 'ಒಲಿದೊಪ್ಪಿದಪ್ಪಿನಲಿ' ಎನ್ನುವ ಸಾಲಿನ ಸದ್ದಿಗೂ ಮೈಗೆ ಮೈ ಸೋಂಕಿದರೆ ಆಗಬಹುದಾದ ಅನುಭವಕ್ಕೂ ಹೋಲಿಕೆ ಸಾಲದು. 'ಮೊಸರಿನ ಹುಡುಗಿ' ಒಂದು

---

* [1] 'As a shut bud that holds a bee' : R. Browning, 'Porphyria's lover.'

[2]. 'ರಾತ್ರಿರ್ಗಮಿಷ್ಯತಿ . . . . ಕೋಶಗತೇ ದ್ವಿರೇಫೇ.'

ಸಣ್ಣ ಗೇಲಿಯ ಸುರುಳಿ. ‘ಕವಿಯ ಪ್ರೇಮ’ದಲ್ಲಿ ಇಂಪಿನ ಒತ್ತಡವಿಲ್ಲ.

‘ಎಂತು ನೂಂಕಲಿ ನಾಳೆಯೊಂದು ದಿನವನು ಚಿನ್ನಾ’ ಎನ್ನುವ ಆಲಾಪನೆಯಲ್ಲಿ ‘ಕಾಣುತಿದೆ ನಾಳೆ ಪಾತಾಳದಂತೆ.’ ‘ಪ್ರಶ್ನೋತ್ತರ’ದಲ್ಲಿ ಪ್ರಶ್ನೆಯೂ ಉತ್ತರವೂ ಮಿಂಚುತ್ತಿವೆ. ‘ಇಂದಾಗಲಿ’ ಮೃದುವಾಗಿದೆ; ‘ಗುರುಕೃಪೆ’ ಮಧುರವಾಗಿದೆ; ‘ಆತ್ಮನಿವೇದನ’ ಹಾಡುತ್ತಿದೆ.

‘ಅಮೃತಸುಖ’ ಎಂಬ ಗೀತವೇ ಈ ಸಂಗ್ರಹದ ಎದೆಮುತ್ತು. ಇಲ್ಲಿ ಸಂನ್ಯಾಸಿಯ ಪರಿವರ್ತಿತ ಪ್ರೇಮವೂ ಇಲ್ಲ; ದಿವ್ಯಪ್ರೇಮವೂ ಇಲ್ಲ. ದಿನದಿನ ಜೀವನದಲ್ಲಿ ನಾವು ಕಾಣುವ ಸಹಜಪ್ರೇಮ ಮೈತಾಳಿದೆ.

ನವಿಲಿನ ಬಣ್ಣದ ಕೊರಳಿನ ಸೀರೆ
ಹೊಂದಾವರೆ ಹೂವಿನ ಗೆರೆಯಂಚು
ಬೆನ್ದಿರುಹುತೆ ಕುಳಿತಿದ್ದಳು ಚೆಲುವೆ
ಸಾಗಿದ್ದಿತು ಹಸುಳೆಯು ತಾಯಿಯ ಹಾಲೊಳಸಂಚು! . . . .
ಮೂದಿಂಗಳ ಕಂದನ ಹೂಗಾಲು
ಒಳಸಂಚನು ಹೊರಗೆಡಹುವ ವೋಲು
ಅಂಚಲದೊಳಗಿಂ ಕಟಿತಟದಲ್ಲಿ
ಇಣಕಿರೆ ಮುಳುಗಿದೆ ನಾನೂ ಅಮೃತ ಸುಖದಲ್ಲಿ:

ಈ ಸುದ್ದಿಯನ್ನು ಹೇಳಿದವರೂ ಕೇಳಿದವರೂ ಇಬ್ಬರೂ ಧನ್ಯರು. ಪ್ರೇಮ ಕಾಶ್ಮೀರ ಇದು.

ನಾಟಕಗಳು

ಇಲ್ಲಿನ ಏಳು ನಾಟಕಗಳಲ್ಲಿ ‘ನನ್ನ ಗೋಪಾಲ’ ಎನ್ನುವುದೊಂದೇ ಗದ್ಯನಾಟಕ. ಉಳಿದ ಆರೂ ಪದ್ಯನಾಟಕಗಳು; ಅಲ್ಲೂ ಗದ್ಯ ಸಂಚಾರ ವಿದೆ. ‘ರಕ್ತಾಕ್ಷಿ’ಯಲ್ಲಿ ಪ್ರಧಾನ ಪಾತ್ರಗಳ ಸಂಭಾಷಣೆ ಮಾತ್ರ ಪದ್ಯದಲ್ಲಿದೆ; ಹಾಡು ಒಂದಿಲ್ಲ. ‘ಜಲಗಾರ’ದಲ್ಲಿ ಚೆಲುವಾದ ಹಾಡುಗಳಿವೆ. ‘ಮಹಾ ರಾತ್ರಿ’ಯಲ್ಲಿ ಹಾಡಿಲ್ಲ; ‘ಶ್ಮಶಾನ ಕುರುಕ್ಷೇತ್ರ’ದಲ್ಲಿ ಒಂದೇ ಹಾಡು— ರುದ್ರನ ಹಾಡು. ಪದ್ಯ ಸಾಧಾರಣವಾಗಿ ಐದು ಮಾತ್ರೆಯ ಗಣದ ಸರಳ ರಗಳೆಯ ರೂಪದಲ್ಲಿದೆ; ಪಾತ್ರಗಳ ಸೌಕರ್ಯಕ್ಕಾಗಿ ಕವಿ ಉದ್ದೇಶಪೂರ್ವಕ ವಾಗಿ ಸಾಲುಗಳನ್ನು ಅಲ್ಲಲ್ಲಿ ಮುರಿದು ಬೇರ್ಪಡಿಸಿದ್ದಾರೆ. ‘ವಾಲ್ಮೀಕಿಯ

ಭಾಗ್ಯ'ವು ಕಣ್ಣಿಗೆ ಪದ್ಯರೂಪಿಯಾಗಿ ಕಂಡರೂ ಸಂಪೂರ್ಣವಾಗಿ ಗದ್ಯದ ಭಾಷೆಯಲ್ಲಿದೆ. 'ಯಮನ ಸೋಲು' ಸಂಪೂರ್ಣವಾಗಿ ಪದ್ಯನಾಟಕ.

'ಮಹಾರಾತ್ರಿ'ಯಲ್ಲಿ ಕಪಿಲವಸ್ತುವಿನ ಸಿದ್ಧಾರ್ಥನ ಮಹಾತ್ಯಾಗವೇ ನಾಟಕವಸ್ತು. ಬುದ್ಧನಾಗುವವನ ಮನಸ್ಸು ಹೇಗೆ ಭೋಗಗಳನ್ನು ಸೋಲಿಸಿ ದೂರೀಕರಿಸಿತು ಎಂಬುದರ ನಿರೂಪಣೆ ಚೆನ್ನಾಗಿ ಬಂದಿದೆ; ಶೈಲಿಯಲ್ಲಿ ಬನಿಯಿದೆ. ಆದರೆ 'ಎಲೆ ನಿದ್ದೆ ನಿನ್ನುದರವತಿ ಕಪ್ಪು, ನಿನ್ನ ಬಲಿಗೊಳಗಾದವರೆ ಬೆಪ್ಪು' ಎಂದು ವಿತರಣೆಯಿಂದ ಮಾತನ್ನು ಬಳಸಿದ ಕವಿಯೇ ಆರನೆಯ ದೃಶ್ಯದ ಮೊದಲಲ್ಲಿ ರಾಲನ ಬಾಯಲ್ಲಿ 'ಮೇಣವನ ಬುದ್ಧಿಯೋ ಕಂಥಕನ ಲದ್ದಿ' ಎನ್ನುವ ಅರೋಚಕ ಶಬ್ದಗಳನ್ನು ನುಡಿಸಿದುದು ಆಶ್ಚರ್ಯಕರವಾಗಿದೆ.

'ಶ್ಮಶಾನ ಕುರುಕ್ಷೇತ್ರ'ವು ಕೌರವ ನಾಟಕದ ಕಡೆಯ ಅಂಕ; ಇಲ್ಲಿನ ಚಿತ್ರಗಳು ರಕ್ತಮಯವಾಗಿ ಹೃದಯ ವಿದ್ರಾವಕವಾಗಿವೆ. ಈ ನಾಟಕ ರಂಗ ಸ್ಥಲದಲ್ಲಿ ಶೋಭಿಸೀತು.

'ಜಲಗಾರ'ದ ಕಥಾವಸ್ತು ಸಾಮಾಜಿಕ ಜೀವನದಿಂದ ತಂದದ್ದು. ಉತ್ತಮ ವರ್ಣದವರ ಬಂದಿಯಾಗಿ ಗುಡಿಯಲ್ಲಿ ಗುಟ್ಟಾಗಿರುವ ದೇವರು, ಒಬ್ಬ ಜಲಗಾರನಿಗೆ ಶಿವನಾಗಿ ಮೈದೋರಿದ ಕಥೆಯ ಮೇಲೆ ಈ ನಾಟಕ ಹಬ್ಬಿದೆ.

'ಯಮನ ಸೋಲು' ಸಾವಿತ್ರಿಯ ವಿಜಯ. ಇಲ್ಲಿನ ಸಂಭಾಷಣೆ ಚಟುವಟಿಕೆಯಿಂದ ಕೂಡಿದ್ದರೂ ನಾಟಕತಂತ್ರ ಪರಿಚಿತವಾದುದೇ.

'ವಾಲ್ಮೀಕಿಯ ಭಾಗ್ಯ' ಸೀತಾಪರಿತ್ಯಾಗದ ಫಲ. ಸೀತಾಪರಿತ್ಯಾಗಕ್ಕೆ ಕಾರಣ ವಾಲ್ಮೀಕಿಯ ಭಾಗ್ಯದಲ್ಲಿದೆ ಎನ್ನುವ ಮಾತು ಕಾವ್ಯಮಯವಾದರೂ ಬಳಸಾದ ಉತ್ತರ. ಇದೊಂದು ಎಂದೆಂದಿಗೂ ತೆರೆದಿಟ್ಟ ಪ್ರಶ್ನೆ.

'ನನ್ನ ಗೋಪಾಲ' ಎನ್ನುವ ಗದ್ಯನಾಟಕವು ಮಧುರವಾಗಿದೆ; ಬನದ ಗೋಪಾಲನೂ ಗೋಪಾಲನೂ ಕೂಡಿ ಆಡುವ ಆಟ ಪ್ರಿಯವಾದುದು. ಶಾಲೆಗಳ ಉತ್ಸವಗಳಲ್ಲಿ ಈ ನಾಟಕವನ್ನು ಆಡಿದರೆ ಕಳೆ ಕಟ್ಟುತ್ತದೆ.

'ರಕ್ತಾಕ್ಷಿ'ಯೊಂದು ಹಿರಿಯ ನಾಟಕ. ಹ್ಯಾಂಲೆಟ್ ನಾಟಕದ

ಸಂಗತಿ ಸಂವಿಧಾನಗಳೊಂದಿಗೆ, ಮೈಸೂರಿನ ಚರಿತ್ರೆಯ ಬಿದರೂರಿನ ನಾಯಕರ ಸಂಗತಿಗಳನ್ನು ಹೊಂದಿಸಿಕೊಂಡು ಕವಿ ಈ ನಾಟಕವನ್ನು ರಚಿಸಿದ್ದಾರೆ. ಇದರ ಮುನ್ನುಡಿಯನ್ನೋದಿದವರಿಗೆ ಪ್ರತ್ಯೇಕ ವಿಮರ್ಶೆ ಅನಾವಶ್ಯಕ. 'ಅರಮನೆ, ಕಳಶ'—ಎರಡೂ ಮೆರೆಯುತ್ತಿವೆ. ರುದ್ರಾಂಬೆಯ ಪಾತ್ರ ರಕ್ತೋಜ್ಜ್ವಲವಾಗಿದೆ. ಭಾಷೆ ರುದ್ರಗಂಭೀರವಾಗಿದೆ. ಕಥೆ ಕುತೂಹಲವನ್ನು ಕೆರಳಿಸುತ್ತಿದೆ. ಆದರೆ ಇದನ್ನು ಹ್ಯಾಂಲೆಟ್ ನಾಟಕದೊಂದಿಗೆ.ಹೋಲಿಸಿ ತೂಗುವುದು ಮಾತ್ರ ಅತಿಯಾದೀತು.

ಸಣ್ಣ ಕಥೆಗಳು

ಪುಟ್ಟಪ್ಪನವರ ಸಣ್ಣ ಕಥೆಗಳಲ್ಲಿ ಒಂದೊಂದೂ ಒಂದೊಂದು ಕವಿತೆ. ಕಥೆಗಳನ್ನು ಓದಲು ಮನಸ್ಸು ಮಾಡಿದರೆ ಕಡೆಯ ಪುಟವನ್ನು ದಾಟುವವರೆಗೆ ನಮಗೆ ತೃಪ್ತಿಯಿಲ್ಲ. ಅವರು ಒಳ್ಳೆಯ ಕಥೆಗಾರರು. 'ಮೀನಾಕ್ಷಿಯ ಮನೆ ಮೇಷ್ಟರ' ಕಥೆ ಒಂದು ಅಪೂರ್ವ ಮಾಣಿಕ್ಯ. ಇಂಥ ಮನೆ ಮೇಷ್ಟರ ರೊಮಾನ್ಸಿಗೆ ದಕ್ಕುವವಳೇ ಮೀನಾಕ್ಷಿ? ತನ್ನ ಕಣ್ಣ ಮುಂದೆ ಮೈ ತುಂಬಿ ಬೆಳೆದ ಹೆಣ್ಣು—ಮೀನಾಕ್ಷಿ—ತನ್ನನ್ನಲ್ಲದೆ ಬೇರೆಯವನನ್ನು ಮದುವೆಯಾದರೆ ತೊಂದರೆಗೆ ಒಳಗಾದಾಳು ಎನ್ನುವ ಚಿಂತೆಯನ್ನು ಸಾಕಿದ ಈ ಮೇಷ್ಟರು ಮೀನಾಕ್ಷಿ ತನ್ನ ಗಂಡನ ಮನೆಯಲ್ಲಿ ಸುಖವಾಗಿ ಸಂಸಾರ ಮಾಡಿಕೊಂಡಿರುವುದನ್ನು ನೋಡುತ್ತಾರೆ. ಇವನೊಬ್ಬ ಕಯಾಲಿ; ಈ ಕಥೆ ತಿರುಕನ ಕನಸು.

"ನನ್ನ ದೇವರು" ಎನ್ನುವುದು ಸಣ್ಣಕಥೆಯೋ ಭಾವಗೀತೆಯೋ ನಾನು ಹೇಳಲಾರೆ. ಕಥೆಯನ್ನು ನಡಸುವ ಹೆಣ್ಣು ಕಾವ್ಯಲೋಕದವಳು. ಆಕೆಯ ಗತಿಸಿದ ಗಂಡನ ಅಣ್ಣನೂ–"ಭಾವನವರೂ"–ಕವಿಯೇ. ಭಾವನ ಸೌಂದರ್ಯಕ್ಕೆ ಬೆರಗಾದ ಹೆಣ್ಣು, ಆಕೆಯ ಅನುಭವ ಮತ್ತು ಅಪರಾಧ, ಆತನ ಉದಾರಹೃದಯ ಮತ್ತು ವಿರಕ್ತಿ ಎಲ್ಲ ಗಂಭೀರವಾಗಿ ವರ್ಣಿತವಾಗಿದ್ದರೂ ಆತ ಕವಿಯೇ ಏಕೆ ಆಗಿರಬೇಕು, ಆಗದಿದ್ದರೆ ಏನು ನಷ್ಟವಾಗುತ್ತಿತ್ತು ಎನ್ನುವ ಸಂಶಯ ಉಳಿಯುತ್ತದೆ.

"ಸಾಲದ ಮಗುವಿನ ಸಾವು" ಹೃದಯ ವಿದ್ರಾವಕವಾಗಿದೆ. 'ಗದ್ದೆಯಲ್ಲಿ ಹಾಕಿದ್ದ ಕೂಣಿ ನೋಡಿಕೊಂಡು ಬಾರೋ' ಎಂದು ಗೌಡರು ಅಟ್ಟಿದ

ಸುಬ್ಬ—ಹತ್ತು ವರ್ಷ ವಯಸ್ಸಿನ ಸಾಲದ ಮಗು—ಗದ್ದೆಯ ಬದಿಯಲ್ಲಿ ಮಿಾನ್ ಬುಟ್ಟಿಯನ್ನು ಎತ್ತಿಡುವಾಗ ಹಾವು ಕಚ್ಚಿ ಕೆಸರಿನಲ್ಲಿ ಬಿದ್ದು ಸಾಯುತ್ತಾನೆ. ಗೌಡರ ಗುಣ ಅರ್ಥವಾಗುತ್ತದೆ. ಇಂಥವರು ನಾಡತುಂಬ ಧಂಡಿಯಾಗಿದ್ದಾರೆ. ಈ ಕಥೆಯ ನಾಂದೀ ಶ್ಲೋಕದಂತೆ ಇಲ್ಲೊಂದು ವಾಕ್ಯವಿದೆ: 'ಒಂದೊಂದು ಸಾರಿ ಇರುಳ ಗುಟ್ಟನ್ನು ತಿಳಿಯಲೋಸುಗ ಹಗಲು ಇಣಕಿತೋ, ಎಂಬಂತೆ ಬಳ್ಳಿಮಿಂಚು ಮುಗಿಲುಗಳ ಸಂಧಿಯಲ್ಲಿ ನಾಗರ ಹಾವಿನ ನಾಲಗೆಯಂತೆ ಚುರು ಚುರುಗುಟ್ಟಿ ಹೊಳೆದು ಕಣ್ಮರೆಯಾಗುತ್ತಿತ್ತು.' ಇದು ಸ್ಮರಣೀಯವಾದುದು.

'ಗಂಟು ಅಥವಾ ಗುಪ್ತಧನ'ದಲ್ಲಿ ಮಲೆನಾಡಿನ ಮಂತ್ರವಾದಿ ತನ್ನನ್ನು ನಂಬಿದವರ ಗಂಟನ್ನು ಹಾರಿಸುವ ಮೋಸದ ಕಥೆಯಿದೆ; 'ಆದರ್ಶ ಸಾಧನೆ'ಯಲ್ಲಿ ಪ್ರೇಮದ ಪ್ರಶ್ನೆ ಬಂದಿದ್ದರೂ ಅದು ಧ್ಯೇಯವಾಗಿ ಉಳಿದಿದೆ; 'ಔದಾರ್ಯ'ದಲ್ಲಿ ಮಂಡ್ಯದಿಂದ ತೀರ್ಥಹಳ್ಳಿಗೆ ವರ್ಗವಾದ ಅಮಲ್ದಾರ್-ಕವಿ ಒಂದು ವಿಸ್ಮಯಕರವಾದ ಸಂಜೆ ತುಂಗಾ ತೀರದಲ್ಲಿ ಏಕಾಕಿಯಾಗಿ ಕುಳಿತಿದ್ದ ಕಾಲದಲ್ಲಿ ಡೇವಿಡ್ ಮಾಸ್ತರ ಭೂತದೊಂದಿಗೆ ಮಾತಾಡಿದ ಸಂಗತಿಯಿದೆ.

'ದೆವ್ವದ ಕಾಟ' ಎನ್ನುವ ಕಥೆಯ ವಿಚಾರವಾಗಿ ಮಾಸ್ತಿಯವರು ಹೇಳಿರುವಂತೆ 'ಇಲ್ಲಿ ಬರುವ ಜನರೆಲ್ಲ ಜೀವನದಿಂದ ಕಥೆಗೆ ನಡೆದು ಬಂದಂತಿದೆ; ರಾಯರು ಅವರ ಸೇವಕ ಮಂತ್ರ ಹಾಕುವ ಬ್ರಾಹ್ಮಣ ಕಾವಲು ಕಾಯುವ ಜನ; ದೆವ್ವಕ್ಕೆ ಹೆದರುವ ಪೊಲೀಸಿನವ; ಹೆದರದ ಪೊಲೀಸ್ ಇನ್‌ಸ್ಪೆಕ್ಟರ್ ಇವರು ಬರುವ ಹೋಗುವ ರೀತಿ; ಇದೆಲ್ಲ ಒಂದು ನಾಡಿನ ಜೀವನವನ್ನೇ ನಮ್ಮ ಮುಂದೆ ತಂದಿರಿಸುತ್ತವೆ.' 'ಕ್ರಿಸ್ತನಲ್ಲ, ಪಾದ್ರಿಯ ಮಗಳು' ಎಂಬ ಕಥೆಯಲ್ಲಿ ಮತಾಂತರ ಹೊಂದಿ ದಿಕ್ಕು ಗೆಟ್ಟ ಸುಸಂಸ್ಕೃತ ವ್ಯಕ್ತಿಯ ಜೀವನ ಸಮಸ್ಯೆಯಿದೆ; ಇಲ್ಲಿ ಪಶ್ಚಾತ್ತಾಪದ ಪರಮಾವಧಿಯ ಮಾತುಗಳಿವೆ.

'ಶ್ರೀಮನ್ಮೂಕವಾಗಿತ್ತು' ಎನ್ನುವ ಕಥೆಯಲ್ಲಿ ಮಾನವರ ಕಠಿಣ ಹೃದಯಕ್ಕೆ ಬಲಿಯಾದ ಒಂದು ಎಮ್ಮೆಯ ಕರುವಿನ ಕರುಣಾಜನಕ ಚಿತ್ರವಿದೆ. ಎಳಗರು ಸತ್ತಮೇಲೆ ವಾಸು ಇದ್ದಕ್ಕಿದಂತೆಯೇ "ಪಾಪ ಎಳಗರು!

ಎನ್ಮೆ ಹೊಡಕೊಂಡು ಹೋಗೋ ನೀನು, ರಂಗ" ಎಂದ ಮಾತಿನಲ್ಲಿ ಕಂಬನಿ ಕಾಲುವೆ ಜಿಲ್ಲೆನುತ್ತಿದೆ.

ಸುನೀತಗಳು

ಕೃತ್ತಿಕೆಯಲ್ಲಿ ಬರುವ ಸುನೀತಗಳು ಶಕ್ತಿಯುತವಾಗಿವೆ. ಇವುಗಳಲ್ಲಿ ಲಾವಣ್ಯವಿದೆ; ಅಂಗೈಯಲ್ಲಿ ಮಲೆನಾಡನ್ನು ಕಾಣಿಸುವ ಕೌಶಲವಿದೆ. ಆದರೆ ಕವಿಗೆ ಪದಕಲಾಪದಲ್ಲಿ ಹೆಚ್ಚು ಪ್ರೀತಿಯಿರುವುದರಿಂದ ಶೈಲಿಯ ನೆಯ್ಗೆ ಒಂದೇ ಹದವಾಗಿಲ್ಲ; ಪ್ರಾಸ ರಚನೆಯಲ್ಲಿ ಶಾಸ್ತ್ರ ಸಂಪನ್ನತೆ ಅಭಿವ್ಯಕ್ತವಾಗಿದ್ದರೂ ಹದಿನಾಲ್ಕು ಸಾಲೂ ಕೂಡಿ ಒಂದು ಜೀವಿಯಂತೆ ನುಡಿಯುವ ಸುನೀತಗಳು ಹೇರಳವಾಗಿಲ್ಲ.

'ಖಗೋಲ ವಿಜ್ಞಾನದ ಪ್ರಥಮ ಪರಿಚಯ' ದಲ್ಲಿ ಸೋತ ಹಕ್ಕಿ ತತ್ತರಿಸಿ ಬೀಳುವುದರ ಧ್ವನಿ ಚಿತ್ರವಿದೆ; 'ಬಲಿಪಾಡ್ಯಮಿ'ಯಲ್ಲಿ ಹೊಸ ದೃಷ್ಟಿಯ ಶರಸಂಧಾನವಿದೆ; 'ಕ್ರಾಂತಿಕಾಳಿ' ಕಠೋರವಾಗಿ ಮೂಡಿದ್ದಾಳೆ. ಇವೆಲ್ಲಕ್ಕಿಂತ 'ಪಂಜೆಯವರಿಗೆ' ಅರ್ಪಿಸಿದ ಸುನೀತ ಸಾರ್ಥಕವಾಗಿದೆ; ಇದೇ ಈ ಸಂಗ್ರಹದ ಹೆಡೆಮಣಿ, ಕೃತ್ತಿಕೆ.

'ಊರ್ಮಿಳೆ'ಯ ಸುನೀತದ ತೌರು ರವೀಂದ್ರರ ಪ್ರಾಚೀನ ಸಾಹಿತ್ಯದಲ್ಲಿದೆಯೆಂದೂ, ಮತ್ತು ಇನ್ನೊಂದು ಕಡೆ ಬರುವ "ಕಲ್ಲುಕೋಂಟೆಯ ಸೆರೆಯು ಸೆರೆಯಲ್ಲ" ಎನ್ನುವ ಇಡಿಯ ಸಾಲು ಇಂಗ್ಲಿಷಿನಿಂದ ಬಂದದ್ದೆಂದೂ ಹೇಳಿದರೆ ತಪ್ಪಾಗಲಾರದು. ಆದರೆ, ಷೇಕ್ಸ್‌ಪಿಯರನನ್ನೂ ಉದ್ದೇಶಪೂರ್ವಕವಾಗಿ ಕಡೆಗಣಿಸಿ, ವರ್ಡ್ಸ್‌ವರ್ತಿಗೆ ವಿಶೇಷ ಗೌರವವನ್ನು ಸಲ್ಲಿಸಿರುವುದೂ, ಹೋಮರ್-ವಾಲ್ಮೀಕಿಗಳ ಸ್ಪರ್ಧೆಯೊಂದನ್ನೇರ್ಪಡಿಸಿ ರಾಮಾಯಣದ ಉತ್ಕೃಷ್ಟತೆಯನ್ನು ಸಾಧಿಸಿರುವುದೂ ಕೇವಲ ಪಕ್ಷಭಕ್ತಿ ಎನ್ನಿಸುತ್ತದೆ.

ಕವಿ ವಿಮರ್ಶಕರನ್ನೂ ಸಾಹಿತ್ಯ ಪ್ರೇಮಿಗಳನ್ನೂ ಕುರಿತು ಅಲ್ಲಲ್ಲಿ ಮಾತಾಡಿದ್ದಾರೆ. ಆ ಮಾತುಗಳಲ್ಲಿ ಕೆಲವು ಅನಾವಶ್ಯಕವಾಗಿ ಕಟುವಾಗಿವೆ. 'ಕುವೆಂಪು' ಅವರು ಕವಿಗಳೂ ಹೌದು; ವಿಮರ್ಶಕರೂ ಸೈ. ಕವಿಯೇ ತನ್ನ ಕಾವ್ಯದ ಪ್ರಥಮ ವಿಮರ್ಶಕ. ಕವಿಗಳಲ್ಲೂ ಎಷ್ಟೋ ತರಗತಿಗಳಿವೆ; ಒಬ್ಬ ಕವಿಯಲ್ಲೇ ಎಷ್ಟೋ ಮಟ್ಟಗಳಿವೆ. ವಿಮರ್ಶಕರಲ್ಲೂ ಹಾಗೆಯೇ.

ಕವಿ ಯಾರನ್ನು ಕಣ್ಣಲ್ಲಿಟ್ಟುಕೊಂಡು ಹಾಗೆಲ್ಲ ನುಡಿದಿದ್ದಾರೆಯೋ ತಿಳಿಯದು. ಏನಾಗಲಿ, ಮಿಂಚಿದ ಮಾತಿಗೆ ಕರುಣೆಯ ಅಂಚಿದ್ದರೆ ಚೆನ್ನಾಗಿತ್ತು.

'ನನ್ನ ಶೈಲಿ' ಓದುಗರ ಮೇಲೆ ಬೀಳುತ್ತದೆ. ಈ 'ದೈತ್ಯ ಶೈಲಿ' 'ಭೀಮಸುಂದರ ಶೈಲಿ' ಅಶಕ್ತರಿಗೆ ಅರ್ಥವಾಗದಿರಬಹುದು.–ಕನ್ನಡ ಕವಿತೆಯಲ್ಲಿ ಸಂಸ್ಕೃತ ಸ್ವಚ್ಛಂದವಾಗಿ ಅಧಿಕಾರ ಮಾಡಿದರೆ ಏನೇನು ಹುಟ್ಟುತ್ತವೆಯೊ ಯಾರೂ ಅರಿಯರು. ಅಲ್ಲದೆ ಬೇರೆಕಡೆ ಸರಳಶೈಲಿಯೂ ಅಪ್ರತಿಹತವಾಗಿ ಅಧಿಕಾರ ಮಾಡುತ್ತಿದೆ. ಇಲ್ಲಿ ಹೆಸರು ಅಮುಖ್ಯ. ಶೈಲಿಯನ್ನೆ ಪ್ರತ್ಯೇಕವಾಗಿ ಆರಾಧಿಸುತ್ತಿರುವವರೂ 'ದೈತ್ಯಶೈಲಿ'ಯ ಗಾತ್ರಕ್ಕೆ ಕೈಮುಗಿಯಬೇಕೆ?

'ಕವಿಯ ತೃಪ್ತಿ'ಯಲ್ಲಿನ ಹಸೆ ಚಿಕ್ಕದು. ಯಾವ ಕವಿಯೂ ಆ ತೃಪ್ತಿಯಲ್ಲಿ ಬಹುಕಾಲ ತಂಗಲಾರನೆಂದೇ ನನ್ನ ನಂಬಿಕೆ. 'ಕನ್ನಡದ ಚೆಲುವೂ ಶಕ್ತಿಯೂ ಸೀಮೋಲ್ಲಂಘನ ಮಾಡಲಿಲ್ಲವಲ್ಲ' ಎಂದು ಹಂಬಲಿಸುವ ಮಂದಿಯನ್ನು 'ಮಂಕೆ ಸರಿ' ಎಂದು ಏಕೆ ತೀರ್ಮಾನಿಸಬೇಕು?

ಕೀರ್ತಿ ಶನಿಯೆ? ಕವಿ ಈ ಮಾತನ್ನು ಆಡಬಾರದಾಗಿತ್ತು. ಕೀರ್ತಿ ಕೃತಿಗೆ ಸಂಬಂಧಪಟ್ಟದ್ದು; ಕೃತಿ ಕವಿಯನ್ನು ಬಿಟ್ಟು ಲೋಕಕ್ಕೆ ಸೇರಿಹೋದ ಸಂಪತ್ತು. ಕವಿ ಆ ಕಡೆ ನೋಡದಿರುವುದು ಕ್ಷೇಮ.

ಭಾಷಣಗಳು

'ಕುವೆಂಪು' ಅವರು ವಾಗ್ಮಿಗಳು. ಅವರ ಉಪನ್ಯಾಸಗಳನ್ನು ಕೇಳಿದವರಿಗೆ ಈ ಮಾತು ಅರ್ಥವಾಗುತ್ತದೆ. ಅದರ ಪ್ರಭಾವವೇ ಬೇರೆ; ಈ ಭಾಷಣಗಳನ್ನು ನಾವು ಓದುವಾಗ ಆಗುವುದು ಅರ್ಥಲಾಭ. ಒಳ್ಳೆಯ ಸಂಗೀತವನ್ನು ಕೇಳುವ ಅನುಭವವೇ ಬೇರೆ; ಅದರ ವರದಿಯನ್ನು ಪತ್ರಿಕೆಯಲ್ಲಿ ಓದುವಾಗ ಆಗುವ ಅನುಭವವೇ ಬೇರೆ. ಈ ಭಾಷಣಗಳನ್ನು ಓದಿಕೊಂಡಾಗಲೂ ನಮ್ಮೆದುರಿಗೆ ನಿಂತು—ನಿಂತಂತೆ ಕಂಡು ಮಾತಾಡುತ್ತಿರುವ ಅಪೂರ್ವ ವ್ಯಕ್ತಿಯ ಸೂಕ್ಷ್ಮಪರಿಚಯವಾಗುತ್ತದೆ.

'ಯುವಕರು ನಿರಂಕುಶಮತಿಗಳಾಗಬೇಕು' ಎನ್ನುವ ಭಾಷಣದಲ್ಲಿ ಸಮಾಜದ ಮೂಢನಂಬಿಕೆಗಳ ಉಚ್ಚಾಟನೆಯಿದೆ; 'ಮಲೆನಾಡ ಒಕ್ಕಲಿಗರಲ್ಲಿ' ಕವಿ ಮಾಡಿದ ಬಿನ್ನಹದಲ್ಲಿ ಮಲೆನಾಡಿಗೆ ಸಂಬಂಧಪಟ್ಟ ಮಂತ್ರ

ತಂತ್ರಗಳನ್ನೂ ಹಳೆಯ ರೋಗಗಳನ್ನೂ ಕುರಿತು ಉಗ್ರವಾಗಿ ಟೀಕಿಸಿದ್ದಾರೆ; ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ'ಯನ್ನು ಸ್ಪಷ್ಟವಾಗಿ ಸಾರಿದ್ದಾರೆ; 'ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ' ಎಂಬ ಪ್ರಶ್ನೆಗೆ ಉತ್ತರಕೊಡುತ್ತಾ ಋಷಿ ವಾಕ್ಯಗಳನ್ನೂ, ಕುಮಾರಸಂಭವದ ಗಿರಿಜಾ-ಶಂಕರ ಸಂಭಾಷಣೆಯನ್ನೂ ಬಳಸಿರುವುದರಲ್ಲಿ ತುಂಬ ಔಚಿತ್ಯವಿದೆ.

'ವಿದ್ಯಾರ್ಥಿ ಕವಿಸಮ್ಮೇಲನ'ದ ಅಧ್ಯಕ್ಷ ಪೀಠದಿಂದ ಬಂದಿರುವ ಮಾತಿನಲ್ಲಿ ಅಲ್ಲಿ ನೆರೆದಿದ್ದ ಕವಿಗಳ ಕರ್ತವ್ಯವನ್ನೂ, ಸಾಹಿತ್ಯಪೋಷಕರಾದ ಹಿರಿಯರು ಅನುಸರಿಸಬಹುದಾದ ಸಾತ್ವಿಕ ಮಾರ್ಗವನ್ನೂ ಕವಿವಾಣಿಯಲ್ಲಿ ಬಣ್ಣಿಸಿದ್ದಾರೆ. 'ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ' ಎಂಬ ಭಾಷಣ ದಲ್ಲಿ ಸಾಹಿತ್ಯದ ಮೂಲಪ್ರಶ್ನೆಗಳಿಗೆ ಕೈಹಾಕಿ ತಮಗೆ ಸರಿತೋರಿದ್ದನ್ನು ಧೈರ್ಯದಿಂದ ಹೇಳಿದ್ದಾರೆ. ಇನ್ನೊಂದು ಭಾಷಣದಲ್ಲಿ ಕನ್ನಡ ಸಾಹಿತ್ಯದ ಸಂಕ್ಷಿಪ್ತ ಚರಿತ್ರೆಯಿದೆ; ಅಲ್ಲಿ ಬರುವ 'ಇದು ಹೊಂಗನಸಿನ ಪದ್ಯದ ಕಾಲ ವಲ್ಲ, ಗಟ್ಟಿಯಾದ ಗದ್ಯದ ಕಾಲ' ಎನ್ನುವ ಹೇಳಿಕೆಯಲ್ಲಿ ಸತ್ಯಾಂಶವಿದೆ; ಆದರೂ ಚರ್ಚೆಗೆ ಆಸ್ಪದವಿದೆ. 'ದೇಶದೇವಿಯ ಪೂಜೆಗೆ ಬನ್ನಿ' ಎನ್ನುವ ಆಹ್ವಾನದಲ್ಲಿ ಭಾರತಪ್ರೇಮವೂ ಇದೆ; ಕನ್ನಡದ ವಾತ್ಸಲ್ಯವೂ ಇದೆ. 'ಹೊಸ ಸಾಹಿತ್ಯ ಮತ್ತು ಹೊಸದೃಷ್ಟಿ' ಎನ್ನುವ ಭಾಷಣ ನೇರವಾಗಿ ಹೊಸ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ್ದರೂ, ಎಲ್ಲ ಜೀವಂತ ಸಾಹಿತ್ಯಗಳ ಕೆಲವು ಮುಖ್ಯ ಸಮಸ್ಯೆಗಳನ್ನು ಸೋಕುತ್ತದೆ. ಒಂದು ಮುಖ್ಯವಾದ ವಾಕ್ಯ ಬೃಂದವನ್ನು ಮಾತ್ರ ಇಲ್ಲಿ ಉದ್ಧರಿಸಿದೆ:—

> "ತರುಣತೆ, ನೂತನತೆ, ನವೀನತೆ, ಆಧುನಿಕತೆ ಈ ಪದಗಳು ಹೃದಯದ ಲಕ್ಷಣಗಳನ್ನು ವರ್ಣಿಸುತ್ತವೆ; ದೇಹದ ವಯಸ್ಸನ್ನು ಮಾತ್ರವೇ ನಿರ್ಣಯಿಸುವುದಿಲ್ಲ; ಹೊಸತು ಎನ್ನುವ ಮಾತು ಕಾಲಕ್ಕೆ ಮಾತ್ರವಲ್ಲದೆ ಆತ್ಮಕ್ಕೂ ಅನ್ವಯಿಸುತ್ತದೆ."

ಕಣ್ಣೂ ಹೊಸತು; ನೋಟವೂ ಹೊಸತು. ಈ ಮಾತನ್ನು ಸಾಹಿತಿ ಗಳು ಒಪ್ಪುತ್ತಾರೆ. ನಮ್ಮ ಜನ ಇದನ್ನೊಪ್ಪುವಂತೆ ಮಾಡಲು ಸಾಹಿತ್ಯ ಪ್ರಚಾರ ಇನ್ನೂ ಚುರುಕಾಗಿ ನಡೆಯಬೇಕು.

ವಿಮರ್ಶೆ

'**ಕಾವ್ಯವಿಹಾರ**'ದ ಮೂರು ವಿಮರ್ಶೆಗಳೂ ಹೊಸ ವಿಮರ್ಶ ಮಾರ್ಗದ ಸೊಬಗಿನಿಂದಲೂ ಶಕ್ತಿಯಿಂದಲೂ ಕೂಡಿವೆ; ಮೇಲ್ತರಗತಿಗೆ ಸೇರಿವೆ.

ಲಕ್ಷ್ಮೀಶನ 'ಸೀತಾವನವಾಸ'ವನ್ನು ಕುರಿತ ವಿಮರ್ಶೆಯಲ್ಲಿ ವಿಮರ್ಶಕರು ಆ ಕವಿಚೂತವನ ಚೈತ್ರನನ್ನು ಎಲ್ಲಿ ಏತಕ್ಕೆ ಎಷ್ಟು ಅಭಿನಂದಿಸಿದರೆ ಸಾಕೋ ಅಷ್ಟನ್ನೇ ಮಾಡಿರುವುದು ತುಂಬ ವಿವೇಕಯುತವಾಗಿದೆ. ಹಂಸಕ್ಷೀರನ್ಯಾಯವನ್ನು ಯಶಸ್ವಿಯಾಗಿ ಸಾಧಿಸಿದ್ದಾರೆ. 'ಸೀತಾವನವಾಸದಲ್ಲಿ ಮೊದಮೊದಲು ಕಂಡುಬಂದ ಕವಿಯ ಪ್ರತಿಭಾಜ್ಯೋತಿ ತುದಿಯಲ್ಲಿ ಕಂಡುಬರುವುದಿಲ್ಲ; ಸೀತಾಪರಿಗ್ರಹದಂತಹ ಮಹದ್ವಿಷಯವೂ ಕವಿಯ ವಿಶೇಷ ಲಕ್ಷ್ಯಕ್ಕೆ ಬಾಹಿರವಾದಂತಿದೆ. ತ್ಯಜಿಸಿದ ಸಹಧರ್ಮಿಣಿಯನ್ನು ಮತ್ತೆ ಸ್ವೀಕರಿಸುವುದೇನು ಕವಿತೆಯ ದೃಷ್ಟಿಯಿಂದಲೂ ಸಾಮಾನ್ಯ ಘಟನೆಯಲ್ಲ' ಎನ್ನುವ ಮಾತು ನೂರುಪಾಲು ದಿಟ. ಈ ತೊಡಕಾದ ಸಾಮಗ್ರಿಯನ್ನು ಬಳಸಿಕೊಂಡು ಸಮಂಜಸವಾಗಬಹುದಾದ ಸುಂದರ ಕಾವ್ಯವನ್ನು ರಚಿಸುವ ದಕ್ಷಕವಿ ಇಂದಲ್ಲ ನಾಳೆ ಹುಟ್ಟಬಹುದು. ಅದು ಮುಂದಿನ ಮಾತು.

ಕುಮಾರವ್ಯಾಸನನ್ನು ಕುರಿತು ಮಾತಾಡುವಾಗ ನಮಗೆ ಇಷ್ಟು ತೊಂದರೆಯಿಲ್ಲ. ಆ ಮಹಾಕಾವ್ಯದಲ್ಲಿ—ಗದುಗಿನ ಭಾರತದಲ್ಲಿ—ಎಲ್ಲರಿಗೂ ಅವರವರ ಶಕ್ತ್ಯನುಸಾರ ಸುಖವಾದ ರಸಭೋಜನವಿದೆ. ಆತನಿಗಿದ್ದಷ್ಟು ದೈವಭಕ್ತಿಯಿಲ್ಲದವರೂ ಆ ಕಾವ್ಯಶಕ್ತಿಗೆ ಕೈಮುಗಿಯಲೇ ಬೇಕು. ಭಾರತ ಆತನ ದೃಷ್ಟಿಯಲ್ಲಿ ಕೃಷ್ಣಲೀಲೆ. ಇತರ ಪಾಂಡವ ಯಾದವ ಕೌರವ ಪಾತ್ರಗಳೆಲ್ಲ ಆ ಸಾಗರದ ಮುಂದೆ ಹನಿಗಳು. ಕರ್ಣನಂತೂ ಹುಟ್ಟನಲ್ಲಿ ಪಾಂಡವ; ಋಣದಿಂದ ಕೌರವ. ಆತನು ಮಹಾ ಪರಾಕ್ರಮಿಯೂ ಹೌದು; ಧನುರ್ವಿಧ್ಯಾಧುರೀಣನೂ ಹೌದು; ಜೊತೆಗೆ ಮಹಾ ದಾನಿ. ಆದರೆ ರತ್ನಗಂಬಳಿಯಲ್ಲಿ ಅಲ್ಲಲ್ಲಿ ಮಾತ್ರ ಕಾಣುವ ಒಂದು ವಿಶೇಷ ವರ್ಣದ ರೇಶಿಮೆಯ ಎಳೆಯಂತೆ ಕರ್ಣಕಥೆ ಕನ್ನಡ ಭಾರತದಲ್ಲಿ ಬಂದಿದೆ. ಕರ್ಣನ ಬಗೆಗೆ ಕವಿ ಪ್ರಮುಖತೆಯನ್ನೂ ದಾನಮಾಡಿಲ್ಲ; ಉದಾಸೀನನಾಗಿಯೂ ಇಲ್ಲ. ಮರೆಯಲ್ಲಿ ನಿಲ್ಲಿಸುವಾಗ ನಿಲ್ಲಿಸಿ, ಮೆರಸುವಾಗ ಮಹಾರಥದಲ್ಲಿ ಮೆರಸಿ ಕವಿ ಕರ್ಣನನ್ನು ಸತ್ಕ

ರಿಸಿದ್ದಾನೆ. ವಿಮರ್ಶಕರು ತಮ್ಮ ಘನಶೈಲಿಯಲ್ಲಿ ಕರ್ಣನನ್ನು ಸಂಧ್ಯಾ ವರ್ಣದಲ್ಲಿ ಚಿತ್ರಿಸಿದ್ದಾರೆ. ಅವರ ವಿದ್ವತ್ತೂ ತಾಳ್ಮೆಯೂ ಸ್ತುತ್ಯವಾಗಿವೆ. ಆದರೆ ಈ ಸಂದರ್ಭದಲ್ಲಿ ಇಂಥ ಕರ್ಣ ದ್ರೌಪದೀಮಾನಭಂಗ ಪ್ರಕರಣ ದಲ್ಲಿ ಬೀರಿದ ಅನಾರ್ಯೋಕ್ತಿಯನ್ನೂ, ಆ ದಿನದ ಕೌರವ ಸಭೆಯ ಅನಾಗ ರಿಕ ಅಮಂಗಳದಲ್ಲಿ ಕರ್ಣನ ವರ್ತನೆ ಹೇಗಿತ್ತೆಂಬುದನ್ನೂ ಸೂಚಿಸಿದ್ದರೆ- ಸತ್ಯಕ್ಕೆ ಲೋಪ ಬರುತ್ತಿರಲಿಲ್ಲ-'ನಾರಣಪ್ಪನ ಕರ್ಣ'ನ ಪೂರ್ಣ ಚಿತ್ರ ನಮಗೆ ಸಿಕ್ಕುತ್ತಿತ್ತು. ಸರ್ವಶುದ್ಧನೂ ಸರ್ವೋತ್ತಮನೂ ಆದ ಆ ಸೂರ್ಯ ಪುತ್ರನಿಗೇ ಕೈ ಮುಗಿಯಬೇಕೆಂಬ ಹಟವೇನಿಲ್ಲ ನಮಗೆ ; ಒಂದು ದೋಷ ವಿದ್ದರೂ ಹೃದಯಪ್ರಿಯನಾದ ಕರ್ಣನಿಗೆ ಹೂ ಹಾಕಿರೆಂದರೆ ಯಾರೂ ಹಿಂದೆಗೆಯುವುದಿಲ್ಲ. ತಪ್ಪುಗಳನ್ನೇ ಹುಡುಕುವುದು ಸಣ್ಣ ದಾರಿಯಾದರೂ, ಗುಣಮಣಿಗಳನ್ನೇ ಪೋಣಿಸುವುದು ವಿಮರ್ಶೆಯ ದಾರಿಯೇ ಅಲ್ಲ.

ಹರಿಶ್ಚಂದ್ರ ಕಾವ್ಯವನ್ನು ಕುರಿತ ವಿಮರ್ಶೆ ಕಾವ್ಯಮಯವಾಗಿದೆ; ಅದರ ರೀತಿಯೂ ಕ್ರಮವೂ ಅಚ್ಚುಕಟ್ಟಾಗಿವೆ. ರಾಘವಾಂಕನ ವರ್ಚಸ್ಸು ಈ ವಿಮರ್ಶೆಯಿಂದ ಸ್ಫುಟವಾಗಿದೆ. ಒಟ್ಟಿನಲ್ಲಿ ಈ ಕಥೆಯೇ ಒಂದು ಕಣ್ಣೀರ ಕಾಲುವೆ! ಇಲ್ಲಿನ ಒಂದೊಂದು ಷಟ್ಪದಿಯೂ ಒಂದೊಂದು ದುಃಖದ ದೋಣಿ; ಅದರೊಳಗೆಲ್ಲ ನಿಟ್ಟುಸಿರು ಸುಳಿಯುತ್ತಿದೆ. ಮೇಲೆ ನೋಡಿದರೆ ಗ್ರಹಣ ಹಿಡಿದ ಸೂರ್ಯ; ಸತ್ಯಪರೀಕ್ಷೆ ಸಾಕು ಎಂದು ದೈವಕ್ಕೆ ತೋರಿದ ಕಡೆಗಳಿಗೆಯೆ ಮತ್ತೆ ಗ್ರಹಣ ಬಿಟ್ಟ ಉಜ್ಜ್ವಲ ಸೂರ್ಯ. ಇಲ್ಲಿನ ಕಥೆಯನ್ನೆಲ್ಲ ಕವಿಗಳಾದ ವಿಮರ್ಶಕರು ಹೃದಯಂಗಮವಾಗಿ ವರ್ಣಿಸಿದ್ದಾರೆ. ಒಂದೊಂದು ಕಡೆ ಮಾತ್ರ ಮೂಲಕ್ಕಿಂತ ವ್ಯಾಖ್ಯಾನ ಕ್ಲಿಷ್ಟವಾಗುತ್ತದೆ. ಸತ್ಯ ಪರೀಕ್ಷೆಯ ಚಂದ್ರಧ್ವಜದಂತೆ ಬೆಳಗುತ್ತಿರುವ ಈ ಕಾವ್ಯವನ್ನು ರಚಿಸಿದ ಕವಿಯೂ ಧನ್ಯನೇ. ಆತನ 'ಕಾವ್ಯಗಂಗೆ'ಯ ರಸತೀರ್ಥದಲ್ಲಿ ಮಿಂದ ಹೃದಯ ಸಹಾನುಭೂತಿಯ ತಪಸ್ಸಿನಿಂದ ತೇಜಸ್ವಿಯಾಗಿ ಪುನೀತವಾಗುವುದರಲ್ಲೂ ಸಂದೇಹವಿಲ್ಲ.

ಇತರ ಕೃತಿಗಳು

'ಹಾಳೂರು' ಎನ್ನುವ ನೀಳ್ಗವನ ಬಹುಶಃ ಗೋಲ್ಡ್‌ಸ್ಮಿತ್ ಕವಿಯ ಅದೇ ಹೆಸರಿನ ಕವನದಿಂದ ಪ್ರೇರಿತವಾಗಿರಬಹುದು. ಇಲ್ಲಿನ ಹೆರೋ

ಯಿಕ್ ಕಪ್ಲೆಟ್ (ದ್ವಿಪದಿ)ಗಳೂ ಸರಳವಾಗಿವೆ. ಇದು ಪ್ರಚಾರಸಾಹಿತ್ಯ. ಈ ಕವನವನ್ನು ಓದಿದವರಿಗೆಲ್ಲ ಹಾಳಾದ ಹಳ್ಳಿಯ ಬಿಕೋ ಎನ್ನುವ ಚಿತ್ರ ಕಣ್ಣಿಗೆ ಬರುತ್ತದೆ. ಆದರೆ ರಸಸಾಂದ್ರತೆಯಾಗಲಿ ಆಧುನಿಕ ಕಾವ್ಯಕರ್ಮವಾಗಲಿ ಇಲ್ಲಿ ಕಾಣದು.

'ನನ್ನಮನೆ' ಎಂಬುದು ಶಿಶು ಗೀತಗಳ ಸಣ್ಣ ಸಂಕಲನ. 'ಅರ್ಧ ಚಂದ್ರ,' 'ನನ್ನ ಮನೆ,' 'ಕಾಮನ ಬಿಲ್ಲಿನ ಕಮಾನು ಕಟ್ಟಿದೆ' ಎನ್ನುವ ಗೀತಗಳು ಮನೋಹರವಾಗಿವೆ; ಅರಿಯದ ಮಗು 'ಹಣ'ವನ್ನು ಕುರಿತು ಆಡಿರುವ ಮಾತು, ಅದರ ಮನೋಧರ್ಮಕ್ಕೆ ಮೀರಿದಂತೆ ಕಂಡರೂ, ಮುಗ್ಧತೆಯ ಗಣಿಯಾಗಿದೆ. 'ಏನೇ ಮಾಡಿ ನಿಮ್ಮ ಮಕ್ಕಳಿಗೆ ಇವನ್ನು ಕೊಳ್ಳಿ' ಎಂದು ಪ್ರಕಾಶಕರೊಂದಿಗೆ ನಾವೂ ಹೇಳುತ್ತೇವೆ.

ಮುಗಿವು

ಹದಿನಾಲ್ಕು ಪುಸ್ತಕಗಳನ್ನು ಕುರಿತು ಇಷ್ಟು ಅಲ್ಪಾವಕಾಶದಲ್ಲಿ ನಾನು ನುಡಿದಿರುವುದಕ್ಕಿಂತ ಬಿಟ್ಟಿರುವುದೇ ಹೇರಳವಾಗಿರಬೇಕು. ಆಡಿರುವ ಮಾತಿನಲ್ಲೂ ದೃಷ್ಟಿಭೇದ ಕಂಡುಬರಬಹುದು. ಎಲ್ಲ ಮಾತನ್ನೂ ತೂಕ ಮಾಡಿ ಆಡಿರದಿರಬಹುದು. ಆದರೆ ಕವಿಗಳ ಕೃತಿಗಳಲ್ಲಿ ನನಗಿರುವ ಪ್ರೀತಿ ಗೌರವಗಳಿಗೆ ಎಲ್ಲೂ ಕುಂದುಬಾರದಂತೆ ವಿನಯದಿಂದ ಒಂದೆರಡು ಮಾತನ್ನು ಬಳಸಿದ್ದೇನೆ. ಆದರೆ ಒಂದು ಮಾತನ್ನು ಮಾತ್ರ ನಾನು ಆಡ ಬಯಸುತ್ತೇನೆ. ಯಾರದೂ ಕಡೆಯ ಮಾತಲ್ಲ; ಯಾರ ಸಂತೋಷಕ್ಕೂ ಯಾರ ಅಡ್ಡಿಯೂ ಇಲ್ಲ. ಮುಚ್ಚುಮರೆ ಹೆಚ್ಚಬಾರದು. ಕಡೆ ತಡೆಯಿಲ್ಲದೆ ಕಲೆ ಬೆಳೆಯಬೇಕು. ಬಂಧನದಲ್ಲಿ ಬಂಧನಗಳನ್ನು ಕಟ್ಟಿಕೊಳ್ಳುವುದನ್ನು ಇಂದಿನ ಯುವಕರು ಪ್ರತಿಭಟಿಸುತ್ತಾರೆ. ಯಾವ ಕವಿಯೂ ನಾಡಪಾಡನ್ನು ಮರೆತು ಆತ್ಮಗತನಾಗಲು ಅವಕಾಶ ಕೊಡಬಾರದು. ಕವಿ ಜನತೆಯ ಆಸೆ, ಕಣ್ಣು, ನಾಲಗೆ; ಕವಿತೆ ಜನತೆಯ ಸಂಪತ್ತು.

ಕುವೆಂಪು ಅವರ ಕೃತಿಗಳನ್ನು ಓದಿದವರಿಗೆಲ್ಲ ಅವರ ಸಾರಸ್ವತ ಶ್ರದ್ಧೆಯೂ, ಉದಾತ್ತ ಧ್ಯೇಯಗಳೂ, ಜೀವನಾನಂದವೂ ಪ್ರತ್ಯಕ್ಷವಾಗುತ್ತವೆ. ಅವರು ಅನೇಕ ಹೊಸ ಮಾತುಗಳನ್ನೂ ಧ್ವನಿಗಳನ್ನೂ ಬಣ್ಣಗಳನ್ನೂ

ಕನ್ನಡ ಕಾವ್ಯ ಪ್ರಪಂಚಕ್ಕೆ ತಂದಿದ್ದಾರೆ. ಅವರು ಕನ್ನಡ ನುಡಿಗೆ ಸಲ್ಲಿಸಿರುವ ಹಿರಿಯ ಕಾಣಿಕೆಗಳನ್ನೂ ಅವು ಸಾರುವ ಸುದ್ದಿಗಳನ್ನೂ ನೆನೆಯುವುದೂ ನುಡಿಯುವುದೂ ಒಂದು ಹಬ್ಬದ ಕೆಲಸ. ಇಂಥ ಸಂದರ್ಭದಲ್ಲಿ ಅವರ ಕೃತಿಯ ಸುತ್ತ ಕೀರ್ತಿ ಅರಳುತ್ತದೆ. ಇದನ್ನು ತಪ್ಪಿಸುವುದು ಸಾಧ್ಯವಿಲ್ಲ. ತುಂಬಿದ ಕೆರೆಯ ಭಾಗ್ಯದ ಹರಹು ಅದರ ನೀರಮೇರೆಗೇ ನಿಲ್ಲುವುದಿಲ್ಲ; ಸುತ್ತ ಹತ್ತಾರು ಮೈಲಿಯ ಅಚ್ಚುಕಟ್ಟಿಲ್ಲ ಕಾಳು ತುಂಬಿದ ಪಚ್ಚೆಗಂಬಳಿಯಾಗುತ್ತದೆ. 'ಕು.ವೆಂ.ಪು' ಅವರ ಉತ್ತಮ ಕೃತಿಗಳನ್ನು ನೆನೆದಾಗೆಲ್ಲ ಇಂಥ ತುಂಬಿದ ಕೆರೆಗಳ ನೋಟ ಕಣ್ಣಿಗೆ ಬರುತ್ತದೆ.

ಮೈಕಾಲ ಬೆಟ್ಟದ ಹಾಡುಗಳು

ಮಧ್ಯ ಪ್ರಾಂತಗಳ ಪೂರ್ವ ದಿಕ್ಕಿನ ಮೈಕಾಲ ಬೆಟ್ಟಸೀಮೆಯ ಒಡಲಿನಲ್ಲಿ ವಾಸಮಾಡುತ್ತಿರುವ ಅಚ್ಚ ಭಾರತೀಯರಾದ ಕಾಡುಜನಗಳ ಬಳಕೆಯಲ್ಲಿರುವ ಸುಮಾರು ೬೧೯ ಪ್ರಾಚೀನ ಗೀತಗಳನ್ನು ಸಂಪಾದಿಸಿ, ಇಂಗ್ಲಿಷಿಗೆ ಅನುವದಿಸಿ ಏರ್ಪಡಿಸಿ ನಾಗರಿಕರೆಂದು ಹೇಳಿಕೊಳುವ ಜನಕ್ಕೆ ನಿವೇದಿಸುವುದು ಅಷ್ಟು ಸುಲಭದ ಕೆಲಸವಲ್ಲ. ಈ ಕೆಲಸಕ್ಕೆ ಪಾಂಡಿತ್ಯ ಎಷ್ಟುಬೇಕೋ ಅದಕ್ಕಿಂತ ಆಸಕ್ತಿ ಹೆಚ್ಚಾಗಿ ಬೇಕು. ವಿಷಯಸಂಗ್ರಹಕ್ಕೆ ಕೈಹಾಕುವ ಮನಸ್ಸು ನಿರ್ಮಲವಾಗಿ ಪ್ರೀತಿಪೂರ್ಣವಾಗಿರಬೇಕು. ವನವಾಸಿಗಳು ಅಲ್ಲಲ್ಲಿ ಹಂಚಿಹೋಗಿ ಬೆಟ್ಟಗುಡ್ಡಗಳ ಹಸುರುಕಾಡುಗಳಲ್ಲಿ ಬಾಳುತ್ತಿದ್ದಾರೆ. ಹೊರಗಿನಿಂದ ಬಂದ ಜನ ಅವರು ತಂದ ಭಾಗ್ಯ ಅವರ ಪ್ರಭಾವ ಪ್ರೇರಣೆಗಳು ಇವೆಲ್ಲವನ್ನೂ ನಮ್ಮದಾಗಿ ಮಾಡಿಕೊಳ್ಳುವ ಉತ್ಸಾಹದಲ್ಲಿ ಈ ವನವಾಸಿಗಳ ಜೀವನ ಸಂಸ್ಕೃತಿಗಳ ಸೌಂದರ್ಯವನ್ನು ನಾವು ಕಾಣದೆ ಹೋದರೆ ಭಾರತದ ವರ್ಣನೆ ಅಪೂರ್ಣವಾಗುತ್ತದೆ. ಈ ಜನದ ಸರಳತೆ, ಮನೋಧರ್ಮ, ಮಧುರ ಗೀತಗಳಿಗೆ ಎದೆಗೊಟ್ಟು ಅವರಿಂದ ಪಡೆದ ಬೆಳಕನ್ನು ಅವರ ಮೇಲೆಯೇ ಬೀರಿ ನಾಗರಿಕರಿಗೆ ಒಂದು ಚೆಲುವಿನ ಖಂಡದ ದರ್ಶನವನ್ನು ಮಾಡಿಕೊಟ್ಟಿರುವ ವೆರಿಯರ್ ಎಲ್ವಿನ್ ಮತ್ತು ಶ್ಯಾಮರಾವ್ ಹಿವಾಲೆಯವರಿಗೆ ಕಾವ್ಯಾಸಕ್ತಿಯುಳ್ಳವರೆಲ್ಲ ಕೃತಜ್ಞರಾಗಿರಬೇಕು. ಶ್ಯಾಮರಾವ ಹಿವಾಲೆಯವರಂತೂ ಭಾರತೀಯರೇ. ಅವರಿಗೆ ಈ ವಿಷಯದಲ್ಲಿ ಆಸಕ್ತಿ ಹುಟ್ಟಿದುದು ಸ್ವಾಭಾವಿಕವೇ. ಎಲ್ವಿನ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಪದವೀಧರರಾಗಿ ೧೯೨೬ರಲ್ಲಿ ವೆಲ್‌ಕಮ್ ಬಹುಮಾನವನ್ನು ಪಡೆದ ವಿದ್ವಾಂಸರು. ಅವರು ೧೫ ವರುಷಗಳ ಹಿಂದೆ ಭಾರತಕ್ಕೆ ಬಂದು ಮಧ್ಯ ಪ್ರಾಂತಗಳ ಬೆಟ್ಟ ಸರಹದ್ದಿನ ಕಾಡುಜನಗಳ ಹಳ್ಳಿಯೊಂದರಲ್ಲಿ ನೆಲಸಿ, ತಮ್ಮ ಜೀವನವನ್ನು ವನವಾಸಿಗಳ ಜೀವನ ಸಂಸ್ಕೃತಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸಿ ಸಂಪಾದಿಸಿ, ಪ್ರಕಾಶಿಸುವ ಕಾರ್ಯಕ್ಕೆ ಹೂಡಿರುವುದಂತೂ ತುಂಬ ಹೆಮ್ಮೆಯ ಸಂಗತಿ. ಅವರು ಈ ಗೀತಗಳ ಸಂಗ್ರಹದ ಜೊತೆಗೆ ಆಕ್ಸ್‌ಫರ್ಡಿನ ಭಾರ

ತೀಯ ಪುಸ್ತಕಮಾಲೆಯಲ್ಲಿ ವನವಾಸಿಗಳ ಚರಿತ್ರೆಯನ್ನು ಕುರಿತು ಪ್ರತ್ಯೇಕವಾಗಿ ವಿವರಗಳನ್ನೊದಗಿಸಿದ್ದಾರೆ. ಆಸಕ್ತಿಯುಳ್ಳವರು ಅದನ್ನೂ ಓದಬಹುದು. ಗೀತೆಗಳ ಸಂಗ್ರಹವಂತೂ ನಾವೆಂದೂ ಕಾಣದಿದ್ದ, ಇಂದಿನ ವಿದ್ಯಾಸಂಸ್ಕೃತಿಗಳ ಗಂಧವೇ ಇಲ್ಲದ ವನವಾಸಿಗಳ ಸೌಂದರ್ಯ ಹೃದಯದಂತಿರುವ ಇಂಪಿನ ತಿಳಿಗೊಳಗಳನ್ನು ತೆರೆದಿದೆ. ಸುಮಾರು ೪೦೦ ಪುಟಗಳನ್ನೊಳಗೊಂಡ ಗ್ರಂಥವನ್ನು ಕುರಿತು, ಇಲ್ಲಿ ನಾಲ್ಕು ಮಾತು ಹೇಳಿದೆ— ಗ್ರಂಥ ಪರಿಚಯ ದೃಷ್ಟಿಯಿಂದ.

ವಿಷಯಾನುಕ್ರಮಣಿಕೆಯನ್ನು ನೋಡಿದರೇ ಗೀತ ಜಾತಿಗಳ ವಿವಿಧತೆ ವ್ಯಕ್ತವಾಗುತ್ತದೆ.

೧. ಕರ್ಮಗೀತಗಳು—(ಕರ್ಮ ಎಂಬ ಜಾತಿಯ ಗಿಡದ ಕೊಂಬೆಯನ್ನು ನಟ್ಟು ಸುತ್ತ ಗಂಡೂ ಹೆಣ್ಣೂ ಕುಣಿಯುವುದು)
೨. ರೀನ, ಸುಅ ಗೀತೆಗಳು—(ದೀಪಾವಳಿ ಮತ್ತು ಚಳಿಗಾಲದ ಸ್ತ್ರೀಯರ ಕುಣಿತಗಳು)
೩. ಶೈಲ ಗೀತಗಳು—(ಗಂಡಸರ ವೃತ್ತ ಕುಣಿತಗಳು—ಋತು ಗೀತಗಳು)
೪. ದಾದರಿಯಾ ಗೀತಗಳು—ವನಭಜನ
೫. ಪ್ರೇಮ ಗೀತಗಳು
೬. ಮದುವೆ ಮಂಗಳಗಳ ಹಾಡುಗಳು
೭. ತೊಟ್ಟಿಲ ಹಾಡುಗಳು
೮. ಸಂಸಾರ ಗೀತಗಳು
೯. ಗೋಳುಕರೆ
೧೦. ಕಸಬಿನ ಹಾಡುಗಳು
೧೧. ದನಗಾಹಿಗಳ ಹಾಡುಗಳು
೧೨. ಸಾಮಾಜಿಕ ರಾಜಕೀಯ ಗೀತಗಳು
೧೩. ಹಬ್ಬದ ಹಾಡುಗಳು
೧೪. ವಿಷ ಗೀತಗಳು
೧೫. ಮತ್ತು ಒಂದು ಸಣ್ಣ ಕಾವ್ಯ—("ಹೀರಾಖಾನ ಕ್ಷತ್ರಿ")

ಪ್ರತಿಯೊಂದು ಗೀತ ಜಾತಿಯ ಇತಿಹಾಸವನ್ನೂ ವಿವರಿಸಿ, ತಾವು ಆರಿಸಿಕೊಂಡ ಹಾಡುಗಳನ್ನು ಕೊಟ್ಟು ಗ್ರಂಥದ ಪ್ರತಿಯೊಂದು ಪುಟದಲ್ಲಿಯೂ ಓದುಗರಿಗೆ ಆಸಕ್ತಿಯನ್ನುಂಟುಮಾಡುವುದು ಅಷ್ಟು ಸುಲಭವಲ್ಲ. ಅದೂ ಮಧ್ಯಪ್ರಾಂತಗಳ ವನ್ಯಭಾಷೆಗಳ ಬೈಗ, ಗೊಂಡ, ಅಗೇರಿಯ, ಪರ್ಧಾನ, ಧೋಳ, ಭರಿಯಾ ಗೀತಗಳನ್ನು ಇಂಗ್ಲೀಷಿಗೆ ತರುವುದರಲ್ಲಿ ಮೂಲ ವಿಷಯ ಮಾತ್ರ ಬಂದಿರಬಹುದು. ಆದರೆ ಅದರ ನಡೆ, ನುಡಿ, ನೋಟ, ಸುಟಿ, ಚೆಲುವು ಹೇಗೆ ಬಂದಾವು ? ಒಂದೊಂದು ಸಲ ಮಾತ್ರ ಅಸ್ಪಷ್ಟವಾಗಿ ಸುಳಿಯುವ ಅರ್ಥದ ಸಹಾಯದಿಂದ ಗೀತದ ಆತ್ಮವನ್ನು ಕಾಣಬಹುದು. ಇಂಗ್ಲಿಷ್ ಅನುವಾದದ ಹೆಜ್ಜೆ ಹಿಡಿದು ಕನ್ನಡದಲ್ಲಿ ನಾವು ತರುವುದೆಷ್ಟೋ ಅರಿಯದೆ ಕೈ ಬಿಡುವುದೆಷ್ಟೋ? ಅಂತೂ ನನಗೆ ಈ ಸಂಗ್ರಹ ಒಂದು ಬಗೆಯ ಭ್ರಮೆ ಹಿಡಿಸಿದೆ. ಮಧ್ಯಪ್ರಾಂತಗಳ ಆ ವನವಾಸಿಗಳ ಕಾವ್ಯನಿಧಿಯನ್ನು ಕಾಣಲು ಬಯಸುವ ಜನ ಅವರ ಭಾಷೆಗಳನ್ನು ಕಲಿತರೇ ಚೆನ್ನು. ಆ ಭಾಷೆಗಳ ಪರಿಚಯವಿಲ್ಲದವರಿಗೆ ಸಹಾಯವಾಗಲೆಂದು ಈ ಇಂಗ್ಲಿಷ್ ಅನುವಾದ. ಸುಮ್ಮನೆ ನನ್ನ ಚಪಲತೆಗೆ ನಾನು ಕನ್ನಡಕ್ಕೆ ಸ್ವಲ್ಪ ಅಳುಕಿನಿಂದಲೇ ತಂದಿರುವ ಒಂದೆರಡು ಚೂರು ಹಾಡುಗಳನ್ನು ಇಲ್ಲಿ ಕೊಡುತ್ತೇನೆ. ಪ್ರೇಮಗೀತಗಳ ಕಡೆಗೇ ನನ್ನ ಪಕ್ಷಪಾತವಿದ್ದರೆ ಉದಾರ ಹೃದಯರು ಕ್ಷಮಿಸುವರೆಂದು ನನ್ನ ನಂಬಿಕೆ. ಆಯಾ ಹಾಡುಗಳ ಮುಕ್ತಕಗಳ ಸಂದರ್ಭಗಳನ್ನು ವಿವರಿಸುವುದಕ್ಕಿಂತಲೂ, ಸುಮ್ಮನೆ ಅದನ್ನೆಲ್ಲ ಓದುಗರ ಕಲ್ಪನೆಗೆ ಬಿಟ್ಟರೆ ಅನುಕೂಲವಾದೀತೆಂದು ನಾನು ತೀರ್ಮಾನಿಸಿದ್ದೇನೆ.

(ಒಲುಮೆಯ ಹಾಡು)

೧

ಮಣ್ಣಿನಿಂದಾಯಿತು ಮೃದಂಗ. ಅದು ನಿರ್ಮಿಸುವ
  ಹಾಡೆಂಥ ಜೇನು, ಇನಿಯ :
ಮಣ್ಣಿನಿಂದಾವೆ ನಾನೂ ; ನನ್ನ ಕೂಡಿಕೋ
ಒಲುಮೆಯೊಳಗೆನ್ನ ಳವಡಿಸು, ಆಗೆನ್ನಿಂದ
  ಹಾಡೊಂದು ಮೂಡಬಹುದು.

೨

ಅಂಗಳದಲಿ ದುಂದುಮೆಂದು ದುಡಿಯುತಿದೆ ಮೃದಂಗ
ನಡುಮನೆಯಲಿ ಫಿಡಲನಾರೊ ನುಡಿಸುತಿರುವರು.
ಹಳ್ಳಿಯಲ್ಲಿ ಏಳು ಬಣ್ಣದಿಂಪಿನಿರಿಚಲು
ಏನೇನಿರಲೆನ್ನ ಬದುಕು ಸಂತಸವನು ಕಾಣಲು
ನಿನ್ನ ಸಿರಿನ ಗೆಳೆತನವನು ಬಯುಸುತಿರುವುದು.

೩

(ಗಂಡುಬೀರಿ)

ಮುಡದಿ ಗಟ್ಟಿಗಳಾಗಿ ಮೈ ಬಂದು ಮೆರೆವಾಗ
ಕೈ ಹಿಡಿದ ಗಂಡನೆ ಅದೃಷ್ಟಶಾಲಿ
ಹಸ್ತಬಲದಿಂದಾಕೆ ಬಂಡಿಯನು ಎಳೆವಾಗ
ಎಮ್ಮೆಗಳು ಬೇಕೆ, ಹೇಳಿ!

ಮುಡದಿಯೇ ಸೂರಿನೆತ್ತರ ಬೆಳೆದು ನಿಂತಿರಲು
ಕಂಬಗಳು ಬೇಕೆ ಮನೆಗೆ ?
ಬಲವಾದ ಏತದಂತಿರಲು ಆಕೆಯ ಕಾಲು
ಬತ್ತವನು ಕುಟ್ಟಬಹುದೆ ?

ಕಣ್ತೆರೆಯಲಾಕೆ ಮಿಂಚಿನ ದಾರ ಬರುತಿರಲು
ಮನೆಗೆ ಆ ದೀಪವೇ ಸಾಕು
ಚೆಲುವು ಹದಗೆಟ್ಟು ಉರಿಸಿಂಗಿಯಾಗಿರಲವಳು
ಆಹ ! ನಿನಗಿನ್ನೇನು ಬೇಕು ?

೪

(ಒಲುವಿನ ತೂಗು)

ತೂಗು ತೂಗು ರಾಣಿ–ರಾಜ*
ಗುಲಾಬಿ ಹೂಗಳು ಅರಳುವ ತನಕ;
ತೂಗು ತೂಗು ರಾಣಿ-ರಾಜ*

ಹೊಂದಾವರೆ ಕಣ್-ತೆರೆಯುವ ತನಕ ;
ತೂಗು ತೂಗು ರಾಣಿ-ರಾಜ*
ಕೆಂಡಸಂಪಗೆ ಬಿರಿಯುವ ತನಕ.

(ಒಲವಿನ ಗಾಳಿ)

ಯೌವನದ ಬಲಿತ ಕಣ್‌ಗಳ ತೆರೆದು ನೋಡೆನ್ನ ;
ಚಳಿಹಗಲ ತುಂಬ ಬನವೆಲ್ಲ ಹೂಗಳ ತೊಟ್ಟು,
ಬೆಟ್ಟದೆದೆಯಿಂದ ಬೀಸುವ ಗಾಳಿ ಅಬ್ಬರಿಸಿ
ಹೆಮ್ಮರದ ತಲೆಯು ತುಳಿದಿರಲು
ಕೈ ಹಿಡಿದು ಬಾರೆನ್ನ ನೆರಳಿನಂಚಿನಲಿ
ಯೌವನದ ಬಲಿತ ಕಣ್‌ಗಳ ತೆರೆದು ನೀನೆನ್ನ
ಗೆದ್ದವನು, ಬಾರೆನ್ನ ದೊರೆಯೆ !

(ಆಸೆಯ ಬಾಣ)

ನನ್ನ ಮಂಚವಿದೊಂದು ಗೆಜ್ಜೆ ಕಟ್ಟಿದ ಎತ್ತು
ನೀನಿಲ್ಲದಾಗ ಅದು ಸುಮ್ಮನಿತ್ತು.
ಹಳ್ಳಿಯ ಗಮಾರನೇ, ಮೊದಲ ಮೋಹವ ಕಳೆದು
ಹತ್ತು ದಿನಗಳಲಿ ನೀ ಬಹೆಯೆಂದು ನಾನಿರಲು
ನೀ ಬಂದೆ ಒಂದು ತಿಂಗಳು ಕಳೆದ ಮೇಲೆ.
ಈಗ ಎನ್ನರಸ ನೀನಿರಲು ಬಲು ದೂರದಲಿ
ದಿನ ಉರುಳಿದಂತೆಲ್ಲ ದೂರವಾಗಿ
ನಿನ್ನ ನೆನಹೆನ್ನ ಹೃದಯದಲಿ ತಲೆಯೆತ್ತಿಹುದು
ಹಂಬಲದ ಗೆಲುಗಂಬವಾಗಿ.

ಬನ್ನಿ ಹುಡುಗರ ಆಡುವ ಬನ್ನಿ
ಎರಡೇ ದಿನ ಈ ಬಾಳು
ಬೇಕಾದವಳನು ಕೊಳ್ಳಿರಿ ಬನ್ನಿ
ಎರಡೇ ದಿನ ಈ ಬಾಳು.

---

*ಪ್ರೇಮ

ಬಿದಿರಿನಂತೆ ಬಳುಕುವಳೀ ಹೆಣ್ಣು
ಎರಡೇ ದಿನ ಈ ಬಾಳು.
ಪಯಿರಿನಂತೆ ತೊನೆವಳು ಆ ಹೆಣ್ಣು
ಎರಡೇ ದಿನ ಈ ಬಾಳು.

ಮೂಲದ ಮುಖ್ಯಾರ್ಥವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು, ಸುಮ್ಮನೆ ಹಾಗೂ ಹೀಗೂ ನೂತಿರುವ ಈ ಅನುವಾದಗಳಲ್ಲಿ ನನಗೆ ಸಂಶಯವಿದ್ದರೂ ನನ್ನೆದುರಿಗಿರುವ ಪುಸ್ತಕದ ವಿಸ್ತಾರವನ್ನು ಸರಿಗಟ್ಟುವ ಅವಲೋಕನ ವಿದೆಂದು ನಾನು ನಂಬದಿದ್ದರೂ ಅದರ ಸ್ಥೂಲ ಪರಿಚಯ ಮಾಡಿಕೊಡುವು ದೊಂದೇ ನನ್ನ ಗುರಿ. ಈ ಸಂಗ್ರಹದಲ್ಲಿ ಅಲ್ಲಲ್ಲಿ ಹೊಳೆಯುವ ಉಪಮೆಗಳ ಸೊಗಸು, ನಿತ್ಯ ಯೌವನ, ಭಾವಗಳ ತಿರುಗುಮುರುಗದಲ್ಲಿ ಮಿಂಚುವ ಧ್ವನಿಯ ಹೊಳಲು; ನಮಗೆ ಹೊಸದಾಗಿ ಕಾಣುವ ನೇರವಾದ ದಾರಿ, ಮಟ್ಟು, ಸರಳತೆ; ಒಂದೊಂದು ಸಲವಂತೂ ಯಾವ ನಾಗರಿಕ ಭಾಷೆಯ ಉತ್ತಮ ಭಾವಗೀತಗಳ ಜೊತೆಯಲ್ಲಾದರೂ ಸರಿಸಮ ನಿಲ್ಲಿಸಬಹುದಾದ ಗೀತಾರತ್ನಗಳು; ವನವಾಸಿಗಳ ಜೀವನದ ಪ್ರಭಾವಗಳಂತಿರುವ ಬೆಟ್ಟ ಬಯಲು ಬನ ಬಾನ್ಗಳ ಸೊಂಪನ್ನು ಗೀತಗಳಲ್ಲಿ ಉಪಯೋಗಿಸಿಕೊಳ್ಳುವ ವಿಶೇಷ ರೀತಿಗಳು—ಇವನ್ನೆಲ್ಲ ನೆನಸಿಕೊಂಡರೆ ತುಂಬ ಸಂತೋಷವಾಗು ತ್ತದೆ. ಸಾಹಿತ್ಯಕ್ಕೂ ಜೀವನಕ್ಕೂ ಸಂಬಂಧವಿದ್ದರೆ ಅದು ಎಂಥ ಸಂಬಂಧ, ಅದನ್ನು ಕಟ್ಟುವುದು ಹೇಗೆ ಎಂಬುದು ಅವೆರಡರ ಹೃದಯವನ್ನು ಅರಿತವ ರಿಗೆ, ಇಂಥ ಸ್ವಾಭಾವಿಕ ಕವಿಗಳಿಗೆ ತಿಳಿದಿತ್ತು ಎಂದು ಕಾಣುತ್ತದೆ. ಅವರ ಆಯ್ಕೆ ಯಾರನ್ನಾದರೂ ಬೆರಗುಗೊಳಿಸುತ್ತದೆ. ಅವರ ಕೃತಿಗಳಲ್ಲಿ—ಅದು ಅಸ್ಪಷ್ಟವಾಗಿ, ಒಂದೊಂದು ಸಲ ನಡುದಾರಿಯಲ್ಲಿ ಮಾಯವಾದ ಸಾಲು ಮರಗಳಂತೆ ಭ್ರಮೆಗೊಳಿಸಿದರೂ—ಧನ್ಯತೆಯಿದೆ. ಮಾತಿನಲ್ಲಿ ಅದರಲ್ಲೇ ಮುಗಿಯುವ ಮೆರೆತವಿಲ್ಲ. ಅದರ ಹಿಂದೆ ಭಾವದ ಗಣಿಗಳಿವೆ.

ಇಲ್ಲಿನ ೬೯೯ ಕವಿತೆಗಳನ್ನು ಇಂಗ್ಲಿಷಿಗೆ ತಂದು ವಿಶಾಲ ಪ್ರಪಂಚದ ಸಾಹಿತ್ಯ ಸಂತೋಷಕ್ಕೆ ಕಾಣಿಕೆ ಕೊಟ್ಟಿರುವ ಸಂಶೋಧಕರಿಬ್ಬರಿಗೂ ದೇಶದ ಜನ ತುಂಬ ಕೃತಜ್ಞರು. ಅವರ ಸಂಶೋಧನೆಯ ಕಾರ್ಯಕ್ರಮ ಗಳು ಯಶಸ್ವಿಯಾಗಿ ನೆರವೇರಲಿ.

ತುಂಗಭದ್ರೆ

"ಈ ತುಂಗಭದ್ರೆ ಹೊಳೆಯಲ್ಲ, ವರುಷದ ಮಗಳು........"

ನಮ್ಮ ತುಂಗಭದ್ರೆ ಹುಟ್ಟಿದಮೇಲೆ ನನ್ನ ಮನೋಧರ್ಮವೇ ಬದಲಾಯಿಸಿದೆ. ಒಂದು ಕಾಲದಲ್ಲಿ ನನ್ನ ಮನಸ್ಸಿನಲ್ಲಿ ಒಂದು ಬಗೆಯ ಸಿಡುಕು ಅಬ್ಬರಗಳ ಸಿಡಿಲುಮಿಂಚುಗಳು ಹೆಡೆಯಾಡುತ್ತಿದ್ದವು; ಮಾತು ಮಳೆಯಂತೆ ಸುರಿಯುತ್ತಿತ್ತು. ಅದೊಂದು ಬಾಳಿನ ಮಳೆಗಾಲ. ಅದನ್ನು ದಾಟಿದ ಮೇಲೆ ಹಿಂದೆ ಆದುದನ್ನೆಲ್ಲ ನೆನೆದರೆ ಈಗ ನನಗೇ ನಗುಬರುತ್ತದೆ. ಒಂದು ವೇಳೆ ನಾನು ಅದನ್ನೆಲ್ಲ ಮರೆತವನಂತೆ ಸುಮ್ಮನಿದ್ದೇನು! ಆದರೆ ಈ ಮೀನಾಕ್ಷಿ—ಸರ್ವಸಾಕ್ಷಿ—ಒಂದೊಂದು ಸಲ ಅರಿತೋ ಅರಿಯದೆಯೋ 'ಏನ್ರೀ ನೀವು ಹೀಗಿರಲಿಲ್ಲವಲ್ಲ? ಈಗೇನೋ ನನ್ನ ಪುಣ್ಯ!' ಎಂದು ಹಳೆಯ ದಿನಗಳನ್ನು ಮಗುಚಿಹಾಕುವಾಗ ನನ್ನ ಜೀವ ಜಿಲ್ಲೆನ್ನುತ್ತದೆ. ಉಪಕಾರಿಗಳು ತಾವು ಮಾಡಿದ್ದನ್ನು ಆಡಬಾರದು ಎನ್ನುವುದು ಲೋಕನೀತಿ. ಇದು ಅಪಕಾರಿಗಳಿಗೂ ಅನ್ವಯಿಸುತ್ತದೆ. ನಾನು ಆಡಿದ್ದು ಮಾಡಿದ್ದು ಏನೇನಿವೆಯೋ ಅವೆಲ್ಲ ಹೊಸಿಲ ಒಳಗಿದ್ದರೇ ಚೆನ್ನು ಎಂದು ನಾನು ಬಿಗಿ ಹಿಡಿದರೆ, ನಮ್ಮ ತುಂಗಭದ್ರೆ ಹೊಸಿಲ ದಾಟಿದ ದಿನವೇ ನನ್ನ ಅಂತರಂಗದ ನೆಳಲು ಬೆಳಕೆಲ್ಲ ಬೀದಿಗೆ ಬಂದದ್ದು ನನಗೆ ಇಷ್ಟವಿಲ್ಲ.

ಸಂಸಾರ ಹೂಡಿದ ಮೊದಲಲ್ಲಿ—ಆ ಕಾಲ ಚೆನ್ನಾಗಿತ್ತು—ನನಗಾಗಲಿ ನನ್ನವಳಿಗಾಗಲಿ ನನ್ನ ಸರ್ವಾಧಿಕಾರದ ರೂಪರೇಖೆಗಳು ಗೊತ್ತಾಗಲಿಲ್ಲ. ನಾನು ಹೇಳಿದಂತೆ ಆಕೆ ನಡೆದುಕೊಂಡಳು. ನನ್ನ ಅಭಿರುಚಿ ಅಭಿಪ್ರಾಯಗಳನ್ನೇ ಸಮರ್ಥಿಸಿದಳು. ನಾವು ಮುಖ್ಯವಾಗಿ ಪುಣ್ಯಶಾಲಿಗಳು. ಗಂಡನನ್ನು ದೇವರು ಎಂದು ಭಾವಿಸಬೇಕು ಎಂದು ಹೆಣ್ಣಿಗೆ ಸದಾಕಾಲ ಉಪದೇಶಮಾಡಿದ ಮೇಲೆ, ಆ ಗಂಡ ದೇವರಲ್ಲ ಎನ್ನುವ ಪ್ರತಿಕೂಲಭಾವನೆ ಹೆಣ್ಣಿನ ಮನಸ್ಸನ್ನು ಆಕ್ರಮಿಸಿಕೊಳ್ಳಲು ಸ್ವಲ್ಪಕಾಲ ಬೇಕಾಗುತ್ತದೆ. ಆ ನಡುಗಾಲದಲ್ಲಿ ಪ್ರೇಮದ ವಸಂತೋದ್ಯಾನ ಮಿಂಚುತ್ತದೆ. ಆಗ ಅರಳದ ಹೂವಿಲ್ಲ; ಹಾಡದ ಹಕ್ಕಿಯಿಲ್ಲ. ನಾನು ಅಹಿಂಸೆಯನ್ನು ಆಚರಣೆಗೆ ತಂದಿದ್ದರೂ, ಆಕೆಯನ್ನು ರಕ್ಷಿಸುವ ಭಾರ ನನ್ನದೆನ್ನುವ ಗೌರವದ ಪ್ರಭಾವದಿಂ

ದಲೋ ನನ್ನ ಪ್ರೇಮದ ಅನಂತಭಾಗ್ಯವೇ ಆಕೆಗೆ ಸಾಕಾದೀತು ಎನ್ನುವ ಅಂದಾಜಿನಿಂದಲೋ ಆಕೆಯ ಅಭಿಪ್ರಾಯಗಳಿಗೆ ಮನ್ನಣೆಕೊಡುವ ಅಗತ್ಯ ನನಗೆ ತೋರಲಿಲ್ಲವೆಂದೇ ಒಪ್ಪಿಕೊಳ್ಳುತ್ತೇನೆ. ಒಳ್ಳೆಯ ಸಂಪ್ರದಾಯವನ್ನ ನುಸರಿಸಿದಾಗಲೂ ಹೀಗಾದರೆ ಏನು ಗತಿ? ನಮ್ಮ ತುಂಗಭದ್ರೆ ಹುಟ್ಟಿದ ಮೇಲೆ ಮೀನಾಕ್ಷಿಯ ಮನಸ್ಸು ನದಿಯಂತೆ ಕವಲೊಡೆದು ಒಂದು ಸಂತೋಷದ ದ್ವೀಪವನ್ನು ಕಟ್ಟಿಕೊಂಡು ಮಗುವನ್ನು ಕಣ್ಮನಗಳ ಕಾವಲಿನಲ್ಲಿ ಅಲ್ಲಿಟ್ಟು ತೂಗಿಕೊಳ್ಳುತ್ತಿರುವುದನ್ನು ನಾನು ನೋಡುತ್ತಿದೇನೆ. ತನ್ನ ಮಗು ತನಗಿಂತ ಚೆಲುವಾಗಿರುವುದನ್ನು ಕಂಡು ಆಕೆ ಹಿಗ್ಗುತ್ತಾಳೆ. ಇದು ನಿಮ್ಮ ಮಗು ಎಂದು ಅದನ್ನು ನನ್ನ ಕಡೆ ತಳ್ಳುತ್ತಾಳೆ. 'ನನ್ನ ಚಿನ್ನ' ಎಂದು ಅದನ್ನು ಮತ್ತೆ ಕಸಿದುಕೊಳ್ಳುತ್ತಾಳೆ. ಈ ನಡವಳಿಕೆಯ ಹಿಂದೆಲ್ಲ ಮಾತಿಗೆ ನಿಲುಕದ ಭಾವ ಸಂಚಾರವಿದೆ. ಒಬ್ಬಳೇ ಬೀದಿಯಲ್ಲಿ ಓಡಾಡುತ್ತಿದ್ದವಳ ತೋಳಿನ ಬಳಸಿನಲ್ಲಿ ಈ ಮಗು ನಕ್ಷತ್ರದಂತೆ ಮಿನುಗುತ್ತಿದೆ. ನನಗೆ ನನ್ನ ಸಂಸಾರ ಹೊರೆಯಲ್ಲ; ಆಕೆಗೆ ತನ್ನ ಮಗು ಭಾರವಲ್ಲ. ಆಕೆಯ ಚೆಲುವಿಗೆ ಒಲಿದಿದ್ದ ನನ್ನ ಮನಸ್ಸು, ಈಗ ಆಕೆಯ ಸಂತೋಷಕ್ಕೆ ಬೆರಗಾಗಿದೆ.

ನಮ್ಮ ತುಂಗಭದ್ರೆ, ಸುಮ್ಮನಿರುವ ಮಗಳಲ್ಲ. ಒಂದು ಕಾಲದಲ್ಲಿ ನನ್ನ ಕೋಣೆಯಲ್ಲಿ ವ್ಯವಸ್ಥೆಯಿತ್ತು. ಪುಸ್ತಕಗಳು, ಕಾಗದ,, ಪೆನ್, ಪೆನ್ಸಿಲ್, ದೀಪ, ಕನ್ನಡಿ ಎಲ್ಲಿ ಬಿದ್ದಿದ್ದರೆ ಅಲ್ಲೇ ಬಿದ್ದಿರುತ್ತಿದ್ದುವು. ನಾನು ಪದ್ಯ ಬರೆಯಲು ಯಾವ ಆತಂಕವೂ ಇರಲಿಲ್ಲ. ಗದ್ಯ ಬರೆದರೂ ಬೇಡ ಎನ್ನುವ ದೈವವಿರಲಿಲ್ಲ. ಆ ಕಾಲದಲ್ಲಿ ಕಾದಂಬರಿ ಬರೆಯುವ ಮನಸ್ಸು ಬಂದಿದ್ದರೆ ಆ ಕೆಲಸವನ್ನೂ ಮಾಡಿ ಮುಗಿಸಿ ಕನ್ನಡದ ಸೇವೆಯನ್ನು ಮಾಡಬಹುದಾಗಿತ್ತು! ಆದರೆ ಈಗ? ಗದ್ಯ ಓಡಿಹೋಯಿತು: ಕಾದಂಬರಿಯ ಕಾಟವಿಲ್ಲ. ಪದ್ಯ ಬರೆಯುವುದೂ ತುಂಬ ಕಷ್ಟವಾಗಿದೆ. ಮನಸ್ಸಿಗೆ ಸಂತೋಷ ಒದಗಿದೆ; ಆದರೆ ವಿರಾಮಕ್ಕೆ ಪೂರ್ಣವಿರಾಮ. ಬಾಗಿಲು ಹಾಕಿಕೊಂಡು ಬರೆಯುವುದಕ್ಕೆ ಕುಳಿತರೆ, ಈ ಮಗಳು ಬಿರುಗಾಳಿಯಂತೆ ಆಗಾಗ ಒಳಕ್ಕೆ ನುಗ್ಗುತ್ತಾಳೆ. ನನ್ನ ಪೂಜ್ಯವಸ್ತುಗಳೆಲ್ಲ ಇವಳಿಗೆ ಆಟದ ಬೊಂಬೆಗಳಾಗಿವೆ. 'ಅಶ್ವತ್ಥಾಮನ್' ರುದ್ರನಾಟಕದ ಪುಸ್ತಕವನ್ನು ತೆರೆದುನೋಡಿ. ಅದರ

ಪರಿಸ್ಥಿತಿ ರುದ್ರವಾಗಿಯೇ ಇದೆ. ಗೋಕಾಕರ 'ಸಮುದ್ರ ಗೀತೆಗಳು' ನೀರ ಪಾಲಾಗಿವೆ. 'ದೀಪದ ಮಲ್ಲಿ' ಎಣ್ಣೆಯನ್ನು ಕುಡಿದಿದೆ. ನನ್ನ ಹೊಸಹಾಡುಗಳ ಮೈ ಮೇಲೆಲ್ಲ ತುಂಗಭದ್ರೆಯ ಬಗೆ ಬಗೆಯ ಅಲಂಕಾರಗಳು. ಇನ್ನು ಯಾರಾದರೂ ಈ ಕೆಲಸವನ್ನು ಮಾಡಿದ್ದರೆ—ಕಡೆಗೆ ಮೀನಾಕ್ಷಿಯೇ ಹೀಗೆ ಮಾಡಿದ್ದರೂ ಸರಿಯೆ, ನನ್ನ ರೋಷಪ್ರಳಯದಲ್ಲಿ ಅವರು ತೇಲಿಹೋಗುತ್ತಿದ್ದರು. ಆದರೆ ಈ ತುಂಗಭದ್ರೆಯ ಮಂದಹಾಸದಲ್ಲಿ ಯಾವ ಕವಿಗೂ ನಿಲುಕದ ಕಾವ್ಯವಿದೆ. ಅವಳ ಅಳುವಿಗೂ ನಗುವಿಗೂ ನಡುವೆ ಒಂದು ಕೂದಲೆಳೆಯಷ್ಟೇ ಅಂತರ. ಆ ಅಂತರವನ್ನು ಕಾಪಾಡುವುದೇ ನನ್ನ ಭಾರವಾಗಿದೆ.

ನನ್ನ ಹಟ ಈಗೇನೋ ನಡೆಯುವಂತಿಲ್ಲ. ಮಗು ಹಟ ಹಿಡಿದರೆ ಅವಳನ್ನು ಸುಮ್ಮನಾಗಿಸುವ ಕರ್ತವ್ಯ ನನ್ನ ಪಾಲಿಗೆ ಬಂದಿದೆ. ಮೀನಾಕ್ಷಿಯ ಮನಸ್ಸು ಮಗಳ ಮೇಲೆ ತುಂಬಿಕೊಂಡಿದ್ದರೂ, ಆಕೆಗೆ ಮನೆಗೆಲಸ ಸಾಕಾದಷ್ಟಿದೆ. ಅದೂ ಅಲ್ಲದೆ ಆಕೆಗೆ ಆಲಸ್ಯವಾದರೆ ಆ ಕೆಲಸವು ನನಗೆ ಬಿದ್ದೀತೆನ್ನುವ ಭಯದಿಂದ, ಮಗುವನ್ನು ತಡೆಯುವ ಕೆಲಸವನ್ನು ನಾನು ಸುಮ್ಮನೆ ಒಪ್ಪಿಕೊಂಡಿರುತ್ತೇನೆ. ನಾನು ಮನೆಯಲ್ಲಿತಾನೆ ಹಗಲೆಲ್ಲ ಇರಬೇಕಾಗಿದೆಯೇ? ಬೆಳಗಾಗ ಹತ್ತುಗಂಟೆಗೆ ಮನೆಯನ್ನು ಬಿಟ್ಟರೆ ಮತ್ತೆ ಗೃಹಪ್ರವೇಶ ರಾತ್ರಿ ಸರಿಹೊತ್ತಾದರೂ ಆದೀತು. ಭಾನುವಾರ, ರಜಾದಿನಗಳು ಮತ್ತು ಉಳಿದ ಕೆಲವು ದಿನಗಳಲ್ಲಿ ಬೆಳಗಿನ ಹೊತ್ತು ನನಗೆ ತುಂಗಭದ್ರೆಯನು ತಡೆಯುವ ಕೆಲಸ ಒದಗುತ್ತದೆ. ಹೀಗೆ ಅಗತ್ಯವಾಗಿ ಒದಗಿದ ಸ್ನೇಹ ಅಸಾಧ್ಯವಾಗಿ ಬೆಳೆಯುತ್ತಿದೆ. ಅವಳು ಕರ್ಪೂರದ ಬೊಂಬೆಗೆ ಕಥೆ ಹೇಳುತ್ತಾಳೆ; 'ಭಾಗ್ಯದ ಲಕ್ಷ್ಮಿ ಬಾರಮ್ಮ' ಎನ್ನುವ ಹಾಡನ್ನು ಮುದ್ದಾಗಿ ಹಾಡುತ್ತಾಳೆ, 'ಎಂ.ಬಿ. ಬಿ.ಎಸ್. ಓದುತ್ತೇನೆ; ಗಂಡ ಬೇಡ' ಎನ್ನುತ್ತಾಳೆ. ನನ್ನ ಪಠದ ಮುಂದೆ ದೀಪ ಇಟ್ಟು 'ಗ್ರೀಕಿ'ನಲ್ಲಿ ಭಜನೆ ಮಾಡುತ್ತಾಳೆ. ಅಲ್ಲದೆ ಇತ್ತೀಚಿಗೆ ನನ್ನನ್ನು ಹೆಸರು ಹಿಡಿದು ಕೂಗುತ್ತಾಳೆ. ಅವಳು ಏನು ಮಾಡಿದರೂ ಸರಿಯೆ, ಚೆನ್ನೇ. ಅವಳ ಮನಸ್ಸು ನನಗೆ ಅರ್ಥವಾಗುತ್ತದೆ; ಅವಳ ಮಾತು ಅಸ್ಪಷ್ಟವಾದರೂ ಅರ್ಥದ ಹತ್ತಿರವೇ ಸುಳಿಯುತ್ತದೆ. ಅವಳು ಕಟ್ಟುವ ಆವರಣದಲ್ಲಿ ನಿರ್ಮಲವಾದ ಸ್ವಪ್ನ ಸರೋವರಗಳಿವೆ;

ಅವಳ ಭಾಷೆಯಲ್ಲಿಯೇ ಉತ್ತರ ಕೊಟ್ಟರೆ ಸಂತೋಷದಿಂದ ಅವಳ ಕಣ್ಣು ಗಳು ಮಿಂಚುತ್ತವೆ. ತಾಯಿಯ ಮುಂದೆ ತಂದೆಯ ಹಿಂದೆ ಓಡಾಡಿ ನಾವು ಎಂಥ ಜನ ಎಂಬುದು ಅವಳಿಗೂ ತಿಳಿಯುತ್ತ ಬಂದಿರಬೇಕು. ನಾವು ಆಡಿದ್ದನ್ನೆಲ್ಲ ಅವಳೂ ನುಡಿದುಬಿಟ್ಟಾಳೆಂದು ನಾವೂ ಜಾಗರೂಕತೆ ಯಿಂದ ನಡೆದುಕೊಳ್ಳುವ ಸಂದರ್ಭ ಒದಗಿದೆ.

ಹಿಂದೆಲ್ಲ ನಾನು ಪದ್ಯ ಏಕೆ ಬರೆದೆನೋ ನಾನು ಹೇಳಲಾರೆ. ಈಗ ನಮ್ಮ ತುಂಗಭದ್ರೆಗೆ ನಿದ್ದೆಯನ್ನು ತರುವುದಕ್ಕೆ ಮಾತ್ರ ಪದ್ಯ ಬರೆಯಬೇಕಾ ಗಿದೆ; ಸಂಗೀತ ಬರದಿದ್ದರೂ ಹಾಡಲೇ ಬೇಕಾಗಿದೆ. ತೊಟ್ಟಿಲಲ್ಲಿ ಕೆಡವಿ, ತೂಗಿ, ಹಗ್ಗವನ್ನು ಕೈಬಿಟ್ಟರೆ ಇವಳ ಕಣ್ಣು ಬೆಳ್ಳಿಯ ಬಟ್ಟಲಿನಂತೆ ಅರಳು ತ್ತದೆ. ಆ ಬಟ್ಟಲಿನಲ್ಲಿ ಸಾಕಾದಷ್ಟು ನಿದ್ದೆಯನ್ನು ತಂದು ತುಂಬಲು ಒಂದು ಹಾಡು ಬೇಕೇ ಬೇಕು. ನೆನ್ನೆ ಹಾಡಿದ ಹಾಡು ನನಗೇ ಇಂದು ಬೇಸರವಾಗುತ್ತದೆ. ಅದನ್ನು ಇವಳಿಗೆ ಹೇಗೆ ಒಪ್ಪಿಸುವುದು? ಇದಕ್ಕಾಗಿ ಈಗೊಂದು ಆಗೊಂದು ಹಾಡು ಹುಟ್ಟುತ್ತದೆ.

ಬಿರುಗಾಳಿಯಂತಿದ್ದ ನನ್ನ ಮನಸ್ಸು ಹೀಗೆ ಬೆಳುದಿಂಗಳ ಕಡೆಗೆ ಒಲಿ ಯುತ್ತಿರುವುದಕ್ಕೆ ಈ ತುಂಗಭದ್ರೆಯೆ ಕಾರಣ. ನಾನು ಏನು ಮಾಡು ವಾಗಲೂ ಅವಳ ಆಸೆ ಮನಸ್ಸು ನನ್ನನ್ನು ಸೆಳೆಯುತ್ತವೆ. ನಾನು ಕಲಿತ ದ್ದನ್ನು ಮರೆಯಲೂ, ಹೊಸದನ್ನು ಕಲಿಯಲೂ ಅವಳ ಗುರುಕುಲದಲ್ಲಿ ಅವ ಕಾಶವಿದೆ. ಮೀನಾಕ್ಷಿಕೂಡ ಮಾತಾಡುವಾಗಲೂ ಎಂದೂ ಇಲ್ಲದ ಗಾಂಭೀರ್ಯ ಒದಗುತ್ತದೆ. ಇದರ ಇಂಗಿತವನ್ನು ಆಕೆ ಅರಿಯದವಳೇನಲ್ಲ!

ಮೊನ್ನೆ ಸಂಜೆ ಮನೆಗೆ ಬಂದಾಗ ತುಂಗಭದ್ರೆ ಬೃಂದಾವನದ ಹತ್ತಿರ ಆಡುತ್ತಿದ್ದಳು. ನಾನು ಒಳಗೆ ಬಂದದ್ದನ್ನು ನೋಡಿ ತಾನು ಓಡಿಬರುವ ಅವಸರದಲ್ಲಿ ಹೊಸಿಲ ಬಳಿ ಜಾರಿದಳು. ಹಣೆಯಲ್ಲಿ ಬೋರೆ ಬಂದಿತು. ನಾನು ಹಾರಿಹೋಗಿ ಅವಳನ್ನು ಎತ್ತಿ ತಂದು ಎದೆಯ ಮೇಲಿಟ್ಟುಕೊಂಡು ಸಮಾಧಾನ ಪಡಿಸುವಾಗ ಅವಳು ದೊಡ್ಡದಾಗಿ ಕಣ್ಣು ಬಿಟ್ಟಳು. ಕಣ್ಣೀರು ಕೆನ್ನೆಯ ಮೇಲೆ ಉರುಳಿತು. ಇದೆಂಥ ಮಗು! ಇದೆಂಥ ಮನಸ್ಸು! ಎದೆಯ ಮೇಲೆ ದುಂಡು ಮುತ್ತು. ಆ ನೋಟವನ್ನು ನಾನು ಎಂದಿಗೂ ಮರೆಯಲಾರೆ.

ಸೋಜಿಗದ ಹೊಳಲು

‘ಏನೆಂಥ ಕಾಲವಮು’ ಮತ್ತೆ ಬಹುದೆ ? ಒಮ್ಮೆ
ಒಂದು ಜೀವಕೆ ಒಮ್ಮೆಮಾತ್ರ ಬಹುದು. ಬಂದು
ಈ ಬಾಳ ತನ್ನ ಆನಂದದಾಳಕೆ ಸೆಳೆದು
ಸುಖದಿಂದ ಉಸಿರ ಕಟ್ಟಿಸಿ ಮತ್ತೆ ಬಿಡಿಸುವುದು !

ಇದು ಕವಿತೆ, ಮಾಸ್ತಿಯವರ ಕವಿತೆ! ಅಬ್ಬರವಿಲ್ಲ, ಅಲಂಕಾರವಿಲ್ಲ, ಪದರಂಜನೆಯಿಲ್ಲ. ಇವು ಮೂರೂ ಇದ್ದು ಕವಿತೆ ಬೇರೆ ರೀತಿಯಲ್ಲಿ ಆಗ ಬಹುದು ಎನ್ನುವ ಆಕ್ಷೇಪಣೆಗೆ, ಇವು ಮೂರು ಇಲ್ಲದೆ ಇಲ್ಲಿ ಒಂದು ಬಾಳಿನ ಪುಣ್ಯದಿಂದ ಕವಿತೆ ಆಗಿದೆ ಎಂಬುದೇ ಸ್ವಸಂಪೂರ್ಣವಾದ ಉತ್ತರ. ಯಾವ ಧಾವಂತವೂ ಇಲ್ಲ; ಉಸಿರಿನ ಸಂಚಾರವೂ ಬದುಕಿನಲ್ಲಿರುವಂತೆ ಸ್ವಾಭಾವಿಕವಾಗಿದೆ. ಇಂಥ ಕವಿತೆಯನ್ನು ಕುರಿತು ಅರ್ಥವೇನು, ಉದ್ದೇಶ ವೇನು, ನೀತಿಯೇನು ಎಂದು ಕೇಳುವುದೇ ಅವಿವೇಕ.

ಕಥೆ ಹೇಳುವವರು ವೈದ್ಯಗಣಪೈಗಳು (ಮಾಸ್ತಿಯವರಲ್ಲ!). ಆದರೆ ಶೈಲಿಯಲ್ಲಿ ಮಾಸ್ತಿಯವರೇ ಕಾಣುತ್ತಿದ್ದಾರೆ, ಅವರಿರುವಂತೆ ! ಛಂದಸ್ಸಿನ ಅಂಚಿನಲ್ಲಿ ಅವರ ಧ್ವನಿ ಕೇಳಿಬರುತ್ತಿದೆ,—ಗುಡುಗಿಲ್ಲದ ಗರ್ಜನೆಯಿಲ್ಲದ ಮಾನವಧ್ವನಿ. ಈ ಕವಿತೆಯಲ್ಲಿ ಕಾಣುವ ಒಟ್ಟು ಕಟ್ಟಡದ ರಚನೆ, ಸುಳಿವ ಸುದ್ದಿಗಳ ಸುತ್ತ ಸೊಂಪಾಗಿರುವ ಚೆಲುವು, ನಡುನಡುವೆ ಗಂಭೀರ ಸಮುದ್ರ ತಳವನ್ನೂ ಬೆಳಕು ಮಾಡುವ ಪ್ರತಿಭೆಯ ಮಿಂಚಿನ ಹನಿಗಳು, ಕವಿಗೆ ಅಧೀನವಾದ ಮಾತಿನ ವಿಚಕ್ಷಣೆ, ತೋರಿಕೆ ಇಲ್ಲದ ಸರಳತೆ, ಮತ್ತು ಇವೆಲ್ಲಕ್ಕೂ ಮೀರಿದ ನಿರ್ದುಷ್ಟಜೀವನಾಸಕ್ತಿ—ಇವು ಮಾಸ್ತಿಯವರಿಗೆ ಮಾತ್ರ ಸಾಧ್ಯ. ಅವರು ಕವಿತೆಯಲ್ಲಿ ಕಷ್ಟಪಡುವವರೂ ಅಲ್ಲ; ಕಷ್ಟ ಕೊಡುವವರೂ ಅಲ್ಲ. ಇದು ಅವರ ಸಾಹಿತ್ಯದ ಅಹಿಂಸಾಯೋಗ.

ಸುಲಭಶೈಲಿಯಲ್ಲಿ ಬಂದ ಕವಿತೆಯ ಕಡೆಗೆ ಮನಸ್ಸನ್ನು ಹಾಯಿಸು ವುದು ಇಂದಿನ ಹಲಕೆಲವರು ವಿದ್ವಾಂಸರಿಗೇ ಇಷ್ಟವಿಲ್ಲ ಎಂಬುದನ್ನು ಕೇಳಿ ದ್ದೇನೆ. ಅಂಥವರಿಗಾಗಿಯೇ ಕ್ಲಿಷ್ಟಪ್ರಬಂಧಗಳೂ ಉಳಿದಿರುವುದು. ಆದರೆ

ಮಾಸ್ತಿಯವರ ಈ ಕವಿತೆಯಲ್ಲಿ ಸುಲಭವಾಗಿರುವುದೇನು, ಮಾತೇ, ಕವಿತೆಯೇ, ಎಂಬುದನ್ನು ಅಂಥವರೂ ಹುಡುಕುವುದರಲ್ಲಿ ತಪ್ಪೇನು? ಕವಿತೆಯನ್ನು ಆಸ್ವಾದಿಸುವುದೊಂದೇ ಮುಖ್ಯ ವಿಷಯವಾಗಿರುವುದರಿಂದಲೂ, ಅಂಥ ರತ್ನಪರೀಕ್ಷೆಗೇ ಈ ಕವಿತೆಯನ್ನು ಸಿಲ್ಲಿಸಿದರೂ ಅದರ ಗೌರವ ಹೆಚ್ಚಾಗುವುದರಿಂದಲೂ, ಒಂದೇ ದೃಷ್ಟಿಗೆ, ರುಚಿಗೆ, ನಿಲ್ಲುವುದೇ ಸರಿಯಾದದ್ದು ಎನ್ನುವ ತೀರ್ಮಾನ ಖಂಡಿತವಾಗಿ ಸಾಹಿತ್ಯಕ್ಕೆ ಒಪ್ಪುವುದಿಲ್ಲ.

ವೈದ್ಯಗಣಪೈಗಳು ಹೇಳಿದರೆಂಬ ಕಥೆ ಸುಲಭವಾಗಿದ್ದಷ್ಟು ಸುಂದರವಾಗಿದೆ. ವೈದ್ಯರೂ ಅಂಥವರೇ. (ತಾವು ಪಂಜೆಯವರನ್ನು ಎಂದಾದರೂ ನೋಡಿದ್ದೀರಾ?) ಅವರ ಬಿಳಿಯ ಹುಬ್ಬು 'ಚಂದ್ರನನು ನೋಡುತಿಹ ಎರಡು ಚಂದ್ರರೋ' ಎನ್ನುವಷ್ಟು ಬೆಳ್ಳಗಿತ್ತಂತೆ. ಅವರು ಮನೆಯ ಮುಂದಿನ ಜಗಲಿಯಮೇಲೆ ಕುಳಿತು, ನಸ್ಯಮಾಡುತ್ತ, ತಮ್ಮಲ್ಲಿಗೆ ಬಂದ ಎಂಟುವರುಷದ ಬೆಂಗಳೂರ ಹೈದನನ್ನು 'ನೀನು ಸರಸೂ ಮಗನೋ?' ಎಂದು ನಿಧಾನವಾಗಿ ವಿಚಾರಿಸಿಕೊಳ್ಳುವುದೂ, ಅವನ ಬಾಯಿಗೆ ಒಂದು ಚೂರು ಕಲ್ಲುಸಕ್ಕರೆಯನ್ನು ಹಾಕಿಸುವುದೂ,—ಈಗೀಗ ವಿರಳವಾಗುತ್ತಿರುವ —ಒಂದು ತಲೆಮಾರಿನ ಸೌಜನ್ಯವನ್ನು ಸೂಚಿಸುತ್ತದೆ.

ನಡುವೆ ಇನ್ನೂ ಯಾರೋ ಬರುತ್ತಾರೆ. ಸರಿ, ವೈದ್ಯರು ಬಾರಕೂರಿನ ಹಳೆಯ ಕಥೆಯನ್ನು ಪ್ರಾರಂಭಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ಸೀತಾ ನದಿಯ ತೀರದಲ್ಲಿ ಬಾರಕೂರು. ಒಂದಾನೊಂದು ಕಾಲದಲ್ಲಿ ಅಲ್ಲಿ ಭೂತಾಲ ಪಾಂಡ್ಯರಾಜ ಅಧ್ವರ್ಯದಿಂದ ಆಳುತ್ತಿದ್ದನಂತೆ. ಆಗೊಂದುದಿನ ಯಾವನೋ ಸಂನ್ಯಾಸಿ ಅರಮನೆಯ ಮುಂದೆ ಬಂದು 'ಭವತಿ, ಭಿಕ್ಷಾಂದೇಹಿ' ಎಂದು ಕೂಗಿದನಂತೆ. ತಿರಿದು ಬಾಳುವವರಿಗೆ ಅರಮನೆಯೇನು, ನೆರೆಮನೆಯೇನು? ಆದರೆ ಕವಿಯ ಮಾತಿದು:

> ಅರಮನೆಯ ಭಿಕ್ಷೆ ಬೇಡುವರು ಮುಂಗಡೆ ಹೋಗಿ
> ಎಲ್ಲ ಮನೆಯಲಿ ಕೇಳುವಂತೆ ಕೇಳುವುದುಂಟೆ?

ಆಗ ಕಾವಲುಗಾರ ಅವನನ್ನು ಕಂಡು "ಪಕ್ಕದಲಿ ಹೋಗಿ ಕೇಳಣ್ಣ" ಎನ್ನುತ್ತಾನೆ. ಭಿಕ್ಷೆ ನೀಡಲು ಪಕ್ಕದ ಬಾಗಿಲಲ್ಲಿ ವ್ಯವಸ್ಥೆಮಾಡಿದ್ದರು. ಇದು ಸಂನ್ಯಾಸಿಗೆ ಅರ್ಥವಾಗಲಿಲ್ಲ. ನಿಂತಲ್ಲಿಯೇ ಅವನು ಮತ್ತೊಮ್ಮೆ 'ಭವತಿ,

ಭಿಕ್ಷಾಂ ದೇಹಿ' ಎಂದು ಕೂಗುಹಾಕುತ್ತಾನೆ. ಆ ಸಮಯದಲ್ಲಿ ರಾಜ ತನ್ನ ಕಿರಿಯ ರಾಣಿಯೊಂದಿಗೆ— (ಇಲ್ಲೂ ಅರ್ಥಪುಷ್ಟಿಯಿದೆ, ಲಾಭದೃಷ್ಟಿಯಿದೆ) —ಏಕಾಂತದಲ್ಲಿದ್ದಾನೆ. ಈ ಸರಸದ ನಡುವೆ ಆ ಸಂನ್ಯಾಸಿಯ ಕೂಗು ವಿರಸವಾಯಿತು. ದೊರೆ ದುಡುಕಿ 'ಯಾರಲ್ಲಿ! ಆತನನ್ನು ತೊಲಗಿಸಿ' ಎಂದು ಅಪ್ಪಣೆ ಮಾಡುತ್ತಾನೆ. ಸುಲಭಕೋಪಿಯಾದ ಸಂನ್ಯಾಸಿ—ಇಂಥವರಿಂದಲೇ ನಮ್ಮ ಎಷ್ಟೋ ಸಾಮ್ರಾಜ್ಯಗಳು ಹಾಳಾಗಿರುವುದು—'ಇಷ್ಟರಲ್ಲೇ ನಿಮ್ಮ ಈ ಕೊಬ್ಬು ಮುರಿಯುವುದು, ಊರು ಹಾಳಾಗುವುದು' ಎಂದು ಶಾಪಹಾಕಿ 'ಮೊರೆಯುತ್ತ ಸಾಗಿದನು.' ಇದಕ್ಕೆ ರಾಣಿಯಾದವಳು ಹೆದರಿ, ಓಡಿಬಂದು ಸಂನ್ಯಾಸಿಯ ಕಾಲಿಗೆ ಬೀಳುತ್ತಾಳೆ. ವಿಧಿಯ ದೂತನಂತೆ ತಾನು ಹಾಗೆ ನುಡಿದದ್ದಾಯಿತೆಂದೂ, ಊರು ಹಾಳಾಗುವುದು ಅನಿವಾರ್ಯವೆಂದೂ, ಆದರೆ ಹೀಗೆ ಹಾಳಾಗುವ ಊರು ರಾಣಿಯ ಪುಣ್ಯದಿಂದ, ಹನ್ನೆರಡು ವರುಷಕ್ಕೆ ಒಂದು ಸಲ—ಒಂದು ರಾತ್ರಿ—ಪ್ರಾಚೀನ ವೈಭವದಿಂದ ಮೆರೆಯುತ್ತದೆಂದೂ ಆತ ಹೇಳಿ ಕಣ್ಮರೆಯಾಗುತ್ತಾನೆ. ಈ ಪ್ರಕರಣ ನಡೆದು ನಾಲ್ಕು ವರ್ಷ ಕಳೆಯುವುದರೊಳಗಾಗಿ ಶತ್ರು ಸೇನೆಗೆ ಊರು ಬಲಿಯಾಗುತ್ತದೆ. ಸಂಪತ್ತಿನ ಸೀಮೆಯೆಲ್ಲ ಆ ಶಾಪದಿಂದಲೋ ಎಂಬಂತೆ ಪಾಳು ಗೋಡೆಗಳ ಸಾಲುಸಾಲಾಗಿ ನಿಲ್ಲುತ್ತದೆ. ಆ ಶಾಪಕ್ಕೂ ಈ ಶತ್ರುಗಳ ಮುತ್ತಿಗೆಗೂ ಸಂಬಂಧವಿಲ್ಲದಿದ್ದರೂ ಒಂದು ಕ್ರಮ ಕಾಣುತ್ತಿದೆ. ಕಾರಣ ಹೇಗಿರಬಹುದೆಂದು ಕವಿಯನ್ನು ಕೇಳಿದರೆ ಅವರು ಹೇಳಿದ್ದಾರೆ: 'ಈ ಸಂಗತಿ ನಿಮಿತ್ತ ಮಾತ್ರ: ಆದರೆ ಊರೂರೆ ಪಾತಕವ ಮಾಡಿತ್ತು; ರಾಜ ಆ ಊರ ಮುಖ' ಎಂದು. ಹೀಗೆ ಭಾಗ್ಯದ ಸರೋವರ ಒಣಗಿ ಭೋಗದ ಕೆಸರು ಉಳಿಯುತ್ತದೆ; ಭೋಗದ ಕೆಸರಿನಲ್ಲಿ ರಾಜ್ಯಲಕ್ಷ್ಮಿ ಭೂಗತವಾಗುತ್ತಾಳೆ.

ಚಿತ್ರಾಪೂರ್ಣಿಮೆಯ ರಾತ್ರಿ ಬಾರಕೂರಿನ ಕಡೆ ಸುಳಿಯುವುದು ಅಪಾಯಕರವೆಂದೂ, ದೆವ್ವಗಳು ಕಾಡುವುವೆಂದೂ ಜನಕ್ಕೆ ತಿಳಿದಿತ್ತು: ವೈದ್ಯರೂ ಬಲ್ಲರು. ಆಗವರಿಗೆ ನಡುಹರೆಯ: ಅವರು ಆ ಕಾಲದಲ್ಲಿ

'ವೈದ್ಯಕಿಯ ವೃತ್ತಿಯಲಿ
ಕುಂದಾಪುರದ ಮೊದಲು ಮಂಗಳೂರಿನವರೆಗೆ

ಒಂದೂರ ಬಿಡದೆ ಸುತ್ತಿದೆನು....
ಒಂದು ಸಲ....ಒಂದು ಸಂಜೆ
ನಮ್ಮಾ ಬಾರಕೂರತ್ತ ನಡದಿಹೆನು'

ಎಂದು ಹೇಳಿ ತಮ್ಮ ಕಥೆಯನ್ನು ಮೊದಲುಮಾಡುತ್ತಾರೆ. ವೈದ್ಯರು ಬಾರಕೂರ ತೋಪಿನ ಗುಡಿಯೊಂದರಲ್ಲಿ ತಂಗಿದ್ದಾರೆ.

ಅದರ ಮರಬಳ್ಳಿ
ಹೂತಿಹುವು ಸರಳಿಯದು ತೆಳುಹಸುರ ಹೂ ಇಲ್ಲಿ
ಬೇರೆಡೆ ಕರಂಡೆ : ಮಲ್ಲಿಗೆಯೆ ಎಂಬಂತಿಹುದು
ಹುಣುಗಲದ ಮರದಮೇಗಡೆ ಕೆಂಚ ಹೂ : ತೋಪ
ಅಂಚಿನಲಿ ಹೊನ್ನೆಮರ ಒಂದು. ಆ ಬೆಳಕಿನಲಿ
ಏನೋ ತೆರದಲಿ ಕಣ್ಗೆ ಚೆನ್ನ ಕಂಡಿತು.

ಕಣ್ಗೆ ಚೆನ್ನ ಕಂಡಿತು! ತಳಿತು ಯಾವುದೋ ಬೆರಗಿನಲಿ ನಿಂತ ಆ ಹೊನ್ನೆ ಮರವನ್ನು ಕಂಡು ವೈದ್ಯರಿಗೆ ಹಿಂದಣೂರಿನಲ್ಲಿ ತಾವು ಕಂಡಿದ್ದ ಪಾಲ್ಕಾಡಿನ ಚೆಲುವೆ ಮಲೆಯಾಳಿ ಗೌರಚ್ಚಿಯ ನೆನಪಾಗುತ್ತದೆ. (ಮಾಸ್ತಿಯವರ ಕವಿತೆಯಲ್ಲಿ ಅಲಂಕಾರವೆಂದರೆ ಇಷ್ಟೆ!) 'ತಳಿತ ಸುರ ಹೊನ್ನೆಮರ ನಿಂತ ಪರಿ ಗೌರಚ್ಚಿ ನಿಂತ ಪರಿಯನು ಮನಕೆ ತರಲು, ಅವಳಿತ್ತ ಎಲೆ ಸುರುಳಿ ನೆನಪಾಗಿ, ಅದನು ಮೆಲ್ಲುವ ಎಂದು ಗುಡಿಯ ಬದಿಯಲಿ' ವೈದ್ಯರು ವಿಶ್ರಮಿಸಿಕೊಳ್ಳುತ್ತಾರೆ. ಕಣ್ಣೆದುರಿಗೆ ಅಳಿಲು, ಹಾವರಾಣಿಯು ಪಿಳ್ಳೆ ಓಡಾಡಿದವು. ಹಕ್ಕಿಗಳು ಗೂಡು ಸೇರಿದುವು. ಸುತ್ತ ತೆಂಗಿನ ತೋಟ. 'ಭುವನೇಶ್ವರೀ ದೇವಿ ಸೀತಾನದಿಯ ಉಬ್ಬೆದೆಯ ನೀರಿನಲಿ ತೆಪ್ಪದಲಿ ಕುಳಿತೇನು ಸೂರ್ಯನೆಡೆ ಹೊರಟಳೋ' ಎಂದು ತೋರಿತು. ಪಡುವಲ ಬೆಳಕು ಆರಿತು. ಹಾಗೆಯೇ ವೈದ್ಯರು ತಾವು ತಂದಿದ್ದ ತಾಂಬೂಲವನ್ನು ಹಾಕಿಕೊಂಡು, ಶೀತಾಸ್ಪದವಾಗದಿರಲೆಂದೇನೋ, ಬಗಲಲ್ಲಿದ್ದ ಸಂಪುಟವನ್ನು ತೆಗೆದು ಕಸ್ತೂರಿ ಮಾತ್ರೆಗಳಂತೆ ಕಂಡ ಒಂದೆರಡು ಮಾತ್ರೆಗಳನ್ನು ಬಾಯಲ್ಲಿ ಹಾಕಿಕೊಳ್ಳುತ್ತಾರೆ. (ಇಲ್ಲಿ ಮಾತ್ರೆಗಳ ಲೆಕ್ಕಾಚಾರ ಬೇರೆ ನಡೆಯುತ್ತದೆ) ಎಲೆ ಅಡಿಕೆ ಜಗಿಯುತ್ತಾ ಅವರಿಗೆ ಅದು ಚಿತ್ರಾ ಪೂರ್ಣಿಮೆಯ ಸಂಜೆ ಎಂಬುದರ ಅರಿವಾಗುತ್ತದೆ. ಏತರ ಅಮಲಿನಿಂದಲೋ

ಕಣ್ಣು ಜೌ ಹಿಡಿದು, ಅಷ್ಟರಲ್ಲೇ ಇದ್ದ ಬಳಿಯಿಂದ ಏಳಲಾರದವರಾಗುತ್ತಾರೆ.

ಆಗ ಅವರ ಕಣ್ಣಿಗೆ ಬಿದ್ದ ನೋಟ ಇದು. ನಾಲ್ಕಾರು ಬೆಡಗಿಯರು ಮಕ್ಕಳು ಮರಿ, ಅಲಂಕರಿಸಿದ ತಟ್ಟೆಗಳನ್ನು ಹಿಡಿದು ಯಾವುದೋ ಗುಡಿಗೆ ಹೊರಟಿಹರು; ತಲೆಗೆ ಹೂ ಮುಡಿದಿಹರು. ಆ ಗುಂಪಿನಲ್ಲಿದ್ದ ಒಬ್ಬಾತನನ್ನು ಎತ್ತ ಹೊರಟಿರಿ ಎಂದು ವೈದ್ಯರು ಕೇಳುತ್ತಾರೆ. ಮಂಜುನಾಥನ ಗುಡಿಗೆ ಎಂದು ಆತ ಹೇಳುತ್ತಾನೆ. ಇವರು ಹಾಗೆಯೇ ಆ ದಿಕ್ಕನ್ನು ನೋಡುತ್ತಾರೆ. ತಿಂಗಳ ತಣ್ಣನೆಯ ಬೆಳಕಿನಡಿಗೆ ಹಿರಿದಾಗಿ ಬಾಳುವ ಊರೊಂದು ಥಳಥಳಿಸಿತ್ತು; ಎದುರಲೆ ಮೂರುಕೇರಿ; ಮನೆ ಮನೆಯ ಮುಂದೆ ದೀಪ; ಮಧ್ಯದ ಕೇರಿಯಲ್ಲಿ ಒಂದು ದೇವ ಮಂದಿರ; ನೆಲೆಯಲ್ಲಿ ಚಿತ್ರಾ ಪೂರ್ಣಿಮೆಯ ತೇರು; ಒಳಗುಡಿಯಲ್ಲಿ ಪೂಜೆ. ಗುಂಪು, ಗದ್ದಲ, ಗಂಟೆಯ ಸದ್ದು, ಭಜನೆಯ ತಾಲ ಮದ್ದಲೆ, ಹಿರಿಮನೆಯ ಓಲಗ. ನುಡಿಯಬಾರದ ಆನಂದ.

ತಂಗಾಳಿ ಬೀಸುತಿರೆ

ಬೆಳುತಿಂಗಳೇನು ತೊಟ್ಟಿಲಲಿಟ್ಟು ತೂಗಿತೋ

ಎಂಬಂತೆ ಜೊಂಪೇರಿ, ಅಲ್ಲೆ ವೈದ್ಯರು ನಿದ್ರಾಧೀನರಾದರು. ಎಷ್ಟು ಹೊತ್ತು ಹಾಗೆ ಉರುಳಿದ್ದರೋ ಅವರಿಗೆ ತಿಳಿಯದು. ಇರುಳ ಹಬ್ಬಿನಲ್ಲಿ ಯಾರೋ ಬಂದು ಅವರನ್ನು ಎಬ್ಬಿಸಿದಂತಾಗಲು ವೈದ್ಯರು ಕಣ್ತೆರೆಯುತ್ತಾರೆ ಮೋಹಿನೀ ಭೂಮಿಯಲ್ಲಿ! ಎದುರಿಗೊಬ್ಬ ದೂತ. ಆತ ಕೇಳಿದ ನೀವೇಕೆ ಬೀದಿಯಲ್ಲಿ ಮಲಗಿದ್ದೀರಿ ಎಂದು ನಮ್ಮ ಒಡತಿ ಕೇಳುತ್ತಾಳೆ ಎಂದು. ಕಣ್ಣುಜ್ಜಿಕೊಂಡು ಮತ್ತೆ ನೋಡುತ್ತಾರೆ. ಎದುರಿಗೊಬ್ಬಳು ಜಗನ್ಮೋಹಿನಿ. ಗೌರಜ್ಜಿಯ ಅಕ್ಕನಂತೆಯೋ ಅತ್ತಿಗೆಯಂತೆಯೋ ಕಂಡಳು ಎಂದು ಇವರು ಹೇಳುತ್ತಾರೆ. ತಳಿತ ಸುರ ಹೊನ್ನೇಮರ, ಗೌರಜ್ಜಿ, ಜೊತೆಗೆ ಈ ಗೌರಜ್ಜಿಯಂತೆ ತೋರುವ ಮಾಯಾಂಗನೆ. ಏನು ಸ್ವಾಮಿ ಈ ತುಂಬಿದೂರಿನಲ್ಲಿ ಮಲಗಲು ನಿಮಗೆ ಸ್ಥಳವಿಲ್ಲವೆ, ಬೀದಿಯಲ್ಲಿ ಮಲಗುವರೆ, ಎಂದು ಆಕೆ ಕೇಳುತ್ತಾಳೆ; ಆ ಉಸಿರಿನಲ್ಲೇ 'ಚೆನ್ನ, ರಾಯರನು ಮನೆಗೆ ಕರೆತಂದು ಹಾಸಿಕೊಡು ಅಲ್ಲಿ ಮಲಗಲಿ' ಎಂದು ಆಳಿಗೆ ಅಪ್ಪಣೆ

ಕೊಟ್ಟು ಹೋಗುತ್ತಾಳೆ. ವೈದ್ಯರು ಮುಗ್ಧರಾಗುತ್ತಾರೆ.

ಆ ಉಲಿಯ ಮೆಲುಪೊ ಆ ಉಲಿದ ನುಡಿಗಳ ನುಣುಪೊ :

(ಈ ಪ್ರಸ್ವಸ್ವರಗಳ ವೀಣಾಗಾನವನ್ನು ಕೇಳಿ!)

ಚೆನ್ನನ ಜೊತೆಯಲ್ಲಿ ವೈದ್ಯರು ಆಕೆಯ ಮನೆಗೆ ಹೋಗುತ್ತಾರೆ. (ದಾರಿಯಲ್ಲಿ ಮತ್ತೆ ಸುರಹೊನ್ನೆಮರ ಬರುತ್ತದೆ.) ಆಕೆಯ ಹೆಸರೇನು, ರಾಜಮಣಿ; ರಾಜಮಣಿ! ಆಕೆಯ ಮನೆಯಲ್ಲಿ ಇವರಿಗೆ ದಿವ್ಯವಾಗಿ ಅತಿಥಿ ಸತ್ಕಾರ ನಡೆಯುತ್ತದೆ. (ಆ ಊಟದ ವಿವರಗಳನ್ನು ಕಾಗದದ ಮೇಲೆ ಬರೆದರೆ ನಿಮಗೆ ಈಗಿನ ಸ್ಥಿತಿಯಲ್ಲಿ ಸಿಟ್ಟು ಬರಬಹುದು. ಕವಿತೆ ಓದಿ.) ವೈದ್ಯರು ಸುಖಾಸೀನರಾಗಿದ್ದಾರೆ. ಆ ಸಮಯದಲ್ಲಿ ಯಾವನೋ ಹೊಸಬ ಬಾಗಿಲಿಗೆ ಬಂದು 'ಸ್ವಾಮಿ, ಇದು ರಾಜಮಣಿಯವರ ಮನೆಯೇ?' ಎಂದು ಕೇಳುತ್ತಾನೆ. ಚೆನ್ನ ಆತನನ್ನು ಒಳಗೆ ಕರೆದು "ಹೌದು, ಏನಾಗಬೇಕು?" ಎಂದು ಎಚ್ಚರಿಸುತ್ತಾನೆ. ಆತ "ಅಹ... ಏನೂ ಇಲ್ಲ....ಅ....ಅ....ಅ....ನಾನು ಹಿಂದಿನ ಸಾರಿ ಇಲ್ಲಿಗೆ ಬಂದಿದ್ದಾಗ ಒಂದು ಪೆಟ್ಟಿಗೆಯನ್ನು ಬಿಟ್ಟು ಹೋಗಿದ್ದೆ....ಅದನ್ನು ಒಯ್ಯಲು ಮತ್ತೆ ಬಂದೆ' ಎಂದು ವಿವರಿಸುತ್ತಾನೆ. 'ನೋಡಿಬರುತ್ತೇನೆ ಇಲ್ಲಿ ಕುಳ್ಳಿರಿ' ಎಂದು ಹೇಳಿ ಚೆನ್ನ ಒಳಗೆ ಹೋಗುತ್ತಾನೆ. ವೈದ್ಯರು ಆಗ ಈ ಹೊಸ ವ್ಯಕ್ತಿಯನ್ನು ನೋಡುತ್ತಾರೆ. 'ಎಲಾ ಇವನನ್ನ ಎಲ್ಲೋ ನೋಡಿದ್ದೇನಲ್ಲ! ಇವ ಹಿಂದೆ ಮಂಗಳೂರಿಗೆ ಬಂದಿದ್ದ ರತ್ನಪಡಿವ್ಯಾಪಾರಿ, ಮೈಸೂರಿನವನಲ್ಲವೆ! ಇರ ಬೇಕು' ಎಂದು ಇವರ ಮನಸ್ಸು ಹೇಳುತ್ತಿದೆ. ಈ ಊಹೆ ಸರಿಯೆಂದು ಆತನ ಉತ್ತರದಿಂದ ಸ್ಪಷ್ಟವಾಗುತ್ತದೆ. "ನೀವು ಇಲ್ಲಿಯೇ ಇರುವಿರೋ ಬರುವಿರೋ?" ಎಂದು ಅವನ ಪ್ರತಿ ಪ್ರಶ್ನೆ. "ಇದು-ನಿಜದ ಊರಲ್ಲ; ಊರ ದೈಯ" ಎಂದು ಹೇಳಲು ಅವನಿಗೆ ಜೀವದಲ್ಲಿ ಭಯ; ಆದರೂ ಸ್ನೇಹಿತರು ಇಲ್ಲಿ ಸಿಕ್ಕಿ ಕೊಂಡರಲ್ಲ ಎನ್ನುವ ವ್ಯಸನ. ಅಷ್ಟು ಹೊತ್ತಿಗೆ ಚೆನ್ನ ಬಂದು ಆ ಸೆಟ್ಟಿಯನ್ನು ಕರೆದು 'ಅಗೋ ಅಲ್ಲಿ....ನೀವು ಹಿಂದೆಲ್ಲಿ ಇಟ್ಟಿದ್ದಿರೋ ಅಲ್ಲೇ ನಿಮ್ಮ ಪೆಟ್ಟಿಗೆಯಿದೆ, ಒಳಗೆ ಹೋಗಿ ತೆಗೆದುಕೊಂಡು ಹೋಗ ಬಹುದು' ಎಂದು ತಿಳಿಸುತ್ತಾನೆ. ಸೆಟ್ಟಿಗೆ ಭಯ; ಭಯಪಟ್ಟರೆ ಗಂಟು ಹೋಗಿಬಿಡುತ್ತದೆ! ಬೆಕ್ಕಿನಂತೆ ಒಳಗೆ ಹೋಗಿ ಫಕ್ಕನೆ ಪೆಟ್ಟಿಗೆಯನ್ನು

ಹಿಡಿದುಕೊಂಡು ಆತ ಹೊರಗೆ ಬರುತ್ತಾನೆ. ಅಲ್ಲಿಂದ ಓಡುವ ಸಮಯ ದಲ್ಲಿ ಆತ ಇವರ ಕಿವಿಯಲ್ಲಿ ಕಡೆಯ ಎಚ್ಚರಿಕೆ ಕೊಡುತ್ತ

ಇದು ನಿಜದ ಊರಲ್ಲ;
ಅಂದಿನೂರಿನ ಧೈಯ; ಬರುವುದಾದರೆ ಬನ್ನಿ
ಬರುವುದಕೆ ಆಗದಿದ್ದರೆ ನಿಮ್ಮ ಒಡವೆ ಅದೇನೆ
ಇದ್ದರೂ ಜೊತೆಯಾಗಿ ಮೈಗೆ ಸೋಕಿರುವಂತೆ
ಇರಿಸಿಕೊಳಿರಿ '

ಎಂದು ಹೇಳುತ್ತಾನೆ. ವೈದ್ಯರಿಗೆ ಇದೆಲ್ಲ ಅರ್ಥವಾಗುವುದೇ ಇಲ್ಲ. ಇವರಿಗೆ ಒಳ್ಳೆಯದನ್ನು ಬಯಸಿ ಅವನು ಹೇಳಿದ ಮಾತು 'ಮಾತಿನ ಧೈಯ' ವಾಗಿ ಪರಿಣಮಿಸುತ್ತದೆ. ಆದರೆ 'ನಿಜದ ಧೈಯ' ಹೆಣ್ಣಿನ ರೂಪಿನಲ್ಲಿ ಎದುರಿಗೆ ನಿಂತಿದ್ದರೆ ಅದನ್ನು ಹೆಣ್ಣೆಂದೇ ಇವರು ನಂಬುತ್ತಾರೆ. ನಂಬುವುದೇನು? ಇವರಿಗೆ ಸಂದೇಹವೇ ಇಲ್ಲ'. ಮತ್ತೆ ರಾಜಮಣಿ ಬಾಗಿಲೆಡೆ ಬಂದು ಎದುರಿನಲಿ ಹೇಳಲಾಗದ ಒಂದು ಬೆಡಗ ನಿಲವಲಿ ನಿಂತು ಫಲಹಾರ ಆಯಿತೆ ಎಂದು ಕೇಳುತ್ತಾಳೆ. ಆ ಕೇಳುವೆಯ ಅಂದವೇ ಅಂದ! ಸೌಂದರ್ಯದ ಮಾಯೆಯಲ್ಲಿ ಬಿಳಿಹುಬ್ಬಿನ ಮುದುಕರು ಪ್ರೇಮಾಧೀನ ಯುವಕನಂತೆ ವ್ಯವಹರಿಸುತ್ತಾರೆ. ಇದೂ ನಿಜದ ಪ್ರಾಯವಲ್ಲ; ಪ್ರಾಯದ ಧೈಯ. ಇಂಥ ಚೆಲುವೆ ಇಷ್ಟು ಹತ್ತಿರ ಬಂದು ಮೆಲ್ಲನುಲಿಯುತ್ತಿರುವಾಗ ಇವರ ಮನಸ್ಸು ಬುಟ್ಟಿಯಲ್ಲಿ ಬಿದ್ದ ಮೀನಿನಂತೆ ಮಿಲಿಮಿಲಿ ಹೊರಳುತ್ತದೆ. ಆ ಸಮಯದಲ್ಲಿ ಇನ್ನು ಯಾರಾದರೂ ದುಡುಕಿಗಳಿದ್ದರೆ ಏನಾಗಬಹುದಿತ್ತೋ—ಆದರೆ ಆ ಗಳಿಗೆಯ ನಡವಳಿಕೆಗೆ ಮಾತ್ರ ಯೌವನದ ಗಿಲೀಟು ಇವರ ಬಾಳಿಗೆ ಬಂದಿದ್ದರೂ, ಬಹುಕಾಲ ಧರ್ಮಮಾರ್ಗದಲ್ಲಿ ನಡೆದು ಮಾಗಿದ ಇವರ ಜೀವದಲ್ಲಿ ಹೀಗೆ ತಮ್ಮನ್ನು ಕನಿಕರಿಸಿ ಮನೆಗೆ ಕರೆತಂದ ಹೆಣ್ಣಿನ ಚೆಲುವ ಕಣ್ಣಿಕ್ಕಿ ನೋಡುವುದು ಸರಿಯಲ್ಲ ಎನ್ನುವ ವಿವೇಕ ಹೊಳೆಯುತ್ತದೆ. ಮಾಯೆಯಲ್ಲಿ ಮುಳುಗಿದ್ದರೂ ಇಂಥ ಮಧುರವಾದ ಆಪತ್ ಸಮಯದಲ್ಲಿ ಇವರ ಮನಸ್ಸು ಚಲ್ಲುಬಡಿಯದೆ ಧರ್ಮದ ದಿಕ್ಕಿಗೆ ತಿರುಗುವುದು ಸ್ತುತ್ಯವಾಗಿದೆ. ಇದು ಖಂಡಿತವಾಗಿ

ಮಾಸ್ತಿಯವರ ಮನೋಧರ್ಮವೆಂದು ಘೋಷಿಸಬಹುದು. ಸರಿ, ಅಷ್ಟು ಹೊತ್ತಿಗೆ ಚೆನ್ನ ಒಳಮನೆಯಲ್ಲಿ ಹಾಸಿಗೆ ಹಾಕಿ ಹೊರಡಲು ಅನುವಾಗುತ್ತಾನೆ. ರಾಜಮಣಿ ಮೆಲುದನಿಯಲ್ಲಿ 'ಅಲ್ಲಿ ಹೋಗಿ ಮಲಗಿರಿ' ಎಂದು ಸೂಚಿಸುತ್ತಾಳೆ. ಇವರು ಅಧೀನರಂತೆ ವರ್ತಿಸುತ್ತಾರೆ; ಆದರೆ ಏನನ್ನೋ ಮರೆತವರಂತೆ ಚೆನ್ನನನ್ನು ಕುರಿತು "ಈ ರಾಜಮಣಿ ಯಾರು?" ಎಂದು ಕೇಳುತ್ತಾರೆ. ಅವನು "ಆಕೆ ನಮ್ಮೊಡತಿ, ನರ್ತಕಿ, ರಾತ್ರಿ ರಾಜಮಂದಿರದಲ್ಲಿ ಓಲಗವಿತ್ತು: ಅದನ್ನು ಮುಗಿಸಿಕೊಂಡು ಬರುವಾಗ ದಾರಿಯಲ್ಲಿ ನೀವು ಮಲಗಿದ್ದಿರಿ. ಆಕೆ ನಿಮ್ಮನ್ನು ಇಲ್ಲಿಗೆ ಕರೆತರುವಂತೆ ಆಜ್ಞೆಮಾಡಿದಳು" ಎನ್ನುತ್ತಾನೆ. "ನರ್ತಕಿಯಾದ ರಾಜಮಣಿ ವಾರವನಿತೆಯೆ ಸತ್ಯ." ಇಂಥ ಸೌಜನ್ಯದ ಹೆಣ್ಣು ಗರತಿಯಾದರೇನು, ಸೂಳೆಯಾದರೇನು, ಈಕೆಯ ನೋಟ ನಿಲವುಗಳನ್ನು ನೋಡಿದರೆ 'ಗರತಿಯರ ಗರತಿಯಂತಿಹಳು' ಎಂದು ವೈದ್ಯರ ವಿಮರ್ಶೆ. ರಾಜಮಣಿ ಇನ್ನೂ ಹತ್ತಿರ ಬರುತ್ತಾಳೆ. ಒಂದು ತೆರದ ನಗೆ ನೋಟದಲಿ ನೋಡುತ್ತಿದ್ದಾಳೆ. ಚೆನ್ನ ಮರೆಯಾಗುತ್ತಾನೆ. ಆಕೆ ಇವರ ಮಂಚದ ಬಳಿಗೆ ಬಂದು ಬಹುಕಾಲ ದಿಟ್ಟಿಸುತ ನಿಂತಳು. ಕೊನೆಯಲಿ ತನ್ನ ಕೈಯಿಂದ ಇವರ ಗಲ್ಲವನು ಸೋಕಿದಳು.

ಅಷ್ಟೇ ಅವರ ನೆನಪು. ಗಲ್ಲವ ಬೆರಳು ಸೋಕಿದುದು. ಮಾಯೆ ಒಡೆಯಿತು. ಚಿತ್ರಾಪೂರ್ಣಿಮೆಯ ವೈಭವ ಅಂತರ್ಧಾನವಾಯಿತು. ಬೆಳಗಿನ ಹೊತ್ತಿಗೆ ಬಾರಕೂರು ಮತ್ತೆ ಪಾಳಾಯಿತು. ಸೀತಾನದಿ ಎಂದಿನಂತೆ ಹರಿಯುತ್ತಿದೆ. ವೈದ್ಯರು ತಮ್ಮನ್ನು ತಾವು ಅರಿಯುವ ಹೊತ್ತಿಗೆ ಅದೇ ಹೆಸರಿನ ಹೊಸ ಊರಿನ ಭಟ್ಟರ ಅಂಗಳದಲ್ಲಿ ಮಲಗಿದ್ದಾರೆ.

ಇರುಳೆಲ್ಲ ನಡೆದದ್ದು ಇವರಿಗೆ ಮಾತ್ರ ನಿಜ; ಉಳಿದವರಿಗೆ ಕಥೆ. ನಡೆದದ್ದು ಇಷ್ಟೆ ಎಂದು ಇತರರು ಹೇಳುತ್ತಾರೆ. ಬೆಳಗಿನ ಜಾವದಲ್ಲಿ ಹಳೆ ಊರಿನ ತೋಪಿನ ಬಳಿ ಮರದ ಬುಡದಲ್ಲಿ ವೈದ್ಯರು ಉರುಳಿದ್ದನ್ನು ಕಂಡು ಅವರ ಹಾರಾಡಿ ಮಾದ ಊರಿನವರಿಗೆ ತಿಳಿಸುತ್ತಾನೆ. ಭಟ್ಟರು ಓಡಿಬಂದು ವೈದ್ಯರನ್ನು ತಮ್ಮ ಅಂಗಳಕ್ಕೆ ಸಾಗಿಸಿದ್ದಾರೆ. ವೈದ್ಯರು ತಮ್ಮ ಅನುಭವವನ್ನು ಜನಕ್ಕೆ ತಿಳಿಸುತ್ತಾರೆ. ಬಾರಕೂರ ಕತೆ ಬಹುಜನಕೆ ಬರಿಯ ಕತೆ; ಇವರಿಗೆ ಮಾತ್ರ ನಿಜದನುಭವ.

ಬಾರಕೂರಿನ ಸ್ಥಳಪುರಾಣವನ್ನು ಅರಿತಿದ್ದರೂ, ಈ ವೈದ್ಯರು ಆ ಸಂಜೆ ವೈಮರೆತು ಅಲ್ಲಿ ಉಳಿದದ್ದೇಕೆ ಎನ್ನುವುದಕ್ಕೆ ಉತ್ತರ ಕವನದ ಹಿನ್ನುಡಿಯಲ್ಲಿದೆ. ಆ ಸಂಜೆ ಮರದ ಬುಡದಲ್ಲಿ ಕುಳಿತು ತಾಂಬೂಲದೊಂದಿಗೆ ಸೇವಿಸಿದ ಮಾತ್ರೆಗಳು ಕಸ್ತೂರಿ ಮಾತ್ರೆಗಳಾಗದೆ ಆಫೀಮಿನ ಮಾತ್ರೆಗಳಾಗಿದ್ದವು. ಇವರು ಆ ಮಾತ್ರೆಗಳನ್ನೂ ಈ ಮಾತ್ರೆಗಳನ್ನೂ ಒಂದೇ ಬಣ್ಣದ ಎರಡು ಪ್ರತ್ಯೇಕ ಸಂಪುಟಗಳಲ್ಲಿಟ್ಟಿದ್ದರು. ಹಳೆಯೂರ ಕಡೆ ಇವರು ಹೊರಡುವ ಮುನ್ನ ಎಲೆ ಸುರುಳಿ ಸುತ್ತಿಕೊಡುವಾಗ ಕಸ್ತೂರಿ ಮಾತ್ರೆ ಎಲ್ಲಿದೆ ಎಂದು ಗೌರಜ್ಜಿ ಕೇಳಿದ್ದಾಳೆ. ಚೀಲದ ಕೆಂಪು ಸಂಪುಟದಲ್ಲಿದೆ ತೆಗೆದುಕೋ ಎಂದು ಅವಸರದಲ್ಲಿ ಹೇಳಿದ್ದಾರೆ. ಇದಕ್ಕೆ ಬದಲು ಅದು ಬಿದ್ದು ಇಷ್ಟೆಲ್ಲ ಪ್ರಮಾದಕ್ಕೆ ಅವಕಾಶವಾಯಿತು. ಈ ಹಾಳುಸಂಜೆ ತಾಂಬೂಲ ಜಗಿಯುವಾಗ ವೈದ್ಯರು ಮಾತ್ರೆಗಳ ಗಣಿತವನ್ನು ಮನಸ್ಸಿನಲ್ಲೇ ಮಾಡಿಕೊಳ್ಳುವುದನ್ನು ನಾವು ಕವನದಲ್ಲಿ ನೋಡುತ್ತೇವೆ. ಇವರು ಹೇಳುವ ಕತೆ ಅಫೀಮಿನ ಅಮಲೆಂದು ಕೆಲವು ಜನ ಹೇಳಬಹುದು. ಇಂಥ ಕನಸನ್ನು ಅನುಭವಿಸಿದವರ ಮುಂದೆ ಹೀಗೆ ಹೇಳುವುದು ಅನ್ಯಾಯ.

ಸುಮ್ಮನೆ ಇದು ಈ ಕವಿತೆಯ ಪರಿಚಯ. ಅಲ್ಲಿನ ಸಂಗತಿಗಳ ವಿವರಗಳೆಲ್ಲ ತುಂಬ ಅಂದವಾಗಿವೆ. ನಮ್ಮ ಜನ ಇಂಥ ಕವಿತೆಯ ಚೆಲುವನ್ನು ಕಂಡು ಸಂತೋಷಪಡದೆ ಇರಲಾರರು. ಈ ಕಥನ ಕವನಗಳನ್ನು ಓದಲು ಬಾರದ ಮಂದಿ ಗದ್ಯವೆಂದು ಕರೆದು ತಮ್ಮ ವಿದ್ವತ್ತಿಗೆ ಗೌರವವನ್ನು ತಂದುಕೊಂಡಿರಬಹುದು, ಮತ್ತು ಇಂಥ ಕವಿತೆಯ ಸರಳತೆ ನಮ್ಮ ಸಾಹಿತ್ಯದಲ್ಲಿ ಹೊಸದಾಗಿ ಬಂದು ಹಳೆಯ ಕಾಲದ ರಸಿಕರನ್ನು ಧೃತಿಗೆಡಿಸಬಹುದು. ಇಂಥವರನ್ನು ಕುರಿತಾಗಲಿ ಮರೆತಾಗಲಿ ಈ ಕವಿತೆ ಬರುತ್ತಿಲ್ಲ. ಆ ಮಾತಿರಲಿ

ಲೋಕದಲಿ ಚೆಲುವು ಕಣ್ಣೆದುರು ಹೊಳೆ ಹರಿಯುತಿದೆ.
ಬಾಳ ದುಮ್ಮಾನದಲಿ ಸಿಲುಕಿ ಮನುಜನ ಜೀವ
ಹೊಳೆ ಹರಿವ ಚೆಲುವ ನೋಡುವ ಮನಸು ಇಲ್ಲದಿದೆ;
ಅರಳಿಟ್ಟು ದೊರೆಯಲಿಲ್ಲೆಂಬ ಕೋಪಕೆ ಕೂಸು
ಆಟದಾನೆಯನೆಸೆದು ಅಳುತ ಕುಳಿತಿರುವಂತೆ.

ಇದು ಕವಿತೆಯ ಪೊರೆಯನ್ನು ಬಿಟ್ಟ ಹೃದಯಧ್ವನಿ.

ಈಬಾಳ ಮೀರಿರುವ
ಬೇರೆ ಬಾಳಲಿ ದಾರಿ ನಡವಂದು ನಮ್ಮಾತ್ಮ
ಈ ಲೋಕವನು ಹೊಕ್ಕು ಇಲ್ಲೊಂದು ಜಗವಿತ್ತೆ
ಎಂದು ಅಚ್ಚರಿಗೊಳ್ಳುವುದು ; ಉತ್ತರ ಕ್ಷಣವೆ
ಇದನೊಪ್ಪಿಕೊಂಡು ನಡೆವುದು, ಒಮ್ಮೆ ರತ್ನವನು
ಕಳೆದುಕೊಂಬುದು ಒಮ್ಮೆ ನಲ್ಲೆಯನು ಕಾಂಬುದು,
ನಷ್ಟವನು ಕಂಡುಕೊಳ್ಳುವ ವೇಳೆ ಜಗವಿಲ್ಲ.
ಸುಖಕೆ ಮನವನು ತೆತ್ತು ಸೋತಂದು ಜಗವಿಲ್ಲ.

ಇದು ಅಲ್ಲಿಂದಾಚೆಗೆ ಬೆಳಗುವ ಸಾರಸ್ವತ ಜ್ಯೋತಿ. ಕೋಟೆಯೊಳಗಿನ ಕೋಟೆಯಂತಿರುವ ಕೃತಿ ರಚನೆಯಲ್ಲಿ ಕವಿ ಕಥೆಯನ್ನು ನಡಸುವುದು ; ಕಥೆಗೆ ಕವಿತೆಗೆ ಈ ಸಂಚಾರದಲ್ಲಿ ಹೊಸ ಹೊಸ ಆವರಣಗಳ ನೆಳಲು ಬೆಳಕುಗಳನ್ನು ರಚಿಸುವುದು; ಕಥೆ ತೆಳ್ಳಗಾದೀತು ಎನ್ನುವಕಡೆ ಕವಿತೆಯ ಮಿಂಚನ್ನು ಹೊಡೆದು, ಕವಿತೆಯೂ ಸಾಲದು ಎನ್ನುವಕಡೆ ಕವಿಯೇ ಬಂದಿಳಿದು ಯಾಜಮಾನ್ಯವನ್ನು ವಹಿಸುವುದು; ಜೊತೆಗೆ ಉದ್ದಕ್ಕೂ ಕಾಣಿಸಿರುವ ಕುತೂಹಲ, ಸಂತೋಷ, ಕಲಾಸಕ್ತಿ, ಸ್ಥೈರ್ಯ, ಇಷ್ಟರಮೇಲೆ ಎಚ್ಚರದಿಂದ ನಿಜಪ್ರಪಂಚದಲ್ಲಿ ಮಾಯಾ ಪ್ರಪಂಚವನ್ನೂ, ಮಾಯಾ ಪ್ರಪಂಚದಲ್ಲಿ ನಿಜಪ್ರಪಂಚವನ್ನೂ ಆಡಿಸಿ ಬಿಡಿಸುವ ಇಂದ್ರಜಾಲ; ಇಷ್ಟುಕಾಲ ತಮ್ಮ ಕಾವ್ಯ ಮಂದಿರದಲ್ಲಿ ತಂಗಿದ್ದ ರಸಿಕನನ್ನು ಕಡೆಯಲ್ಲಿ ಕಥೆಯಿಂದಲೂ ಕವಿತೆಯಿಂದಲೂ ಹೊರಗೆ ಕಳೆದು ಪ್ರೀತಿಯಿಂದ ರಹಸ್ಯವಾಗಿ —

ಇನ್ನೊಂದು ಮಾತು ; ಈ ಬಾಳಿನಲಿ
ನಮಗಿರುವ ಕರಣ ಈ ಜಗದ ಸುಖದುಃಖವನು :
ಸಹಿಸುವರೆ ಬೇಕೆಷ್ಟು ಅಷ್ಟುಬಲವಾಗಿಹವು :
ಈ ಬಲವ ಮಿಕ್ಕ ಸುಖ ಕಷ್ಟ ಬರೆ ಸೋಲುವುವು.
ಸೋತುದೆ ಅಪಸ್ಮಾರವೊಳಗಾಳುವುವು. ಇದೇ
ಕಾರಣವೆ ಈ ಬಾಳ ಅನುಭವಕೆ ಹಿಂದಾದ
ಬೇರೊಂದು ಅನುಭವಕೆ ಸಮಯಬರೆ ಈ ಜೀವ
ದೇಹವನು ತೊರೆಯುವುದು.

ಎಂದು ಸೌಜನ್ಯದಿಂದ ಬೀಳ್ಕೊಡುವುದು—ಇವೆಲ್ಲ ಸಾಹಿತ್ಯದಲ್ಲಿ ತುಂಬ ಹಿರಿಯ ಸಂಪ್ರದಾಯ. ಆ ಸಂಪ್ರದಾಯದಲ್ಲಿ ಇದೊಂದು ಹಿರಿಯ ಕಾವ್ಯ.

ಸಿಟಿ ಬಸ್ಸುಗಳು

ಸಿಟಿ ಬಸ್ಸುಗಳು ನಗರದ ಬೀದಿ ಬೀದಿಗಳಲ್ಲಿ ಅಲೆಯುತ್ತಿವೆ. ಈ ಕಾಲದಲ್ಲಿ ಪಾದಚಾರಿಗಳಿಗೆ ಮಾನ ಬರುವಂತಿಲ್ಲ. ಆ ಚಲಿಸುವ ಕೆಂಪು ಬಣ್ಣದ ಉಪ್ಪರಿಗೆಗಳಲ್ಲಿ ಮೆರೆಯುವ ಭೋಗ ಪಟ್ಟಣಿಗರ ಪಾಲಿಗೆ ಕೇವಲ ಒಂದಾಣೆ ಎರಡಾಣೆಗೆ ಒದಗುತ್ತಿರುವಾಗ ಯಾರುತಾನೇ ತಮ್ಮ ಪಾದಪದ್ಮ ಗಳಿಗೆ ದಣಿವು ಕೊಡಬೇಕು? ಅಥವಾ ಮಿತವ್ಯಯವೊಂದರಿಂದಲೇ ನಮಗೆ ಮುಕ್ತಿ ಲಭಿಸೀತೇ? ಮಿತವ್ಯಯಪ್ರಯೋಗಗಳಿಗೆ ನನ್ನಿಂದ ಅಡ್ಡಿಯಿಲ್ಲ. ಆದರೆ ಹೀಗೆ ಒಂದಾಣೆ ಎರಡಾಣೆ ನ್ಯಾಯವಾಗಿ ಕಳೆದುಕೊಂಡು ಬಡವ ರಾದವರು ಎಷ್ಟು ಜನ? ಹೆಂಡ ಕುಡಿಯುವುದು, ಸೂಳೆಗಾರಿಕೆ, ದುಂದು ಗಾರಿಕೆ—ಇವುಗಳಿಂದ ಕೂಡಿಟ್ಟ ಹೊನ್ನಿನ ಕೆರೆ ಥಟ್ಟನೆ ಬಿಮ್ಮೆಂದು ಬರಿ ದಾಗುತ್ತಿಲ್ಲವೇ? ಈ ಬದುಕಿನಲ್ಲಿ ಹೆಜ್ಜೆ ಹೆಜ್ಜೆಗೆ ಸುಂಕದ ಕಟ್ಟೆಗಳಿವೆ. ನಾವು ತೆರುವ ಸುಂಕದಲ್ಲಿ, ಸಹಿಸಿದ ಸುಲಿಗೆಯಲ್ಲಿ ನ್ಯಾಯದ ಪಾಲೆಷ್ಟೋ! ಅನ್ಯಾಯದ ಪಾಲೆಷ್ಟೋ! ಕಾಸು ಕೊಡದೆ ಭೋಗ ಸಿಕ್ಕದು; ಇದು ನಿಜ. ದ್ರವ್ಯಕ್ಕೂ ಭೋಗಕ್ಕೂ ಒಂದು ಸ್ಪಷ್ಟವಾದ ಇಹನೀತಿ ಸಂಬಂಧವಿದೆ. ನಾವು ಪರಿಮಾಣಜ್ಞಾನದಿಂದ ವರ್ತಿಸಿದ್ದೇ ಆದರೆ ಕ್ಷೇಮ ಸರ್ವತ್ರ ಸಾಧ್ಯ ವಾದೀತು. ಬಸ್ಸಿನಲ್ಲಿ ಕುಳಿತು ಕ್ಷಿಪ್ರವಾಗಿ ಊರಿನೊಳಗೆ ಓಡಾಡುವುದು, ಒಂದು ಸುಖತಾನೇ? ದುಡ್ಡು ಕೊಡುತ್ತೀರಿ. ಕೊಡುವ ದುಡ್ಡೆಷ್ಟು? ತಲೆಗೆ ಮೂರೂವರಾಣೆ. ಸುಖವೋ ನೀತಿಯ ಅಭಯಹಸ್ತದ ಶುಭಮುದ್ರೆಯುಳ್ಳ ಸಾತ್ವಿಕ ಜಾತಿಯ ಸುಖ!

ಸಿಟಿ ಬಸ್ಸುಗಳಿಗೆ ವಿರೋಧವಾಗಿ ಒಂದು ತಾತ್ಕಾಲಿಕ ವಾದ ಇದ್ದೇ ಇದೆ. ನಾವು ಬಡಜನ; ನಮ್ಮದು ಬಡ ದೇಶ. ಬೇಡ, "ಇಲ್ಲಿ ಇನ್ನು ಸಾಕೋ" ಎನ್ನುವಷ್ಟಿದೆ—ನಿರುತ್ಸಾಹಕ್ಕೆ, ದುಃಖಕ್ಕೆ, ದಹನಕ್ಕೆ ಬೀಸಾಡಿದ ಬೋಳು ಬಯಲು, ಬಾಯಿಗೆ ಬೀಗ, ಕೊರಳಿಗೆ ಉರುಲು, ಆಸೆಯ ಎದೆಯ ಮೇಲೆ ಮೂರಡಿ ಚಪ್ಪಡಿ. ಈ ಬ್ರಹ್ಮಾಂಡದಲ್ಲಿ ಎಲ್ಲ ಉಸಿರಾಡುವುದೇ ಒಂದು ಅಮೋಘ ಭಾಗ್ಯವಾಗಿದೆ. ಇಲ್ಲಿ ಹರ್ಷಪಡುವುದಕ್ಕೆ, ಅದಕ್ಕಾಗಿ ಧನವ್ಯಯಮಾಡುವುದಕ್ಕೆ ನಮಗೆ ಅವಕಾಶವಿಲ್ಲ. ಭೂಮಿಯ ಎಷ್ಟೋ

ಭಾಗ್ಯ ನಮಗಿಲ್ಲ. ಈ ವಾಹನ ಸೌಲಭ್ಯವೂ ನಮಗೆ ಬೇಕಿಲ್ಲ. ಇದು ಕಂಡ ವಿಷಯವೇ ಸರಿ. ಹಾಗೆ ಇದ್ದೇವೆ ಎಂದು ಹೇಳಿದರೆ ನಂಬುವವರು ಯಾರು ? ಈ ಆವರಣದಲ್ಲಿ ಎಲ್ಲಿ ಹೇಗೆ ಇರಲಿ, ಇಷ್ಟೋ ಅಷ್ಟೋ ಹರ್ಷ ಪಡುವ ಪುಣ್ಯವಿರುವುದರಿಂದಲೇ ಬದುಕು ಪ್ರಸನ್ನತೆಯಿಂದ ದುಡಿಯುತ್ತಿದೆ. ಹಾಗಿಲ್ಲದಿದ್ದರೆ ಇಂದಿನ ಕಲಾವಿದರೆಲ್ಲ ಎಂದೋ ಆತ್ಮಹತ್ಯ ಮಾಡಿಕೊಳ್ಳ ಬೇಕಾಗಿತ್ತು. ಕಾವ್ಯ ಬರೆಯುವವರಿಗೆಲ್ಲ ಇಂದು ಜನತೆಯ ಹೃದಯದಲ್ಲಿ ಪ್ರೀತಿಯ ಆಹ್ವಾನವಿದ್ದರೆ, ಅದರಿಂದ ಜನತೆ ಹೇಗೆ ನಿರಾಶೆಯಲ್ಲಿ ಆಶೆ ಯನ್ನು ಕಡೆದೇ ಹಬ್ಬಿಸುತ್ತಿದೆ ಎಂಬುದು ಧ್ವನಿತವಾಗುತ್ತಿದೆ.

ಕಾವ್ಯ ಬರೆಯದ, ಕಾವ್ಯ ಬರೆಯಲು ಇಷ್ಟವೋ ಸಾಮರ್ಥ್ಯವೋ ಇಲ್ಲದ, ಆದರೂ ಕಾವ್ಯ ಬೇಕು ಎನ್ನುವ ಜನಕ್ಕೆ ಕಾವ್ಯ ಒಲಿಯುವಂತೆ, ಶ್ರೀಮಂತರಲ್ಲದ, ವಾಹನ ಸೌಕರ್ಯವಿಲ್ಲದ ಬಡ ಜನಕ್ಕೆ ಸಿಟಿ ಬಸ್ಸು ಒಲಿ ದಿದೆ. ಬಸ್ಸು ಯಾರದೋ, ಪೆಟ್ರೋಲು ಎಲ್ಲಿಂದ ಬಂದಿತೋ, ನಡೆಸುವ ವನು ಯಾರೋ, ಟಿಕೆಟ್ ಕೊಡುವವನು ಯಾರೋ, ಅಂತೂ ಜನತೆಗೆ ಈ ಒಂದು ಸಂಸ್ಥೆಯಿಂದ ಮಹದುಪಕಾರವಾಗುತ್ತಿದೆ. ಶ್ರೀಮಂತರೂ ಅವರ ಕಾರುಗಳೂ ಜನತೆಯಲ್ಲಿ ದಿಗ್ಭ್ರಾಂತಿಯನ್ನು ಹುಟ್ಟಿಸುತ್ತಿದ್ದರೂ ಶ್ರೀಮಂತರ ವಾಹನಗಳಿಗೆ ಉದಾರದೃಷ್ಟಿ ಎಲ್ಲಿಂದ ಬರಬೇಕು ?

ಶ್ರೀಮಂತರು ಬಡವರಿಗೆ ಹೆಣ್ಣು ಕೊಟ್ಟು, ಬಡವರಿಂದ ಹೆಣ್ಣು ತಂದು ಬಡವರೊಡನೆ ಒಂದಾಗಿ ರಕ್ತಸಂಬಂಧ ಬೆಳೆಸುವ ಕಾಲ ಬಂದಾಗ ನಾವು ಅವರ ಕಾರುಗಳನ್ನು ಉಪಯೋಗಿಸಿಕೊಂಡರೆ, ಅದರಿಂದ ನಮಗೆ ತೊಂದರೆ ಇರಲಾರದು. ನಮ್ಮಿಂದ ಅವರಿಗೆ ಹಿಂಸೆ ಇರಲಾರದು. ಹೀಗೆ ಕೇಳು ವುದರಲ್ಲಿ ಒಂದು ಅನ್ಯಾಯವಿದೆ. ಈ ಸಮಾನಸ್ಥಿತಿ ಬರಬೇಕು. ಬಡವರು ಐಶ್ವರ್ಯವಂತರಾಗಿ ಶ್ರೀಮಂತರ ಸಮಾನರಾಗಬೇಕೇ ಹೊರತು, ಇರುವ ಅಲ್ಪಸ್ವಲ್ಪ ಸಂಖ್ಯೆಯ ಶ್ರೀಮಂತರೂ ಬಡವರಾಗಿ ಬಡವರೊಂದಿಗೆ ಸಮಾನ ರಾಗಬೇಕು ಎನ್ನುವುದು ದೇಶದ ಹಿತದೃಷ್ಟಿಯಿಂದ ಅಪಾಯಕರವಾದ ಪ್ರಚಾರಕಾರ್ಯ. ಅಲ್ಲಿಯವರೆಗೂ ವಾಹನ ಸೌಲಭ್ಯ ಬಡವರಿಗೆ ಬೇಕಾ ದಲ್ಲಿ ಸಿಟಿ ಬಸ್ಸೇ ಉಳಿದ ಒಂದು ಗತಿ. ಕಾರುಗಳ ಒಡೆಯರಾದ ಶ್ರೀಮಂತ ರಿಗೆ ಇನ್ನೊಂದು ಮಹಾ ಭಯವಿದೆ. ಕಾರಿನ ಕಿನಕಾಪಿನ ಸೋಫಗಳ

ಮೇಲೆ ಬಡವರು ಕುಳಿತರೆ, ಒಲ್ಲದ ಮನಸ್ಸಿನಲ್ಲಿ ಇಲ್ಲದ ಸಮಾನತೆಯನ್ನು ಮೆರಸಿ ತಾವು ಅಧೋಗತಿಗಿಳಿದರೆ ಮುಂದಿನ ಜನ್ಮದಲ್ಲಿ ಲಕ್ಷ್ಮಿ ಒಲಿದಾಳೆ! ಪರಿಸ್ಥಿತಿ ಹೀಗಿದ್ದರೆ ವಾಹನಪ್ರಿಯರಾದ ಬಡಜನಕ್ಕೆ ಸಿಟಿ ಬಸ್ಸೇ ಗತಿ. ವಿಮಾನಗಳು ಊರೊಳಗೇ ಓಡಾಡುವುದು ಸಾಧ್ಯವಿಲ್ಲ. ಕುದುರೆಗಾಡಿಗಳಿಗೆ ಹೆಚ್ಚು ಬಾಡಿಗೆ ಕೊಡಬೇಕು—ಕುದುರೆಗಷ್ಟು, ಗಾಡಿಗಷ್ಟು. ಎತ್ತಿನ ಗಾಡಿಗಳಲ್ಲಿ ಓಡಾಡುವ ಕಾಲ ಹೋಯಿತು. ನವನಾಗರಿಕತೆಯ ಗೊಂದಲದಲ್ಲಿ ಎತ್ತಿನ ಗಾಡಿಗಳಲ್ಲಿ ಊರೊಳಗೆ ಪ್ರಯಾಣಮಾಡುವುದು ಕ್ಷೇಮವಲ್ಲ. ಬೈಸಿಕಲ್ಲುಗಳು ಇರುವ ಮಹನೀಯರಿಗೆ ಪಾದಚಾರಿಗಳ ಗಮನವಿರುವುದಿಲ್ಲ. ಅವುಗಳ ಬೆಲೆಯೂ ಏರಿದೆ. ದಂಪತಿಗಳು ಕೂಡುವುದು ಹೇಗೆ? ಮುದುಕರು ಮಕ್ಕಳ ಗತಿಯೇನು? ಹೀಗಾಗಿ ನಾಗರಿಕರಿಗೆ ಸಿಟಿ ಬಸ್ಸು ಬಹಳ ಪ್ರಿಯವಾಗಿದೆ.

ಇಲ್ಲಿ ಬನ್ನಿ. ಅಲ್ಲಿ ನೋಡಿ! ಆ ಬೆಳಕಿನ ಗೊಂಚಲಿನ ಹಿಂದೆ ಗಾರೆಯ ದೊಡ್ಡ ನಾಯಿ ಕೊಡೆಯ ನೆರಳಿನಲ್ಲಿ ನಮಗಾಗಿ ಆ ವಾಹನ ಕಾದಿದೆ. ಜೇಬಿನಲ್ಲಿ ಒಂದೂವರೆ ಆಣೆ ಇದ್ದರೆ ಸರಿ, ಐದು ನಿಮಿಷದಲ್ಲಿ ದಾರಿಯನ್ನು ದಾಟಿ ಗೂಡನ್ನು ಸೇರಿಕೊಳ್ಳಬಹುದು. ಅಷ್ಟಲ್ಲದೆ ಏನು? ಈ ಕಾಸು ಒಡ್ಡಿದ ಕತ್ತಲೆಯಲ್ಲಿ ಮೂರು ಮೈಲಿ ಉದ್ದದ ಪೆಡಸು ದಾರಿಯನ್ನು ಯಾರು ನಡೆದಾರು? ಒಂದೆರಡು ಹನಿ ಮಳೆಯೂ ಬಿದ್ದಿತು. ಎಡ ಎಕ್ಕಡಕ್ಕೆ ಮೂಗುತಿಯಿಲ್ಲ. ಛತ್ರಿಯನ್ನು ಹರಡಿದರೆ ಅದು ಮುನಿಸಿನಿಂದ ತಳಗುಮೇಲಾಯಿತು. ಮನುಷ್ಯರು ಅನೇಕ ಸಂದರ್ಭದಲ್ಲಿ ಪ್ರತಿಕೂಲ ದೈವರು.

ಸುಮ್ಮನೆ ಬಸ್ಸಿನಲ್ಲಿ ಕುಳಿತು ಅದನ್ನು ಹೊರಡು ಎಂದು ಶಪಿಸಿದರೆ ಏನೂ ಆಗುವುದಿಲ್ಲ, ನಾವು ಇಳಿದು ತಳ್ಳಬೇಕು. ಸಾರ್ವಜನಿಕ ಸೇವೆಗಾಗಿ ಸೊಂಟಕಟ್ಟಿ ನಿಂತ ರಥಕ್ಕೆ ದೇಹವಿದೆ. ಜೀವವಿದೆ, ಎರಡು ಕಣ್ಣಿರಬೇಕು—ಒಂದು ಮಾತ್ರ ಉರಿಯುತ್ತಿದೆ, ಇನ್ನೊಂದು ಆರಿಹೋಗಿದೆ. ದಾರಿಯ ಎಡ ಭಾಗವಲ್ಲೇ ಇಷ್ಟೇ ವೇಗದಿಂದ ಅದು ಸಾಗಬೇಕು ಎಂಬ ನಿಯಮಗಳಿರುವಾಗ ಒಂದೇ ಕಣ್ಣು ಸಾಕು. ಈ ದಿನ ಅದೇನೋ ಬಸ್ಸು ನೆಗಡಿಯಿಂದ ನೊಂದಿರುವಂತಿದೆ. ನೀರು-ಬೆಂಕಿಗಳ ಹೋರಾಟದಲ್ಲಿ ಬಸ್ಸು ಬಡವಾಗಿದೆ.

ಮೇಲು ಹೊದಿಕೆ ನಡುಗುತ್ತಿದೆ. ಹೃದಯವನ್ನು ಕಿತ್ತು ಕೈಯಲ್ಲಿಟ್ಟುಕೊಂಡ ಪರಮಭಕ್ತನಂತೆ, ಬ್ಯಾಟರಿಯನ್ನು ತೆಗೆದು, ಬಸ್ಸು ಡ್ರೈವರಿನ ಪಕ್ಕದಲ್ಲಿಟ್ಟು ಕೊಂಡಿದೆ. ನಿತ್ಯ ಹತ್ತು ಸಲ ನಮ್ಮ ಉಪನಗರದ ದಿಬ್ಬವನ್ನು ಹತ್ತುವ ಈ ಶ್ರಮಜೀವಿಗೆ ಜೀವವಿಲ್ಲ ಎನ್ನಲಾರೆ. ಡ್ರೈವರು ನಡೆಸುತ್ತಾನೆ, ಬಸ್ಸು ಓಡುತ್ತದೆ ಎನ್ನುವ ಆಸ್ತಿಕವಾದವನ್ನು ಹುಡುಗರಿಗೆ ಹೇಳಿ. ತಿಳಿದವರು ನಾಸ್ತಿಕವಾದ ಹೂಡಿ ನೋಡಿ. ಬಸ್ಸು ನಡೆಯುತ್ತಿದೆ; ಬಸ್ಸು ನಿಲ್ಲುತ್ತಿದೆ; ಹರಿಯುತ್ತಿದೆ: ಮೊರೆಯುತ್ತಿದೆ; ಅದರ ಮನಸ್ಸು ತುಂಬಾ ಉದಾರ ವಾದುದು. ಇಪ್ಪತ್ತೆರಡು ಜನ ಕೂರುವ ಸ್ಥಳದಲ್ಲಿ ನಲವತ್ತು ಜನ ಕುಳಿತರೂ ಅದು ಆಕ್ಷೇಪಿಸುವುದಿಲ್ಲ. ಒಳಗಿರುವವರೆಲ್ಲ ಕಾರುಗಳಿಲ್ಲದ ಭಿಕಾರಿಗಳೆಂಬುದನ್ನು ತಿಳಿದು ಆ ಸಮುದಾಯದಲ್ಲಿ ಹೆಣ್ಣು ಗಂಡು, ಯೋಗ್ಯ ಅಯೋಗ್ಯ, ರೋಗಿ ಅರೋಗಿ, ಉತ್ತಮ ಅಧಮ, ಮುದುಕರು ಮಕ್ಕಳು ಎನ್ನುವ ಭೇದಭಾವವನ್ನೇ ದೂರೀಕರಿಸಿದೆ. ಸಹನೆಯಲ್ಲಿ ಬಸ್ಸು ಭೂಮಿ ದೇವಿಗೆ ಮಾತ್ರ ಎರಡನೆಯದು. ಎಲ್ಲ ಜಾತಿಗಳೂ ಒಂದಕ್ಕೊಂದು ಮಸೆದಾಡಿ ಒಂದಾಗಲಿ ಎಂದು ಅದು ವಿಶ್ವಪ್ರಯತ್ನ ಮಾಡುತ್ತಿದೆ. ಒಳಗೆ ಬೆಳಕಿದೆ, ದೂರಕ್ಕೆ ಎಲ್ಲಾ ಒಂದೇ ಮನುಷ್ಯರ ಮುದ್ದೆಯಂತೆ ಕಾಣಿಸುತ್ತಿದೆ. ಆದರೆ ಒಳಗೆ ಹೋಗಿ ಸ್ಥಳ ಕೇಳಿ ಅಥವಾ ಸ್ವಲ್ಪ ಮುದುರಿಕೊಳ್ಳಿ ಎಂದು ಹೇಳಿ ನೋಡಿ. ಎಂಥ ಪ್ರತಿಭಟನೆ ನಿಮ್ಮನ್ನು ಸ್ವಾಗತಿಸುತ್ತದೆ! ಅಲ್ಲಿಯ ಜನ ತಾವು ಬೇರೆ ಬೇರೆ ಗ್ರಹಗಳಿಂದಲೇ ಬಂದಿಳಿದವರು ಎಂಬ ಭಾವವನ್ನು ಪ್ರದರ್ಶಿಸುತ್ತಾರೆ. ಅಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ಕೊಡಬೇಕೆಂದು ಪ್ರಚಂಡ ಭಾಷಣಗಳನ್ನು ಮಾಡುವ ಸಮರ್ಥರಿದ್ದಾರು. ಅವರನ್ನೇ ಕೇಳಿ, ಅಲ್ಲಿ ಹೆಂಗಸಿಗಾದರೂ ಸ್ಥಳ ಕೊಡುತ್ತಾರೆಯೇ? ಮಕ್ಕಳಿಗಾಗಿ ಯಥೇಚ್ಛವಾಗಿ ಶುದ್ಧವಾದ ಹಾಲನ್ನು ಹಂಚುವ ವ್ಯವಸ್ಥೆಯ ಸಂಚಾಲಕರೂ ಇದ್ದಾರು. ಅವರನ್ನೇ ಕೇಳಿ, ನಿಮ್ಮ ಮಗುವಿಗೆ, ನಿಮ್ಮ ಪ್ರೀತಿಯ ಅಭಿಮನ್ಯುವಿಗೆ ಆ ಚಕ್ರಭೀಮನ ಕೋಟೆಯಲ್ಲಿ ಸಾಹಸವಿಲ್ಲದೆ ಪ್ರವೇಶವುಂಟೆ ನೋಡಿ. ಒಂದು ವೇಳೆ ಸಮಾಜ ಸುಧಾರಣೆ ಸಿಟಿ ಬಸ್ಸಿನಿಂದ ಸಾಧ್ಯವಿಲ್ಲ ಎಂದು ನೀವು ಹೇಳಿದರೂ ಹೇಳಿಬಿಡಿ. ಇದಕ್ಕೆಲ್ಲ ಬಸ್ಸು ಹೊಣೆಯಲ್ಲ........ವಿಳೈಯದೆಲೆಯೇನೋ ಎಲ್ಲರಿಗೂ ಬೇಕಾದ ಪದಾರ್ಥವೇ ಸರಿ;

ಅದನ್ನು ಮಾರುವ ಹುಡುಗಿ ಮಾತ್ರ ಎಲ್ಲರಂತೆ ಬಸ್ಸಿಗೆ ದುಡ್ಡು ಸುರಿದು ಟಿಕೆಟ್ ಕೊಟ್ಟು ಬಂದಿದ್ದರೂ ಬಸ್ಸಿನ ಕೂರುಮಣೆಯ ಪಕ್ಕದಲ್ಲಿ ಆಕ್ಷೆ ಹುದುಗಿಕೊಳ್ಳಬೇಕಂತೆ. ಇದು ಬಸ್ಸಿನ ತಪ್ಪಲ್ಲ; ಇಪ್ಪತ್ತುನಾಲ್ಕು ಜನ ಸೇರಿ ಇಪ್ಪತ್ತೈದನೆಯ ಹೆಣ್ಣು ಮಗಳಿಗೆ ಮಾಡಿದ ಮರ್ಯಾದೆ. ಆಕೆಗೆ ಅದು ಒಗ್ಗಿಹೋಗಿದೆ. ಆದರೆ ಈ ಸ್ಥಿತಿಯನ್ನು ಹೇಗೆ ಗೌರವಿಸೋಣ? ಅಮಾನುಷ ದೌರ್ಜನ್ಯದಿಂದ ಅತ್ಯಲ್ಪ ಲಾಭಕ್ಕಾಗಿ ಒಂದು ಜಾತಿ ಇನ್ನೊಂದು ಜಾತಿಯ ಏಳಿಗೆಯನ್ನು ಸಹಿಸಲಾರದೆ ಕೊಡಲಿ ಮಸೆಯುತ್ತಿದ್ದರೆ ಜಗತ್ತಿನ ತಂದೆಯಾದ ಭಗವಂತನು ಇತ್ತ ಕಣ್ಣು ತೆರೆದು ನೋಡಿ ತನ್ನ ಉದ್ದೇಶ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿ ಸಂತೋಷ ಪಡಲಿ! ಇದಕ್ಕೆ ತಾಯಿ ನೆಲ ಏನು ಮಾಡೀತು? ಸಿಟಿ ಬಸ್ಸು ಏನು ಮಾಡೀತು?

ಅತ್ತ ಒಡೆಯನಿಗಾಗಿ ಬಂಗಾರ ದುಡಿದು ಸ್ವಾಮಿ ಭಕ್ತಿಯನ್ನು ಸಲ್ಲಿಸಿ, ಇತ್ತ ಈ ಬಡವರಿಗಾಗಿ ಸಾರ್ವಜನಿಕ ಸೇವೆಯನ್ನು ಸಲ್ಲಿಸಿ ಕೃತಾರ್ಥವಾಗಿರುವ ಆ ಸಿಟಿ ಬಸ್ಸಿನ ಘನತೆ ಎಷ್ಟು? ಈಗ ನಮ್ಮ ಮನೆಯ ಬಳಿಯಲ್ಲಿ ಓಡಾಡುತ್ತ ನನ್ನ ಹೃದಯ ಸುಂದರಿಯನ್ನೂ ಪ್ರೇಮ ಕುಸುಮಗಳನ್ನೂ ಆಗಾಗ ಮೆರಸುತ್ತಿರುವ ಬಸ್ಸಿನ ವಿಷಯದಲ್ಲಿ ನನ್ನ ಆತ್ಮೀಯತೆ ಪ್ರವರ್ಧಿಸುತ್ತಿದೆ. ಇದು ಸಿಟಿ ಬಸ್ಸಲ್ಲ; ಗುಲಾಬಿಯ ಗುಡಿ. ಬೀದಿಗಳ ತಿರುವಿನಲ್ಲಿ ನಿಂತು ಜನಗಳನ್ನು ಇಳಿಸುವ ಹತ್ತಿಸಿಕೊಳ್ಳುವ ಅದರ ತಾಳ್ಮೆ ಏನು, ತಡವಾಗಿ ಬಂದೇನೇ ಹೊರತು ಬಾರದೆ ನಿಲ್ಲೆನು ಎನ್ನುವ ಅದರ ಮೇಘಸಂದೇಶವೇನು, ಜನರ ಸುಳಿವನ್ನು ಕಂಡರೆ ಕೂಗಿ ಕರೆಯುವ ಅಭಿಮಾನ ಧ್ವನಿ ಏನು, ಮಕ್ಕಳನ್ನು ಛಾರ್ಜಿಲ್ಲದೆ ಕೂಡಿಸಿಕೊಂಡು ಅಲೆಯುವ ಸರಳ ಹೃದಯವೇನು! ಸಿಟಿ ಬಸ್ಸಿಗೆ ಜೀವವಿದೆ. ಇದರಲ್ಲಿ ನನಗೆ ನಂಬಿಕೆಯಿದೆ.

ಸಿಟಿ ಬಸ್ಸಿಗೆ ಜೀವವಿದೆ ಎಂದೆನಲ್ಲ, ಅದಕ್ಕೆ ಸಾವೂ ಉಂಟು. ಅದರ ಪುನರ್ಜನ್ಮದ ವಿಚಾರದಲ್ಲಿ ನನಗೆ ಸಂಶಯವೂ ಉಂಟು. ಅದು ಸತ್ತರೆ ಅದರ ಅವಯವಗಳನ್ನೆಲ್ಲಾ ಕಿತ್ತು ಗೂರಾಡಿ ಕದ್ದು ಕಳಚಿ ಪಾಳುಗೋಡೆಗೆ ಒರಗಿಸುತ್ತಾರೆ. ಉಪಯುಕ್ತವಾದ ಯಂತ್ರಭಾಗಗಳನ್ನು ನೂತನ ವಾಹನಗಳಿಗೋಸ್ಕರ ಉಳಿಸಿಕೊಳ್ಳುತ್ತಾರೆ. ಹೀಗೆ ಚಲಾವಣೆಯಲ್ಲಿದ್ದ ಹಳೆಯ

ನಾಣ್ಯದ ಬೆಲೆ ಹೊಸ ಕಾಲ ಬಂದಿತೆಂದರೆ ಹೊಸ ಕಾಲದ ಲೋಹದ ಬೆಲೆಯಾಗುತ್ತದೆ. ನಮ್ಮ ಮನೆಯ ಹತ್ತಿರದಲ್ಲಿ ಒಂದು ಗತವೈಭವದ ಸ್ಮಾರಕವಿದೆ. ಅದನ್ನು ನೋಡಿದಾಗಲೆಲ್ಲ ಬಸ್ಸಿನ ಬದುಕು ಸಾವಿನ ಸಮಸ್ಯೆ ಕಾವ್ಯದ ಅಖಂಡ ಶಾಶ್ವತ ದೃಷ್ಟಿಯೊಡನೆ ಜೊತೆ ಜೊತೆಯಲ್ಲಿ ಏರುತ್ತದೆ. ವಿವೇಚನೆಯೊಂದೇ ನಮ್ಮನ್ನು ಕಾಪಾಡೀತು. ಅದನ್ನು ಯಾರು ನೋಡಿದರೂ ಎದೆ ಕರಗಿ ನೀರಾಗಿ, ಶಾಶ್ವತ ಪ್ರಯೋಜನದ ಸ್ವಪ್ನಚಂದ್ರನಿಗೆ ಭಯಂಕರ ರಾಹು ಹಿಡಿಯುತ್ತದೆ. ಹದ್ದು ತಿಂದ ಹೆಣ ಹೇಗೆ ಇದ್ದೀತು. ಶಾಪ ಕೊಡುವ ಉದ್ರೇಕಸ್ಥಿತಿ ಯಾವನಾದರೂ ಒಬ್ಬ ಮುಂಗೋಪಿ ಮುನಿಗೆ ಇಂದಲ್ಲ ನಾಳೆ ಒದಗಿದರೆ ಆತನು ತನ್ನ ಶತ್ರುವಿಗೆ ಈ ಬಿದ್ದ ಬಸ್ಸಿನ ಸ್ಥಿತಿ ಬರಲೆಂದು ಶಪಿಸಬಹುದು. ಆ ಮನಸ್ಸನ್ನು ಮಾತ್ರ ಭಗವಂತ ಯಾರಿಗೂ ಕೊಡದಿರಲೆಂದು ನನ್ನ ಭಕ್ತಿಯ ಪ್ರಾರ್ಥನೆ.

ಬಸವನಗುಡಿಯಲ್ಲಿ

ನನಗೆ ಬೆಂಗಳೂರು ಅಂದರೆ ತುಂಬ ಪ್ರೀತಿ. ನನ್ನ ಬಾಳಿನ ನಡುಗಾಲದಲ್ಲಿ ಒಂದೆರಡು ವರುಷ ಅಲ್ಲಿ ಒಂದು ಬಗೆಯ ವಿದ್ಯಾರ್ಥಿವಾಸ ಮಾಡಿದ್ದೇ ಅದಕ್ಕೆ ಕಾರಣ. ಲೆಕ್ಕ ಇಟ್ಟದ್ದೇನೆ—ಅದರಂತೆ ವರುಷಕ್ಕೆ ಒಂದುಸಲವಾದರೂ ಬೆಂಗಳೂರಿಗೆ ಹೋಗಿ ಬರುವ ರೂಢಿ ಸ್ಪಷ್ಟವಾಗಿದೆ. ಮೈಸೂರು ಹೀಗೆ ನನ್ನನ್ನು ಆಗಾಗ ಬೆಂಗಳೂರಿಗೆ ತಳ್ಳುತ್ತದೆ. ಇದೊಂದು ಜೋಲಿಯ ಆಟ !

ಈಸಲ ಬೆಂಗಳೂರಿನಲ್ಲಿ ನಾನು ಕಂಡ ನೋಟಗಳ ಪರಂಪರೆ ಏಪ್ರಿಲ್ ಸಂಜೆಯ ದಿಗಂತದ ತೆಂಗಿನ ತೋಟದಂತೆ ನನ್ನ ಜೀವದಲ್ಲಿ ನಿಲ್ಲುವಂತಿದೆ. ಅಲ್ಲಿಂದ ತೆಗೆದ ಒಂದು ಚಿತ್ರವಿದು ;—

೮-೭-೫೦ರ ಸಂಜೆ ; ನಾನು ಸನ್ನಿಧಿ ರಸ್ತೆಯನ್ನು ದಾಟಿ ಬಸವನಗುಡಿ ಸಹಕಾರ ಸಂಘದ ಬಳಿ ಬಸ್ಸಿಗಾಗಿ ಕಾದು ನಿಂತಿದ್ದೆ. ಸಿಟಿಬಸ್ಸಿನ ಸಂಚಾರದ ಕಾಲಕ್ರಮವನ್ನು ತಿಳಿಯದ ನನಗೆ ಅದು ಆಗಾಗ ಸಿಕ್ಕಿದರೂ ಸಿಕ್ಕುವುದು ಅಕಸ್ಮಾತ್ತಾಗಿ! ಪಕ್ಕದಲ್ಲಿ ನಿಂತವರನ್ನು 'ಬಸ್ಸು ಮತ್ತೆ ಈ ಕಡೆ ಎಷ್ಟು ಗಂಟೆಗೆ ಬರಬಹುದು' ಎಂದು ಕೇಳಿದರೆ ಅವರಿಗೆ ನನ್ನ ವಿಷಯದಲ್ಲಿ ಎಂಥ ಭಾವನೆ ಬರಬಹುದೋ ! 'ಬೆಂಗಳೂರಿನವನಲ್ಲ' ಅಂದರೆ ನನಗೆ ನಷ್ಟವಿಲ್ಲ; 'ಮೈಸೂರಿನವನು' ಎಂದಿಷ್ಟನ್ನಾದರೂ ಒಪ್ಪಿಕೊಂಡರೆ. ಎಷ್ಟೋ ವಿಷಯ ತಿಳಿಯದಿದ್ದರೂ, ಮಾನವಾಗಿ ಬರುವುದಕ್ಕಿಂತ ಹಿತವಾದ ಮಾರ್ಗವಿಲ್ಲ. ಕಾಲುಗಂಟೆ ಅರ್ಧಗಂಟೆ ಕಾದರೂ ಚಿಂತೆಯಿಲ್ಲ, ಬಾಯಿಬಿಚ್ಚಿ ಮುತ್ತು ಸುರಿದು ಮಾನ ಕಳೆದುಕೊಳ್ಳಬಾರದು. ಹೀಗೆ ಎಷ್ಟೋ ಜೀವ ಬದುಕಿನ ದಾರಿಯಲ್ಲಿ ಕಾಯುತ್ತಿದೆ, ಏಗುತ್ತಿದೆ, ಸಾಗುತ್ತಿದೆ.

ಸ್ವಲ್ಪಹೊತ್ತು ಕಳೆದ ಮೇಲೆ ನನ್ನ ಮುಂದೆ ಒಬ್ಬ ಜರಿಪೇಟದ ದೊರೆ ಬಂದು ನಿಂತುಕೊಂಡ ; ನನ್ನ ಹಿಂದೆ ಇನ್ನೊಬ್ಬ ಮದರಾಸಿ ಈಕಡೆ ಆಕಡೆ ತಂಬುಲವನ್ನು ಚೀರುತ್ತ ನೆಲಸಿಬಿಟ್ಟ. ಐದೇ ನಿಮಿಷದಲ್ಲಿ ನನ್ನ ಹಿಂದೆ ಮುಂದೆ ಅರುವತ್ತು ಎಪ್ಪತ್ತು ಗಜ ಉದ್ದದ 'ಮನುಷ್ಯರ ಹಾವು' ಬೆಳೆದುಹೋಯಿತು. ನನ್ನ ಮುಂದೆ ನಿಂತಿದ್ದ 'ಪೆನ್‌ಷನ್ ಅಮಲ್ದಾರ'ರ

ಅಳ್ಳಕವಾದ ಪೇಟವನ್ನೂ, ಹಿಮ್ಮಡಿಕಳೆದು ಕಾಲಚೀಲಕ್ಕೆ ಮಾತ್ರ ಆಸರೆ ಯಾಗಿದ್ದ ಹಳೆಯ ಬೂಟ್ಸನ್ನೂ ಅಮ್ಮಾವರ ಕೃಪೆಯಲ್ಲಿ ಬೆಳೆದ ಮುಖ ಪದ್ಮದ ನಿವೃತ್ತ ಸೌಂದರ್ಯವನ್ನೂ ಹಾಗೂ ಹೀಗೂ ನೋಡುತ್ತ ನಿಂತು ಒಂದೆರಡು ಕಳೆಯಲೇಬೇಕಾದ ನಿಮಿಷಗಳನ್ನು ಹಾರಿಸುವಂತಿರಲಿಲ್ಲ. ನನ್ನ ಹಿಂದೆ ಮದರಾಸಿ ಫುಟ್‌ಪಾತಿನ ಮೇಲೆ ಕಟ್ಟಿದ ಕೋಣನಂತೆ ಆಡುತ್ತಿದ್ದ. ಕಡೆಗೆ ನಾನು ಆರನೆಯ ಸ್ಥಾನವನ್ನು ಬಿಟ್ಟುಕೊಟ್ಟು ಅರುವತ್ತರಲ್ಲಿ ನಿಲ್ಲಲೇ ಬೇಕಾಯಿತು, ನನ್ನ ಹಿತಕ್ಕೆ—ಇಲ್ಲ, ವಿಧಿಯಿಲ್ಲದೆ ಬಂದ ನಾಗರಿಕತೆಯ ಕಲ್ಪನೆಗೆ. ಇವನಿಗೆ ಬುದ್ಧಿಯಿಲ್ಲ ಎಂದು ಐವತ್ತೊಂಬತ್ತು ಜನ ನಕ್ಕಿರ ಬಹುದು. ನಾನು ಹೆದರಲಿಲ್ಲ. ಅಲ್ಲದೆ ಈಗ ಬರುವ ಬಸ್ ಸಿಕ್ಕದಿದ್ದರೂ ಮುಂದೆ ಇನ್ನು ಹದಿನೈದು ನಿಮಿಷದ ಆಚೆಗೆ ಬರುವ ಬಸ್ ನನ್ನನ್ನು ಕೂರಿಸಿಕೊಂಡೇ ಹೊರಡುವುದೆಂಬುದು ಖಚಿತವಾಗಿತ್ತು. ಒಂದು ಸಲಕ್ಕೆ ಮೂವತ್ತು ಜನ,—ಸರಿ ನನ್ನ ಎಣಿಕೆ!

ನನ್ನ ಹತ್ತಿರವೇ ಮೊದಲನೆ ಬಸ್ ನಿಂತಿತು. ಕ್ಯೂ ತುದಿಯಿಂದ ನೋಡಿದೆ. ಅರ್ಧ ಕ್ಯೂ ಬಸ್ಸಿನಲ್ಲಿ ಸೇರಿಕೊಂಡಿತು; ಉತ್ತರಾರ್ಧ ಕಾಲಿದ್ದೂ ಕುಂಟನಂತೆ ತೆವಳಿ ಫುಟ್‌ಪಾತಿನ ಅಂಚಿಗೆ ಹರಿಯಿತು. ಬಸ್ ಬುಸ್ಸೆನ್ನುತ್ತ ಹೊರಟುಹೋಯಿತು. ಅಂಗಡಿಗಳಲ್ಲಿ ದೀಪಗಳು ಮಿನುಗಿದುವು; ಪೇಟೆಯಲ್ಲಿ ಜನ ಬೆಳಕಿನಲ್ಲಿ ಕತ್ತಲೆಯಲ್ಲಿ ಓಡಾಡುತ್ತಿದ್ದರು. ಬುಟ್ಟಿಹಿಡಿದ ಆಳುಗಳು, ಮಳೆಯಿಲ್ಲದಿದ್ದರೂ ಛತ್ರಿಹಿಡಿದ ಮುದುಕರು, ಕನ್ನಡಕ ಹಾಕಿ ಕೊಂಡ ಮಾತ್ರಕ್ಕೆ ಹುಡುಗಿಯರಂತೆ ಹಿಗ್ಗುವ ಮುದುಕಿಯರು, ಬೆಂಗಳೂರು ರಸ್ತೆಗೆ ಟಾರ್ ಹಾಕಿದ್ದಾರೆಯೇ ನೀರು ಹಾಕಿದ್ದಾರೆಯೇ ನೋಡದೆ ಕಾರಿ ನಲ್ಲಿ ಹಾರುವ ದೊಡ್ಡ ಮನುಷ್ಯರು—ಇನ್ನೂ ಸೇರಿ ಎಲ್ಲಾ ಸೇರಿ, ಬೆಂಗಳೂರು.

ನನಗೆ ಒಂದು ಮಾತ್ರ—ನಿಜವೋ, ಭ್ರಮೆಯೋ—ಬೆಂಗಳೂರು ಹುಡುಗಿಯರು ಲವಲವಿಕೆ ಕಳದುಕೊಂಡಿರುವಂತೆ ತೋರಿತು. ಉತ್ತರದಿಂದ ಬಂದ ಸಿಂಧಿ ಕಾಶ್ಮೀರಿಗಳ ವೇಷಭೂಷಣಗಳಿಂದ ಬೇಕಾ ದಷ್ಟು ವಿವಿಧತೆಯನ್ನು ತಂದುಕೊಂಡಿದ್ದರೂ, ಮುಖದಲ್ಲಿ ಬಳಲಿಕೆ ಕಾಣು ತ್ತಿತ್ತು. ಹುಡುಗರ ಮುಖದಲ್ಲೂ ಕೆಂಪಿನ ಬದಲು ಬಿಳುಪು. ಇದಕ್ಕೆ

ಕಾರಣ? ಅನ್ನದ ಕುದುರೆಗೆ ಚಿನ್ನದ ಚಾವಟಿಯೇಟು ಬಿದ್ದಿತ್ತು.

ನಾನು ಒಂದು ಭಾಗದಲ್ಲಿ ಪುಣ್ಯಶಾಲಿ; ಬೆಂಗಳೂರಿನ ಒಂದು ಉಪ ನಗರದ ಅಂಚಿನಲ್ಲಿ ನನ್ನನ್ನು ಗುರುತಿಸುವ ಜನ ತುಂಬ ವಿರಳ; ಸಿಕ್ಕುವುದೇ ಇಲ್ಲ. ಆದರೆ ಆ ದಿನ ಬಸ್ಸಿನ ಬಳಿ ಯಾರೋ ನನ್ನನ್ನು ಹಿಡಿದೇ ಬಿಟ್ಟರು. ನನ್ನ ಹಿಂದೆ ಗಂಡ ಹೆಂಡತಿ—(ಒಂದು ಹೊಸ ಜೊತೆ)—ಬಂದು ನಿಂತರು. ಏನೋ ಗುಸುಗುಸು; ಒಂದಿಷ್ಟು ನಗು. ಆ ಹುಡುಗ ನನ್ನನ್ನು ಕೇಳಿದ. 'ಎಲ್ಲಿಗೆ ಹೊರಡುವಿರಿ; ಮಲ್ಲೇಶ್ವರಕ್ಕೆ ತಾನೆ.' ನಾನು ಹಿಂದಿರುಗಿ 'ಹೌದು' ಎಂದು ಸುಮ್ಮನಾದೆ. ಧೈರ್ಯವಾಗಿ ಆತ ಕೇಳಿದ 'ನೀವಲ್ಲವೆ' ಬರೆದವರು ನೀವಲ್ಲವೇ... ?' 'ಅಲ್ಲ' ಎಂದು ನನ್ನ ಉತ್ತರ. ಆ ಹುಡುಗಿ ಹೇಳುತ್ತಿದ್ದಳು ಗಂಡನ ಕಿವಿಯಲ್ಲಿ; 'ಸುಳ್ಳು ಸುಳ್ಳು' ಇವರೇ; ಇವರು ಮೈಸೂರಿನಲ್ಲಿ ನಮ್ಮ ಮನೆಯ ಹತ್ತಿರ ಇದ್ದವರು; ಈಗ ನನ್ನನ್ನು ಕಾಣದವರಂತೆ ನಟಿಸುತ್ತಾರೆ! ಮತ್ತೆ ಕೇಳಿ! ಆಗ ನಾನು ಇದನ್ನು ಕೇಳಿ ಸುಮ್ಮನಿರುವುದು ಅಸಾಧ್ಯವಾಯಿತು. 'ನೀವು ಯಾರನ್ನೋ ನೆನೆದು ಯಾರೊಂದಿಗೋ ಮಾತಾಡುತ್ತಿದ್ದೀರಿ. ನಾನು ಪದ್ಯ ಬರೆಯುವವನಲ್ಲ. ಆ ಪದ್ಯ ಯಾವುದು, ಎಲ್ಲಿದೆ. ಅಷ್ಟಾಗಿ ನಾನು ಅಂಥ ಪದ್ಯಗಳನ್ನು ಓದಿಯೇ ಇಲ್ಲ' ಎಂದು ಮುಕ್ತಾಯ ಮಾಡಿದೆ. ಅಷ್ಟು ಹೊತ್ತಿಗೆ ಬಸ್ ಬಂದಿತು. ನಾನೂ ಸೇರಿ, ಆ ಜೊತೆಯಲ್ಲಿನ ಹೆಣ್ಣು ಮಾತ್ರ ಸೇರಿ ಬಸ್ ಹತ್ತಿದೆವು. ಆಕೆಯ ಗಂಡ ಫುಟ್‌ಪಾತಿನಮೇಲೆ ಉಳಿದುಕೊಂಡ. ಕಂಡಕ್ಟರ್ ತಡೆದು ಬಿಟ್ಟ; ಸ್ಥಳವಿಲ್ಲ. ಇನ್ನೊಬ್ಬನನ್ನು ಕೂರಿಸುವುದೂ ಅಪರಾಧ. ನಾನು ಅರೆಗಳಿಗೆಯ ಸ್ನೇಹದಿಂದಲೇ ಉಬ್ಬಿ, ಕಂಡಕ್ಟರೊಂದಿಗೆ ಚರ್ಚೆ ಮಾಡಿದೆ. ಹೆಂಡತಿ ಬಸ್ಸಿನಲ್ಲಿ ಇದ್ದಾಳೆ; ಗಂಡನನ್ನು ಬೀದಿಯಲ್ಲಿ ನಿಲ್ಲಿಸಿಬಿಡುವುದು ತಪ್ಪು; ಉದ್ದಕ್ಕೂ ಈ ಜೊತೆ ನಿಲ್ಲುವಂಥಾದ್ದು; 'ಒಡೆಯಬಾರದು' ಎಂದು ಕೇಳಿಕೊಂಡೆ. ಕೋರ್ಟಿನ ಭಯದ ಕಬ್ಬಿಣದ ಕಿವಿಯಲ್ಲಿ ಪ್ರೇಮಗೀತೆಗೆ ಸ್ಥಳವಿರಲಿಲ್ಲ. ನನಗೆ ಮನಸ್ಸಿನಲ್ಲಿ ಅರಳು ಮೊಸರು ಕಲಸಿದಂತಾಯಿತು. ಬಸ್ಸಿನಲ್ಲೂ ನನ್ನ ಕಡೆ ಕೆಲವರು ಆ ಮದುವಣಿಗನಿಗೆ ಅನುಕೂಲವಾಗಿ ನುಡಿದರು; ನುಡಿದರು ಅಷ್ಟೆ, ಒತ್ತಿಕೊಂಡು ಸ್ಥಳಕೊಡುವ ಸಂಪ್ರದಾಯ ವನ್ನು ಕಂಡರಿಯದವರಂತೆ ಇದ್ದುದರಲ್ಲಿ ಅಗಲವಾಗಿ ಕುಳಿತುಬಿಟ್ಟರು. ಆ

ಹುಡುಗನಿಗೆ ಈ ಬಸ್ಸಿನಲ್ಲಿ ಹೆಂಡತಿಯ ಕೂಡ ಕುಳಿತುಕೊಂಡು ಹೋಗುವ ಅದೃಷ್ಟವಿಲ್ಲ ಎಂದು ನನಗೆ ತೋರಿತು. ಏಕೆಂದರೆ ನಾನು ಮಾಡಿದ ಪ್ರಯತ್ನ, ಅವನು ಮಾಡಿದ ಪ್ರಾರ್ಥನೆ ದೈವಕ್ಕೆ ಹಿಡಿಸಲಿಲ್ಲ. ಕಡೆಯದಾಗಿ ನಾನು ಕಂಡಕ್ಟರನ್ನುಕೇಳಿಕೊಂಡೆ. "ಅವರು ಈ ಬಸ್ಸನ್ನು ಹತ್ತಬೇಕಾದರೆ ಏನು ಉಪಾಯ ಉಳಿದಿರಬಹುದು." ಎಂದು. ಆತ ಹೇಳಿದ, 'ಯಾರಾದರೂ ಒಬ್ಬರು ಮಾತ್ರ ಕೆಳಗಿಳಿದರೆ ಸಾಕು' ಎಂದು. ಆದರೆ ಇಳಿಯುವ 'ಒಬ್ಬರು' ಅಲ್ಲಿ ಆ ಮಣಕು ದೀಪದ ಕಣ್ಣಿಗೆ ಬೀಳಲಿಲ್ಲ. ಬೀದಿಯಲ್ಲಿ ನಿಂತವನ ಮೇಲೆ ಯಾರಿಗೂ ಕನಿಕರವಿಲ್ಲ; ಬಸ್ ಕಾಲಕ್ಕೆ ಸರಿಯಾಗಿ ಹೊರಡಲಿಲ್ಲವಲ್ಲ ಎಂಬುದೇ ಕಟುಟೀಕೆ. ನಾನು ಬಿಟ್ಟಬಾಣ ನನ್ನನ್ನೇ ಅಟ್ಟಿಕೊಂಡು ಬಂದಿತು. ನಾನು ಸುಮ್ಮನೆ ಕೆಳಗಿಳಿದು ಆತನನ್ನು ಬಸ್ಸಿಗೆ ದಬ್ಬಿದೆ. ಅವನಿಗೆ ನಾಚಿಕೆ, ಇಷ್ಟವಿಲ್ಲ; ಹುಡುಗಿಗೆ ಸಂತೋಷ ಸಂಕೋಚ; ನನಗೆ ಹತ್ತಿದ ಸ್ಥಳದಲ್ಲೇ ಇಳಿದು ಉಳಿಯುವ ಸುಯೋಗ. ಬಸ್ ಮೊರೆಯಿತು; "....ಹೌದು:....'ನೀವಲ್ಲವೆ' ? ನಮ್ಮ ಮನೆ ಇಂಥಕಡೆ ಇದೆ ಬನ್ನಿ ....ತುಂಬ ಉಪಕಾರವಾಯಿತು....ನಿಮಗೆ ತೊಂದರೆ...." ಇದು ಆ ಇಬ್ಬರ ಮಾತು. ಇರುಳು ಹಬ್ಬಿತು; ಮೋಡವಿದ್ದೂ ಮಳೆಬೀಳದ, ಜನವಿದ್ದೂ ಔದಾರ್ಯವಿಲ್ಲದ ದುಷ್ಟ ರಾತ್ರಿಯಲ್ಲಿ ನಾನಂತೂ ಮಲ್ಲೇಶ್ವರಕ್ಕೆ ಹೋಗಿ ಬಂದವನಂತೆ ನಟಿಸುತ್ತ ಬಸವನಗುಡಿಯ ನನ್ನ ಟಿಕಾಣಿಯಲ್ಲಿ ತಂಗಿದೆ. ನಾನು ಮನೆಬಿಟ್ಟು ಹೊರಟದ್ದು ಅವರಿಗೆ ತಿಳಿದಿತ್ತು; ಈಗ ಎರಡುಗಂಟೆಯ ಮೇಲೆ ತಿರುಗಿ ಬಂದದ್ದು ಸ್ಪಷ್ಟವಾಗಿತ್ತು. ನಡುವೆ ನಾನು, ಹೇಳಿದ್ದಂತೆ ಮಲ್ಲೇಶ್ವರಕ್ಕೆ ಹೋಗಿದ್ದೆನೋ ರಾಮೇಶ್ವರಕ್ಕೆ ಹೋಗಿದ್ದೆನೋ ಗೊತ್ತಾಗುವುದು ಹೇಗೆ? ನಾನು ಆ ಸುದ್ದಿಯನ್ನೇ ಎತ್ತಲಿಲ್ಲ. ಸುಖವಾಗಿ ಊಟ ಮಾಡಿ, ಮನೆಯವರೊಂದಿಗೆ ಮಾತಾಡುತ್ತ ಜಮಖಾನವನ್ನು ಬಿಚ್ಚಿ ಕಂಬಳಿಯಲ್ಲಿ ಐಕ್ಯಹೊಂದಿದೆ. ರಾತ್ರಿಯೆಲ್ಲಾ ಪ್ರಶ್ನೆಗಳು ಉತ್ತರಗಳು....ಬಸ್ಸಿನಲ್ಲಿ ನಡೆದ ಸಂಗತಿ ದಿಟವೋ ಸಟೆಯೋ. ಅದು ಕವಿತೆಗೆ ಹೂರಣವಾದೀತೋ! ಹರಟೆಗೆ ತೋರಣವಾದೀತೋ, ಸುಮ್ಮನೆ ವ್ಯಥೆಗೆ ಕಾರಣವಾದೀತೋ! ಆ ಹೊಸ ಜೋಡಿ ತುಂಬ ಗೆಲುವಾಗಿತ್ತು. ಆ ಸಂತೋಷದ ಹೊಂಬಿಸಿಲನ್ನು ದೇವರಿಗೆ ಮಾತ್ರ ಹೋಲಿಸಬಹುದಾಗಿತ್ತು. ನಾನೂ

ಅದನ್ನು ಕಂಡವನೇ, ನನ್ನ ಬಾಳಿನಲ್ಲಿ, ಹತ್ತು ವರುಷದ ಹಿಂದೆ. ಅದನ್ನು ತಮ್ಮ ತಮ್ಮ ಬಾಳಿನಲ್ಲಿ ಕಾಣದವರೇ ಕುರುಡರು. ಅವರು ಯಾರಾದ ರೇನು? ನಾನು ಮಾಡಿದ್ದು ಸರಿ; ನಾನು ಬರೆದ ಒಂದು ಗೀತೆಯನ್ನು ಅವರು ಸ್ಮರಿಸಿ ನನಗೂ ಅದಕ್ಕೂ ಹೃದಯದಲ್ಲಿ ಆದರವನ್ನು ತೋರಿದುದರಿಂದ, ಆ ಗೀತೆಯೋ ಅಂಥ ಗೀತೆಗಳೋ ಸಫಲವಾಗುವುದು ಇಂಥ ಬಾಳಿನ ಸಂತೋಷ ದಲ್ಲೇ ಎಂದು ನಾನು ನಂಬಿರುವುದರಿಂದ, ನಾನು ಮಾಡಿದ್ದು ತುಂಬ ಸರಿ. ಇಂಥ ಅಪರಿಚಿತ ಸ್ನೇಹಿತರು ಸಿಕ್ಕುವುದು ಸುಲಭವಲ್ಲ. ಕಂಡಕ್ಟರ ಮನಸ್ಸು ಕೋಮಲವಾಗಿದ್ದಿದ್ದರೆ, ನನ್ನನ್ನು ಕುರಿಯಂತೆ ಕಂಡ ಬಸ್ಸಿನ ಮಂದಿ ಯಲ್ಲಿ ಇನ್ನೊಬ್ಬ ಇಳಿಯುವ ಮನಸ್ಸು ಮಾಡಿದ್ದರೆ, ನಾನು ಮಲ್ಲೇಶ್ವರಕ್ಕೆ ಹೋಗಿ ಬರಬಹುದಾಗಿತ್ತು, ಆ ದಂಪತಿಗಳು ಚರ್ಚೆಯನ್ನು ಬೆಳೆಸಬಹು ದಾಗಿತ್ತು. ಆದರೆ ಪ್ರೇಮಗೀತೆಯ ಬರೆಯುವ ಯಂತ್ರವಾಗುತ್ತಿದ್ದೆನೇ ಹೊರತು ಅದರಂತೆ ಇಷ್ಟೊ ಅಷ್ಟೊ ಬಾಳಲು ಬಯಸುವ ಮಾನವನಾಗು ತ್ತಿರಲಿಲ್ಲ. ಈ ದೃಷ್ಟಿಯಿಂದಲೂ ನಾನು ಮಾಡಿದ ಅಲ್ಪತ್ಯಾಗ ಅತಿ ಪ್ರಿಯವಾದುದೆಂದೇ ಹೇಳಬೇಕು.

ಅನ್ತಃಪುರಗೀತೆ

ನಮಃ ಕೇಶವನಾಥಾಯ। ನಯನಾನಂದಮೂರ್ತಯೆ॥
ವೇಲಾಪುರೀ ನಿವಾಸಾಯ ಸತ್ಯಜ್ಞಾನಾಯ ವಿಷ್ಣವೆ॥

ಸ್ನೇಹಿತರೆ, 'ಶ್ರೀಮಾನ್ ಡಿ. ವಿ. ಗುಂಡಪ್ಪನವರ ಅನ್ತಃಪುರಗೀತೆಯನ್ನು ನಮ್ಮ ವಾಚಕರಿಗೆ ಪರಿಚಯ ಮಾಡಿಕೊಡಿ' ಎಂದು ಇವರು ನನ್ನನ್ನು ಕೇಳಿದ್ದಾರೆ. ನೀವು ಯಾರೋ ನನಗೆ ತಿಳಿಯದು; ಸದರದಿಂದ ಮಾತನಾಡಿಸಿದರೆ ಭಯವಿಲ್ಲವಷ್ಟೆ! ಈ ಕೆಲಸ ನನ್ನ ಪಾಲಿಗೆ ಬಂದದ್ದು ನನ್ನ ಪುಣ್ಯವೆಂದರೆ ನಿಮಗೆ ಅರ್ಥವಾಯಿತಷ್ಟೆ! ಮೊನ್ನೆ ಸಂಜೆ ಮನೆಗೆ ಬಂದವನೇ 'ಈ ಪುಸ್ತಕವೆಲ್ಲಿಂದ ಬಂತು' ಎಂದು....ಕೇಳಿದೆ. ನನ್ನ ಪರವಾಗಿ ಇವಳು ರುಜು ಕೊಟ್ಟು ಅದನ್ನು ತೆಗೆದುಕೊಂಡಿರುವುದಾಗಿ ಉತ್ತರೋತ್ತರ ಉತ್ತರ. ಇದು ದೈವ ಸಂಕಲ್ಪ; ಕೊಳವನ್ನು ಕಲಕದಿದ್ದರೆ ಹಕ್ಕಿಗಳಿಗೆ ಸಮಾಧಾನವಿಲ್ಲ, 'ನಮ್ಮಷ್ಟಕ್ಕಾವಾಗಿ ಇದ್ದದ್ರಲ್ಲಾಯಾಗಿ' ಇರೋಣವೆಂದೇ ಬಹುಜನರ ಬಯಕೆ; ಇರುವುದು ಕಷ್ಟ. ಆದರೆ, ಹೇಳಬಹುದಾದ್ದನ್ನೂ ಹೇಳದಿದ್ದರೆ ಸಾಹಿತ್ಯಕ್ಕೆ ನಷ್ಟ!

ಹಿರಿಯರ ಪರಿಚಯವನ್ನು ಹಿರಿಯರು ಮಾಡಬೇಕು; ಇದು ಒಳ್ಳೆಯ ಸಂಪ್ರದಾಯ. ನಾನು ಅದಕ್ಕೆ ಕೈಹಾಕುವುದಿಲ್ಲ. ಅವರ ಕೃತಿಗಳನ್ನು ಕುರಿತು ಆಡುವಾಗಲೂ ಮಾತಿನ ಕುದುರೆಗೆ ನೂರೆಂಟು ಲಗಾಮು ಇದ್ದರೇ ಕ್ಷೇಮ. ನಮ್ಮ ಸಾಹಿತ್ಯಕ್ಕೆ ಸ್ಥೈರ್ಯವನ್ನೂ ಸೌಂದರ್ಯವನ್ನೂ ತಂದವರ ವಿಷಯದಲ್ಲಿ ನಾವು ಗೌರವವನ್ನು ಸೂಚಿಸುವುದು ನಮಗೆ ಧರ್ಮವಾಗಿಯೇ ಇದೆ. ಈ ದಾರಿಯಲ್ಲಿ ನಡೆದು ಒಂದೆರಡು ಮಾತನ್ನು ಬಳಸಲು ಇಲ್ಲಿ ಪ್ರಯತ್ನ ನಡೆದಿದೆ.

'ಯಜಮಾನರ' ಕೃತಿರಚನೆ ಬಹುಕಾಲ ಅವರ ಮನಸ್ಸಿನಲ್ಲೇ ಇದ್ದು ಪುಷ್ಟಿಯಾಗಿ ಬೆಳೆದು, ಅವರು ನಿರೀಕ್ಷಿಸಿದ್ದ ಒಂದು ಶುಭಮುಹೂರ್ತದಲ್ಲಿ ಹಾಯಾಗಿ ಬೆಳಕಿಗೆ ಬರುವ ಭಾಗ್ಯವಿಶೇಷ. ಹೀಚುಪಾಚುಗಳಿಗೆ ಇಲ್ಲಿ ಸ್ಥಳವಿಲ್ಲ; ಆತುರಕ್ಕೆ ಅವಕಾಶವಿಲ್ಲ. ಇದೊಂದು ತೆಂಗಿನ ತೋಟ; ನಿಧಾನ

ವಾಗಿ ಫಲ ಬಿಡುತ್ತದೆ. ನಮ್ಮ ಸಾಹಿತ್ಯದಲ್ಲಿ ಇದರ ವ್ಯಕ್ತಿತ್ವ ಸ್ಪಷ್ಟವಾಗಿ ಮೂಡಿದೆ. ಅವರ ಶೈಲಿಯಲ್ಲಿ ಯಥೇಚ್ಛವಾಗಿ ಸಾರ್ಥಕವಾಗಿ ಸಂಸ್ಕೃತ ನುಗ್ಗಿಬಿಡುತ್ತದೆ; ನುಗ್ಗಿದರೂ ಕವಿತೆಯ ಕಟ್ಟಡ ಅಲಗಾಡುವುದಿಲ್ಲ. ಈ ಕಟ್ಟಡಗಳ ಮನೋದಾರ್ಢ್ಯವನ್ನು ತಿಳಿಯಬೇಕಾದರೆ ಸಂಸ್ಕೃತ ಮಾತ್ರ ಬಂದರೆ ಸಾಲದು. ಇಲ್ಲಿ ಯಾವುದೂ ನಿಮ್ಮನ್ನು ಗಾಳಿಯಂತೆ, ಪರಿಮಳ ದಂತೆ ಅರಸಿಬಂದು ಆದರಿಸುವುದಿಲ್ಲ; ಯಾವುದು ಸೌಂದರ್ಯವೋ ದೇವರೋ ಅದನ್ನು ಒಲಿಸಿಕೊಳ್ಳಬೇಕಾದರೆ, ನೀವು ಬೆಟ್ಟ ಹತ್ತಿ ನೆಟ್ಟಗೆ ನಿಂತು ಕತ್ತೆತ್ತಿ ನೋಡಬೇಕು. ಕುಳಿತಕಡೆ ಕುಪ್ಪಳಿಸದಿದ್ದರೆ, ಸಮುದ್ರವನ್ನು ದಾಟದಿದ್ದರೆ, ಮಾರುತಿಗೆ ಸೀತಾದರ್ಶನವಾಗುತ್ತಿರಲಿಲ್ಲ. ಕೈಗೆ ಬಂದಿರುವ ಈ ಸಂಗ್ರಹದಿಂದಲೇ ಕೆಲವು ಪದ್ಯಗಳನ್ನು ಕೊಡುತ್ತೇನೆ; ನೀವೇ ತೂಗಿ ಕೊಳ್ಳಿ.

ಜಯ ವಿಜಯ ಚೆನ್ನ ಕೇಶವ ।
ಜಯ ಲಲಿತ ಕಲಾವಿಲಾಸ ಚಕ್ರಾಧಿಪತೇ ।
ಜಯವಂ ಕರುಣಿಸು ನಿನ್ನೀ ।
ದಯಿತೆಯರಾಕೂತ ಸಂಜ್ಞಿತಂಗಳಿಗೆಂದುಂ ॥

ಪರವಸ್ತು ವಜ್ರದೊಂದು ।
ಸ್ಫುರಣಂ ಸೌಂದರ್ಯಮದರ ಕರಗಳ್ ನಾಂಗಳ್ ॥
ಅರಿತದನು ಸುಖಿಸಿರೆನ್ನುತೆ ।
ಧರೆಗೊರೆಯುವವೋಲು ಮೆರೆವರೀ ಮದನಿಕೆಯರ್ ॥

ಲಾವಣ್ಯಂ ಸುಳಿದಂದು, ಗೀತಹಸಿತಂಗಳ್ ತೀವಿದಂದು, ಪ್ರಿಯಾ- ।
ಹಾವೋದ್ಭಾವಗಳಾಡಿದಂದು, ಸುಮಗಂಧಂ ಬೀಸಿದಂದಾ ಸುಖಂ ॥
ಜೀವಾನಂದ ಸಮಸ್ತಮೂಲ ಚಿದನಂತಬ್ರಹ್ಮರಾಸಿಕ್ಯದೊಂ- ।
ದಾವಿರ್ಭಾವಮೆನುತ್ತೆ ಸಂತಸಿಸುವಂ ತತ್ತ್ವಜ್ಞನಾತ್ಮೈಕ್ಯದಿಂ ॥

ಸಾಂದ್ರಾಮೋದ ಪ್ರಭಾಕರ್ಷಣಗಳಿನೆಳೆದಿಟ್ಟಿಂದ್ರಿಯಗ್ರಾಮಮಂ ತತ್- ।
ಕೇಂದ್ರಾಧಿಷ್ಠಾನದೊಳ್ ಜೀವವ ಸುಖರಸ ತಲ್ಲೀನಮಂಗೆಯ್ದು, ವಾಂಛಾ- ॥

ಬಂಧಂ ವಾಂಛಾಕರಂ ವಾಂಛಕನಿವು ಕರಗಲ್, ಮೂರನೈಕ್ಯಂಗೊಳಿಪ್ಪಾ।
ಸೌಂದರ್ಯಾದ್ವೈತಯೋಗಂ ಜಯಿಸುಗೆ ಜಗದೊಳ್ ಕೇಶವಾಮ್ನಾಯ ರಾಗಂ ॥

ಕುಂದುವ ಕರಗುವ ನೊಂದುವೀ ಲೋಕದಿ।
ಎಂದೆಂದುಮುಳಿಯದ ಸತ್ಯವೊಂದಿಹುದು ॥
ಸೌಂದರ್ಯವದರ ಪ್ರಭಾವವೆಂದೆನ್ನುವ।
ಗಂಧರ್ವಾಪ್ಸರ ಕಲಾ ಸಂದೇಶಕೃತಿ ನೀನು ॥

ಹೀಗೆ ಆಯುವುದು ತಪ್ಪು; ನನ್ನ ಪಕ್ಷಪಾತಕ್ಕೆ ಇದು ರುಜುವಾತಾಗಿ ನಿಲ್ಲಬಹುದು. ಆದರೆ ನಾನು ಆಯುವುದು ಹೀಗೆ. ಈ ಆಯ್ಕೆಯಿಂದ ಕೃತಿಯ ಪರಿಚಯ ನಿಮಗಾದೀತೆಂದು ನನಗೆ ಭರವಸೆಯುಂಟು. ಈ ಕಾಲದಲ್ಲಿ ಹೀಗೆ ಬರೆಯುತ್ತಿರುವವರು ಇವರೊಬ್ಬರೇ. ಈ ಬರವಣಿಗೆಗೆ ಗುಲಾಬಿಯ ಕೋಮಲ ಗುಣವಿಲ್ಲ, ನಿಜ; ದೃಢವಾದ ಸೌಂದರ್ಯವಿದೆ. ಇದು ಕೋಗಿಲೆಯ ಇಂಪಲ್ಲ; ರಾಜಮಾರ್ಗದಲ್ಲಿ ನಡೆಯುತ್ತಿರುವ ಪಟ್ಟದಾನೆಯ ಪದಧ್ವನಿ. ಸೌಂದರ್ಯದ ಸೌಂದರ್ಯವಲ್ಲ; ಇದು ಸತ್ಯದ ಸೌಂದರ್ಯ. ಇಲ್ಲಿ ಕವಿತೆ ತನ್ನ ಗಡಿಯನ್ನು ಅನೇಕಕಡೆ ದಾಟಿ ಆತ್ಮವಿದ್ಯೆಯನ್ನು ಆಕ್ರಮಿಸುತ್ತಿದೆ. ಕವಿತೆಯನ್ನು ಬಿಡಿಸದೆ, ಗದ್ಯಕ್ಕೆ ತಿರುಗಿಸದೆ, ಕವಿತೆಯಾಗಿಯೇ ಗ್ರಹಿಸಿ ಅರ್ಥಕ್ಕಿಂತ ಹೆಚ್ಚಾಗಿ ರಸಾನುಭವಕ್ಕೇ ಮನಸ್ಸನ್ನು ಮಾರಿಬಿಡುವುದು ಸರಿಯಾದ ದಾರಿ. ಚಿಂತನೆಗೆ ಅವಕಾಶಕೊಟ್ಟು, ನಾವು ಸುಮ್ಮನಿದ್ದುಬಿಡಬೇಕು, ಎಂದು ಕಾಣುತ್ತದೆ.

ಇದು ಅನ್ತಃಪುರಗೀತೆ. ಪ್ರಾಚೀನಕಾಲದಲ್ಲಿ ಪ್ರತಿಯೊಬ್ಬ ರಾಜನ ಮನೆಯಲ್ಲೂ ಒಂದೊಂದು ಅನ್ತಃಪುರವಿತ್ತಂತೆ. ರಾಜನಿಗೆ ಪಟ್ಟದ ರಾಣಿಯೊಬ್ಬಳು; ಕೈಹಿಡಿದ ಕಿರಿಯ ರಾಣಿಯರು ಕೆಲವರು; ಜೊತೆಗೆ ವಿನೋದಕ್ಕಾಗಿ ಗೌರವಕ್ಕಾಗಿ ಅರಮನೆಗಾಗಿ ಬಹುಸಂಖ್ಯೆಯ ಕರ್ಚಿಹೆಂಗಸರು. 'ಈ ಹೆಣ್ಣಿನ ದಂಡಿಗೆ ಒಂದು ಮನೆ ಸಾಕಾಗಿತ್ತೆ, ಇಲ್ಲ, ಒಂದೂರೇ ಬೇಕಾಗಿತ್ತೆ' ಎಂದು ಕೇಳಿದರೆ ನನಗೆ ಉತ್ತರಕೊಡುವಷ್ಟು ಧೈರ್ಯವಿಲ್ಲ. ಅಂತೂ ಇದು ರಾಜರಲ್ಲೂ ಇತ್ತು; ರಾಕ್ಷಸರಲ್ಲೂ ಇತ್ತು. ಈ ವಿಷಯದಲ್ಲಿ ದೇವತೆಗಳು ರಾಕ್ಷಸರನ್ನೂ ಮೀರಿಸಿದ್ದರು. ನಮ್ಮ ಕಾಲಕ್ಕೆ ಅನ್ತಃಪುರ

ಮಂಗಳಮಾಯವಾಗಿದೆ; ಕಲೆಯಲ್ಲಿ, ಕವಿತೆಯಲ್ಲಿ ಉಳಿದಿದೆ.

ಅನ್ತಃಪುರ ಸೌಂದರ್ಯದ ಸೆರೆ; ಇಲ್ಲಿ ಬಂದಿರುವುದು ಬೇಲೂರಿನ ಶ್ರೀ ಚೆನ್ನಕೇಶವಸ್ವಾಮಿಯ ಅನ್ತಃಪುರ. ದೇವತಾಸನ್ನಿಧಿಯಲ್ಲಿ ಈ ಕಲ್ಪನೆಗೆ ಪವಿತ್ರತೆ ಬಂದಿದೆ; ಶೃಂಗಾರವೂ ಸ್ವಾಮಿಯ ಕೃಪಾಕಟಾಕ್ಷದಿಂದ ಆರಾಧನೆಗೆ ಅರ್ಹವಾಗಿದೆ. ವೈರಾಗ್ಯಕ್ಕೆ ಇದಕ್ಕಿಂತ ಹೆಚ್ಚಿನ ಪದವಿ ಇರಲಾರದು.

ಕನ್ನಡನಾಡಿನಲ್ಲಿ ಶಾಂತಿಸೌಭಾಗ್ಯಗಳು ತಾಂಡವವಾಡುತ್ತಿದ್ದ ಒಂದು ಪುಣ್ಯಕಾಲದಲ್ಲಿ 'ಕಲ್ಲರಳಿ ಗುಡಿಯಾಯ್ತು ; ಕಲೆಯ ಗೋಪುರವಾಯ್ತು.' ಆ ಸ್ವರ್ಣಯುಗದ ಶಿಲ್ಪಿವರೇಣ್ಯರು ನಿಜವಾಗಿ ವರಕವಿಗಳು. ಕಲ್ಲಿಗೆ ಬದಲು ಮಾತನ್ನು ಉಪಯೋಗಿಸಿದರು, ಅಷ್ಟೆ; ಕಡೆಗೆ ಆದದ್ದು ದಿವ್ಯವಾದ ಕವಿತೆ. ಅವರ ಕಲ್ಯಾಣಕೃತಿಗಳಿಗೆ ಕಾಲಪ್ರವಾಹದ ಅರಿವಾಗಲೀ, ಲೋಕ ವ್ಯವಹಾರದ ಭಯವಾಗಲೀ ಇರುವಂತೆ ತೋರುವುದಿಲ್ಲ. ಈ ಶಿಲಾಮೋಹಿನಿಯರು ಆಡುತ್ತಲೇ ಇದ್ದು, ಹೇಗೆ ಹೇಗೆ ಇದ್ದವರು ಹಾಗೆ ಹಾಗೆಯೇ ತಟಕ್ಕನೆ ಆಟವನ್ನು ನಿಲ್ಲಿಸಿಬಿಟ್ಟಂತೆ ಕಾಣುತ್ತದೆ. ಈ ಗೀತಾವಳಿಯ ತುಂಬ ಬಂದಿರುವ ಅಂದವಾದ ಚಿತ್ರಗಳನ್ನು ನೋಡಿ!—

ಒಬ್ಬಳು ತನ್ನ ಕೈಗನ್ನಡಿಯಲ್ಲಿ ನಗುಮೊಗವನ್ನು ನೋಡಿಕೊಳ್ಳುತ್ತಲೇ ಇದ್ದಾಳೆ; ಇನ್ನೊಬ್ಬಳು ಮುಂಗೈ ಅರಗಿಣಿಯೊಂದಿಗೆ ಮಾತಾಡುತ್ತಲೇ ಇದ್ದಾಳೆ; ಮತ್ತೊಬ್ಬಳ ಕೈಯಲ್ಲಿ ಓಕುಳಿಯ ಜೀರ್‌ಕೊಳವೆಯಿದೆ; ನಾಲ್ಕನೆಯವಳು ಸೆರಗನ್ನೆಳೆದ ಕಪಿಯ ಮೇಲೆ ಸಿಟ್ಟಾಗಿದ್ದಾಳೆ; ಐದನೆಯವಳು ಬೇಡಿತಿಯಾಗಿ ಬಿಲ್ಲು ಹಿಡಿದು ಬಾಣವನ್ನು ಹುಡುಕುತ್ತಿದ್ದಾಳೆ; ಆರನೆಯವಳು ಡಕ್ಕೆಯೆತ್ತಿ ಬಾಜಿಸುತ್ತಿದ್ದಾಳೆ; ಅವಳು ಯಾವಳೋ ಮುಂಗುರಳನ್ನು ತಿದ್ದಿದ್ದೂ ತಿದ್ದಿದ್ದೆ; ಇವಳನ್ನು ನೋಡಿ, ಚೇಳಿಗೆ ಹೆದರಿ ಚೀನಾಂಬರವನ್ನೆ ಕಳೆದುಕೊಂಡಿದ್ದಾಳೆ. ಇನ್ನೂ ನೋಡಿ! ಕುಣಿವ ಹೆಣ್ಣು, ಹಾಡುವ ಹೆಣ್ಣು, ಕೊಳಲೂದುವವಳು, ವೀಣೆ ಹಿಡಿದವಳು, ಗಂಡುವೇಷದ ಹುಡುಗಿ, ಕೊರವಂಜಿ, ಶಕುನಶಾರದೆ, ಗಾಂಧರ್ವದೇವಿ, ಭಾವದೇವಿ, ನೃತ್ಯಸರಸ್ವತಿ, ಪ್ರಣಯ ಕುಪಿತೆ, ಪ್ರಣಯವಂಚಿತೆ! ಇತ್ಯಾದಿ ಇತ್ಯಾದಿ. ಸಾವಿರ ಹೆಡೆಯ ಸೌಂದರ್ಯವಿದು; ಒಬ್ಬಳಂತೆ ಇನ್ನೊಬ್ಬ

ಳಿಲ್ಲ, ಮುಖ ಚಹರೆಯಲ್ಲಿ, ಉಡುಗೆಯಲ್ಲಿ, ತೊಡಿಗೆಯಲ್ಲಿ, ಭಾವಭಂಗಿಯಲ್ಲಿ. ಒಂದೇ ಸಮುದ್ರದ ಸಾವಿರಾರು ಅಲೆಗಳು; ಅಲೆ ಅಲೆ ಬೇರೆ ಬೇರೆ. ಬಡವರು ನಾವು; ಕಡೆದ ಕೈಗೆ ಏನು ಕೊಟ್ಟೇವು? ಅದೇ ಕಲ್ಪನೆಯ ಕೊಡುಗೈ! ತನ್ನನ್ನು ಸೂರೆಗೊಳ್ಳಲು ಇನ್ನೂ ಹವಣಿಸುತ್ತಲೇ ಇರುವ ಈ ಜಗನ್ಮೋಹಿನಿಯರನ್ನೆಲ್ಲ ಕಟ್ಟಿಕೊಂಡು ಆ ಮಹಾನುಭಾವ ಚೆನ್ನಕೇಶವ ತನ್ನ ಅನ್ತಃಪುರವನ್ನು ಸುಖವಾಗಿ ನಡಸಿಕೊಂಡು ಬರುತ್ತಿದ್ದಾನೆ. ಬೇಲೂರು ಯಾತ್ರಾಸ್ಥಳವಾಗಿದೆ.

ನಿಜವಾಗಿ ಇದು ಪ್ರತಿಭೆಯ ಅನ್ತಃಪುರ; ಭಗವಂತನಂತೆ ದುಡಿದಿರಬಹುದಾದ ಆ ಮಹಾಶಿಲ್ಪಿಯ ಮುಖದ ಧನ್ಯತೆಯ ಧವಳಗಿರಿ ಮಾತ್ರ ಲೋಕದ ಕಣ್ಣನ್ನು ಕೋರೈಸುತ್ತಿದೆ. ಇಂಥ ಮಹಾತ್ಮರು ಕೇವಲ ಕಲೆಗಾರರಷ್ಟೇ ಆಗಿರದೆ ತಮ್ಮ ಕಾಲದಲ್ಲಿ ಅತಿ ಸಮರ್ಥರೂ, ಧರ್ಮಾತ್ಮರೂ, ದಾನಶೀಲರೂ ಆಗಿದ್ದಿರಬೇಕು. ನಿತ್ಯಜೀವನದ ಸಮಸ್ಯೆಗಳನ್ನೆಲ್ಲ ಹಿಂದಕ್ಕೆ ತಳ್ಳಿ, ಕಲೆಯಲ್ಲಿ ಆನಂದವನ್ನು ಚಿತ್ರಿಸಿ ಹೋಗಿದ್ದಾರೆ; ತಮಗೆ ಸರಿತೋರಿದ ದಾರಿಯನ್ನು ಧೈರ್ಯವಾಗಿ ನಡೆದಿದ್ದಾರೆ. ಇಂಥ ಮಹಾಕಾರ್ಯಗಳಿಗೆ ಸಂಕಲ್ಪ, ಸಾಮರ್ಥ್ಯ, ಶ್ರದ್ಧೆ, ಸಂತತ ಸಂತೋಷ ಇವೂ ಇರಬೇಕು, ಇಷ್ಟರ ಮೇಲೆ ತಳಹದಿಯಿಂದ ತುದಿಯವರೆಗೆ ದೈವಭಕ್ತಿಯೂ ಇರಬೇಕು ಎಂದು ಕಾಣುತ್ತದೆ. ಬಹುಶಃ ಜಕ್ಕಣನ ನಂಬಿಕೆಯು ಇದೇ ಆಗಿತ್ತೇನೋ! ಆದ್ದರಿಂದಲೇ ಇರಬಹುದು ಆತ ತನ್ನ ಆನಂದದ ಮಂದಹಾಸವನ್ನು ಈ ಶಿಲಾಶಕುಂತಲೆಯರಲ್ಲಿ ಬಿಟ್ಟುಹೋಗಿದ್ದಾನೆ; ದೇವರನ್ನು ಕಟ್ಟಿ ದಿವ್ಯತೆಗೆ ಕೈಮುಗಿದಿದ್ದಾನೆ. ಆ ಎಲ್ಲ ಸ್ಮರಣೆಯ ಕೈಪಿಡಿಯಂತಿದೆ ಈ ಅನ್ತಃಪುರ ಗೀತೆ.

ಇಲ್ಲಿ ವಜ್ರದಂಥ ಪದ್ಯಗಳಿವೆ; ಅವಕ್ಕಿಂತ ಮೃದುವಾದ ಗೀತೆಗಳಿವೆ; ತುಂಬ ಸುಂದರವಾದ ಚಿತ್ರಗಳಿವೆ. ಕಣ್ಣಿಗೆ ಹಬ್ಬ; ಬೇಲಿಯನ್ನು ದಾಟಿದರೆ ಕಬ್ಬಿನ ಗದ್ದೆ.

೩

ಇಲ್ಲಿ ಬರುವ ಗೀತೆಗಳ ವಿಚಾರದಲ್ಲಿ ಒಂದು ಮಾತನ್ನು ಹೇಳದಿದ್ದರೆ—ಯಾರಿಗೂ ತೊಂದರೆಯಾಗುತ್ತಿರಲಿಲ್ಲ—ಪರಿಚಯ ಸಂಪೂರ್ಣ

ವಾಗುವುದಿಲ್ಲ. ಸಂಗೀತದ ವಿಚಾರದಲ್ಲಿ ನನಗೆ ಅಧಿಕಾರವಿಲ್ಲ. ಅಲ್ಲದೆ ಇಲ್ಲಿನ ಗೀತೆಗಳನ್ನು ಹಾಡಲು ಬಾರದೆ ಹಾಡಿದ್ದನ್ನು ಕೇಳದೆ ಆ ವಿಷಯಕ್ಕೆ ಬಾಯಿಹಾಕುವುದು ತಪ್ಪು. ಇಲ್ಲಿ ಸುಲಭವಾದ ಗೀತೆಗಳೂ ಇವೆ; ಕವಿತೆಗೂ ಗೀತೆಗೂ ಇರುವ ಅಂತರದಲ್ಲಿ ಕೆಲವು ಹಿರಿಯ ಹೂಗಳು ಹೇಗೆ ಅರಳಿವೆ!

ಹೃದಯಗಹ್ವರದ ಮೂಲೆಗಳ ಮೌನದೊಳೆಲ್ಲೋ ।
ನಿದ್ರಿಪ ಭಾವಗಳಾ ॥
ವದನೋಕ್ತಿಗೆಟುಕದ ಮೂಕಮಾನಸ ಮೇಘ- ।
ವಲನವಿಲಾಸಗಳಾ ॥
ಗಾನಾಭಿನಯವಾದ್ಯಧ್ವಾನದೆ ಚಿತ್ರಿಸಿ ।
ಮ್ಲಾನಜೀವವನು ಸಂತ್ರಾಣಿಪರಿವರಯ್ಯ ॥

ಇದು ಮೌನದ ಮುದ್ರೆಯುಂಗುರ.

ಬ್ರಹ್ಮಾಂಡ ವಿಭ್ರಮ ಮರ್ಮವಿದೇನಮ್ಮ
ಚಿನ್ಮುದ್ರಿಕಾ ಧಾರಿಣೀ ।
ನಿರ್ಮಲಸತ್ತ್ವಕೆ ಭೌಮಾಂಗವೇಕಮ್ಮ
ಸಂಮೋಹನಾ ಕಾರಿಣೀ ।
ಕೂರ್ಮೆಯ ಹೂವೊಳು ಕೂರ್ಮೊನೆ ಮುಳ್ಳೇಕೆ
ಸೌಮ್ಯಕೇಶವ ರಾಜ್ಯ ದೈವಜ್ಞಮೌಳಿಕೆ ॥

ಇಲ್ಲಿ ಮೇಲೆ ಬಿದ್ದುಬರುವ 'ಏನು, ಏಕೆ, ಏಕೆ' ಎನ್ನುವ ಪ್ರಶ್ನೆಗಳು, ನನಗೆ ನಿಮಗೆ ಮಾತ್ರ ಪ್ರಶ್ನೆಗಳಲ್ಲ, ಸ್ನೇಹಿತರೇ, ಹಾಡುವವನ ಕೊರಳಿಗೂ ಇವು ಬಿಗಿಯಾದ ಪ್ರಶ್ನೆಗಳೇ. ಇಂಥ ಗೀತೆಗಳನ್ನು 'ಹೆಚ್ಚಾಗಿ ಸಂಗೀತ ಪರಿಶ್ರಮವಿಲ್ಲದವರು' ಹಾಡಿ ಬಚಾವಾಗುವುದು ಕಷ್ಟ ಎಂದೇ ನನ್ನ ಎಣಿಕೆ. ನನ್ನ ಎಣಿಕೆಯನ್ನು ತಪ್ಪಾಗಿಸುವಂಥವರೂ ಇದ್ದಾರು; ಅವರಿಗೆ ನನ್ನ ನಮಸ್ಕಾರ.

೪

ನಮಸ್ಕಾರ ಎನ್ನುವ ಮಾತನ್ನು ದುಡುಕಿ ಬಳಸಿದ್ದಾಯಿತು ಸ್ನೇಹಿತರೆ; ನೀವು ಈ ಪರಿಚಯ ಅಲ್ಲಿಗಾದರೂ ಮುಗಿದೀತೆಂದು ನಂಬಿರಬಹುದು. ನಿಮ್ಮ ನಿರೀಕ್ಷೆಗೆ ನಿಂತುಹೋಗುವ ಯಂತ್ರವಲ್ಲ ನಾನು! ನೀವು ನನ

ಕಣ್ಣೆದುರಿಗೂ ಇಲ್ಲ: ಯಾರೆಂಬುದೂ ತಿಳಿಯದು. 'ಪರಿಚಯ' ಬೆಳೆದು ಉಪನ್ಯಾಸವಾಯಿತೆಂದು ಬೇಸರವೆ ? ಮತ್ತೆ ಹಕ್ಕಿಗಳು ಬಂದು ಕೊಳದ ನೀರನ್ನು ಕಲಕಿದ ಹಾಗಾಯಿತೆ? ಇಷ್ಟರಲ್ಲೇ ನಿಮಗೆ ಅರ್ಥವಾಗಿರಬಹುದು ; ಈ ಪುಸ್ತಕದ ಪರಿಚಯವಾಗುವುದು ಅದರ ವ್ಯಾಸಂಗದಿಂದ. ಅಷ್ಟಕ್ಕೆ ಇದು ಮಾರ್ಗದರ್ಶಿ; ವಿಮರ್ಶೆಗೆ ವ್ಯಾಖ್ಯಾನಕ್ಕೆ ಇಲ್ಲಿ ಅವಕಾಶವಿಲ್ಲ. ಹೊಗಳಿಕೆಯೂ ಅನಗತ್ಯ. ಈ ಪುಸ್ತಕದ ಸೌಂದರ್ಯವೇ ಅಚ್ಚುಮಾಡುವುದೂ ಮಾಡಿಸುವುದೂ ಒಂದು ಕಲೆ ಎಂದು ಸಾರುತ್ತಿದೆ. ಯಾವ ಮನಸ್ಸಿನ ನೀಲಸಮುದ್ರದಲ್ಲಿ ಈ ಮುತ್ತಿನ ಮಂಟಪ ಮೂಡಿತೋ ಅದಕ್ಕೆ ನಮ್ಮ ಹೊಗಳಿಕೆಯ ಹಂಗು ಬೇಡವಾಗಿದೆ. ಅದು ತನ್ನನ್ನು ಮುಂದೆ ತಳ್ಳಿಕೊಳ್ಳದೆ 'ಎಷ್ಟು ಓದಿದರೂ ಸಮನಾಗದು ಹೋಗಿ ನೋಡಬೇಕು—ತೆರೆದ ಕಣ್ಣಿಂದ ನೋಡಬೇಕು' ಎಂದು ಗುಡಿಯ ಕಡೆಗೆ ಕೈತೋರಿಸುತ್ತಿರುವುದು ಅರ್ಥಗರ್ಭಿತವಾಗಿದೆ. ಗುಡಿಯನ್ನು ನೋಡಬೇಕು ಸ್ನೇಹಿತರೆ, ಈ ಕೃತಿಯನ್ನು ತೆರೆದ ಕಣ್ಣಿಂದಲೇ ನೋಡಬೇಕು:

ಚೆನ್ನಕೇಶವಮೂರ್ತಿ—ಶಿಲ್ಪ ಚಿತ್ರಸ್ಫೂರ್ತಿ ।
ವಿಷ್ಣುವರ್ಧನಕೀರ್ತಿ—ಕವಿತಾಗ್ರವರ್ತಿ ॥
ಕರ್ಣಾಟಜನಕಾಂತಿ—ಭವತಾಪ ವಿಶ್ರಾಂತಿ ।
ಸೌಂದರ್ಯ ಸಿದ್ಧಾಂತಿ—ಜಯತು, ಜಯತು ॥

ರೂಪದರ್ಶಿ

ಅನಂತಕಾಲದ ಕಾದಂಬರಿಯ ಪುಟಗಳನ್ನು ಮಗುಚಿಹಾಕಿ:— ಸುಮಾರು ೫೦೦ ವರುಷಗಳ ಹಿಂದೆ ಇಟಲಿ ದೇಶದ ಸುಂದರ ಫ್ಲಾರೆನ್ಸ್ ನಗರದಲ್ಲಿ ಈ ಕಥೆಯ ಕಲ್ಪನೆ ಅರಳುತ್ತದೆ. ಪ್ರಖ್ಯಾತ ಚಿತ್ರಗಾರನೂ ಸುಪ್ರಸಿದ್ಧ ಶಿಲ್ಪಿಯೂ ಆದ **ಮೈಕೇಲ್ ಎಂಜಲೀಸನ** ವ್ಯಕ್ತಿಪರಿಚಯ ವಾಗುತ್ತದೆ. ಫ್ಲಾರೆನ್ಸಿನ ಕ್ರಿಸ್ತ ದೇವಾಲಯದ ಮೇಲುಚಾವಣಿಯಲ್ಲಿ, ಕ್ರಿಸ್ತನ ಜೀವನ ಚರಿತ್ರೆ ಬಣ್ಣಗಳಿಂದ ಮನೋಹರವಾಗಿ ಚಿತ್ರಿತವಾಗಿದೆ; ಅಲ್ಲಿನ ಪರಮ ಸುಂದರ ಚಿತ್ರಗಳ ಹೃದಯದಲ್ಲಿ ಮೈಕೇಲ್ ಎಂಜಲೀಸನ ಕೀರ್ತಿ ಚಿರಸ್ಥಾಯಿಯಾಗಿದೆ. ಅವನು ಬರೆದಿರುವ ಚಿತ್ರಗಳಲ್ಲೇ ಕಾಲದಲ್ಲೂ ಕ್ರಮದಲ್ಲೂ ಒಂದು ವಿಚ್ಛಿತ್ತಿ ಇದೆಯಂತೆ! **ಬಾಲಕ್ರಿಸ್ತನ** ಚಿತ್ರ ಒಂದು ಕಡೆ ಒಂದು ಕಾಲಕ್ಕೆ ಒಂದು ಕ್ರಮಕ್ಕೆ ಹೆಗ್ಗುರುತು; ಪಾಪಿ **ಜುದಾಸನ** ಚಿತ್ರ ಇನ್ನೊಂದು ಕಡೆ, ಇನ್ನೊಂದು ಕಾಲಕ್ಕೆ ಇನ್ನೊಂದು ಕ್ರಮಕ್ಕೆ ಹೆಗ್ಗುರುತು. ಈ ವಿಚ್ಛಿತ್ತಿಗೆ ದೊಡ್ಡ ಕಾರಣವಿದೆಯಂತೆ, ಆ ಕಾರಣವೇ ಈ ಕಥೆಯ ಸೇತುವೆಯಾಗಿದೆ. ಕಥೆ ಮೂರು ಕವಲಾಗಿ ಒಡೆದುಮೂಡಿ ಕಡೆಗೆ ಕಂಬನಿಯಲ್ಲಿ ಒಂದಾಗಿ ಹೋಗಿದೆ.

ಮೊದಲು, ಬಾಲಕ್ರಿಸ್ತನ ಚಿತ್ರಣ, ಇದಕ್ಕೆ ಮಾದರಿ ನವಮನ್ಮಥ ಎರ್ನೆಸ್ಟೊ

ಕಡೆಗೆ, ಪಾಪಿ ಜುದಾಸನ ಚಿತ್ರಣ, ಇದಕ್ಕೆ ಮಾದರಿ 'ಗರಿಬಾಲ್ಡಿ'ಯಾದ ಎರ್ನೆಸ್ಟೊ

ಮಗು ಎರ್ನೆಸ್ಟೊ ಬೆಳೆದು ಮನ್ಮಥನಾಗಿ,ಲೋಕದ ಕರುಣೆಯ, ಕಾರ್ಪಣ್ಯದ ಕಡುಬೇಗೆಯಲ್ಲಿ ಮುಖಮುರಿದುಕೊಂಡು ಸೈತಾನಪ್ರಿಯನಾಗಿ ಕುಡುಕ ನಾಗಿ ಗರಿಬಾಲ್ಡಿಯಾಗುತ್ತಾನೆ. ತನ್ನ ಕಥೆಯನ್ನು ಮೈಕೇಲ್ ಎಂಜಲೀಸನಿಗೆ ತಾನೆ ಹೇಳಿಕೊಳ್ಳುತ್ತಾನೆ. ಎಲ್ಲರ ಕೈಗೂ ಮೀರಿದ ಪರಮೋತ್ಕಟದ ಸಮಯದಲ್ಲಿ ಹೃದಯ ವಿದ್ರಾವಕವಾಗಿ ಬಾಳನ್ನು ಮುಗಿಸಿಕೊಂಡು ಗುಡಿಯ ಎತ್ತರದಿಂದ ನೆಲಕ್ಕೆ ಬಿದ್ದು ಹುಡಿಯಾಗುತ್ತಾನೆ. ಮೈಕೇಲ್ ಎಂಜಲೀಸ್ ಇದೆಲ್ಲವನ್ನೂ ನೋಡಿ ಕಣ್ಣಲ್ಲಿ ದುಃಖವನ್ನು ತುಂಬಿಕೊಳ್ಳುತ್ತಾನೆ. ಯಾವ ಮಗು ತನ್ನ ಬಾಲಕ್ರಿಸ್ತನಿಗೆ ರೂಪದರ್ಶಿಯಾಗಿತ್ತೊ, ಅದೇ ತನಗೆ ತಿಳಿಯ

ದಂತೆ ಬೆಳೆದು ತನ್ನ ಜುದಾಸನಿಗೂ ಮಾದರಿಯಾಯಿತು ಎನ್ನುವುದರ ಅರಿವು, ತನ್ನ ರೂಪದರ್ಶಿಯ ಅವಸಾನ ಸಮಯದಲ್ಲಿ ಮೈಕೇಲನಿಗೆ ತಿಳಿಯುತ್ತದೆ. ಅಷ್ಟು ಹೊತ್ತಿಗೆ ಜುದಾಸನ ಚಿತ್ರಣವೂ ಮುಗಿದಿರುತ್ತದೆ. ಹೀಗೆ ಕಲೆಯ ಗುರಿ ಸಂಪೂರ್ಣವಾಗುತ್ತದೆ; ಆದರೆ ನೋವೂ ಕಂಬನಿಯೂ ಕಲೆಯ ಸುಂದರ ಸ್ಮಾರಕವಾಗಿ ನಿಲ್ಲುತ್ತವೆ. ಸ್ವಲ್ಪದರಲ್ಲಿ ಹೇಳಿದರೆ, ಕಪ್ಪೆ ಚಿಪ್ಪಿನಲ್ಲಿ ತುಂಬಿದರೆ, ಈ ಕಥೆ ಇಷ್ಟೇ. ಶ್ರೀ ಅಯ್ಯರಿಗೆ ತಾನೆ ಅಮೆರಿಕನ್ ಮಾಸಪತ್ರಿಕೆಯಲ್ಲಿ ಸಿಕ್ಕಿದ್ದು ಇಷ್ಟೂ ಅಲ್ಲ, ಕೇವಲ ಒಂದೇ ಪುಟದ ಕಥೆ. ಅದು ಈ ಕೃತಿಯನ್ನು ೩೪೩ ಪುಟದ ತನಕ ಓಡಿಸುವಂತಾದ್ದು — ಪ್ರತಿಭೆಯ ಸಾಹಸದಿಂದ, ಅದಕ್ಕೆ ಅನುಗುಣವಾಗಿ ಒದಗಿದ ಜೀವನಾನುಭವದಿಂದ. ಆ ಒಂದು ಚೂರು ಮೂಲ–ಗಣಿಯಲ್ಲಿ ಲೀನಾ ಲಿಸ್ಸಾ ರತ್ನಗಳಿಲ್ಲ; ಟಾಯಿಟ್‌ನಂಥ ಹಾವಿಲ್ಲ; ಗಿಯೋವನಿಯಂಥ ಹೊನ್ನಿನ ಜಿಗಣೆಯಿಲ್ಲ; ಕರಡಿಯ ಬೇಟೆಯಿಲ್ಲ; ತೊರೆಯ ನೀರಿನ ಜಗಳವಿಲ್ಲ! ಬಡಮೈ ಹುಡುಗರನ್ನು ಜಟ್ಟಿಗಳನ್ನಾಗಿ ಮಾಡುವ ಕಸಬು ಶ್ರೀ ಅಯ್ಯರವರದು; ಅವರ ಶ್ರೀಮಂತ ಪ್ರತಿಭೆಯ ಸಂಜೆಮುತ್ತಿನಿಂದ ಕಥೆ ಸರ್ವಾಂಗಸುಂದರವಾಗಿದೆ. ಶೈಲಿಯೂ ಹದವಾಗಿದೆ; ಮಾತು ಒಗ್ಗಿದೆ, ಒಂದೆರಡು ಕಡೆ ಮಾತು ಅತಿಯಾದರೂ ಅಷ್ಟು ಗೋಚರವಾಗುವುದಿಲ್ಲ. ಇಂಥ ಕಾದಂಬರಿ ಕನ್ನಡದಲ್ಲಿ ಅಪೂರ್ವ.

ಮೈಕೇಲ್ ಎಂಜಲೀಸನ ಪಾತ್ರರಚನೆ ವಿವರ ವಿವರವಾಗಿ ಸಂಪೂರ್ಣವೆಂಬಂತೆ ನಡೆದಿದೆ. ಕಲೆಗಾರನಾದವನು ಸುಂದರ ಕೃತಿಗಳನ್ನೆ ರಚಿಸುತ್ತಿದ್ದರೂ ಅವನು ಉದ್ದಕ್ಕೂ ಕಾಣುವುದು ನೋವಿನ ಅನಂತ ಅವತಾರಗಳನ್ನೆ, ಕೇಳುವುದು ಹಿಂಸೆಯ ಸುದ್ದಿಗಳನ್ನೆ. ಕಥಾವಿಗ್ರಹದ ಕೆತ್ತನೆಗಾಗಿ ಬೀಳುವ ಸುತ್ತಿಗೆಯ ಪೆಟ್ಟುಗಳೆಲ್ಲ ಇವನ ಹೃದಯದಲ್ಲಿ ಹೊಳಲುಗೊಡುತ್ತವೆ. 'ವಾಟಿಕನ್ನಿ'ನ ಚಿತ್ರಗಳನ್ನು ಮುಗಿಸುವುದಕ್ಕೆ ಮುಂದಾಗಿಯೆ, ಮೈಕೇಲ್ ಫ್ಲಾರೆನ್ಸ್ ದೇವಾಲಯದಲ್ಲಿ ಎರ್ನೆಸ್ಟೋವನ್ನು ಮಾದರಿಯಾಗಿಟ್ಟುಕೊಂಡು ಬಾಲಕ್ರಿಸ್ತನನ್ನು ಎದ್ದುಬರುವಂತೆ ಚಿತ್ರಿಸಿದ್ದನು. ಆ ಹೊತ್ತಿಗೇ ಮೈಕೇಲನಿಗೆ ಇಳಿವಯಸ್ಸು. ಪೋಪರ ಪ್ರೀತಿ, ಕ್ರಿಸ್ತಭಕ್ತಿ, ಇವು ಈ ಮುಪ್ಪಿನ ಮೇಲೆ ಯೌವನದ ರಂಗನ್ನು ಹಾಯಿಸಿದ್ದುವು. ಅವನಿಗೆ ಫ್ಲಾರೆನ್ಸ್ ದೇವಾಲಯದ ಕೆಲಸವನ್ನು ಕೈಕೊಳ್ಳಲು ದೇಹ-ಶಕ್ತಿಯಿರಲಿಲ್ಲ. ಆದರೂ

ದಿವ್ಯ ಕರ್ತವ್ಯವೆಂದು ಅದನ್ನು ಒಪ್ಪಿಕೊಳ್ಳುತ್ತಾನೆ. ಪೋಪರ ಪೂರ್ಣಾನುಗ್ರಹಕ್ಕೆ ಪಾತ್ರನಾಗಿ ಅನಂತರ ಯೇಸುವಿನ ಲೀಲಾಭೂಮಿಯಲ್ಲಿ ಯಾತ್ರೆ ಮಾಡಿ, ಫ್ಲಾರೆನ್ಸಿಗೆ ತೆರಳುವ ಮುನ್ನ ಮೈಕೇಲ್ ತನ್ನ ಪ್ರಾಣಸ್ನೇಹಿತ ಬೆನೆಟ್ಟೋವಿನ ಮಗಳು ಲೀನಾ ಸಾಧ್ವಿಯನ್ನು ನೋಡಲು ಕರಾರಾ ನಗರಕ್ಕೆ ಬರುತ್ತಾನೆ. ಆ ಸಂಸಾರ ಸರೋವರದ ತೀರದಲ್ಲಿ ಎರಡು ದಿನ ಕಳೆಯು ವಷ್ಟರಲ್ಲಿ ಮೈಕೇಲ್ ಕಂಡ ನೋಟವೋ ಕೇಳಿದ ಸುದ್ದಿಯೋ ಈ ಕಾದಂಬರಿಯ ಹೃದಯದ ಅಮೃತ ಕಲಶದಂತಿದೆ. ೮೫ ರಿಂದ ೧೧೩ರ ವರೆಗಿನ ೨೮ ಪುಟಗಳೇ ಒಂದು ಉತ್ಕೃಷ್ಟವಾದ ಭಾವಗೀತೆಯಾಗಿವೆ. ಲೀನಾ ಸಾಧ್ವಿ; ಅವಳ ಗಂಡ ಟಾಯಿಟ್ ರಾವಣನಂತೆ. ಆಕೆಯ ಕಷ್ಟ ಪರಂಪರೆಗೆಲ್ಲ ಆಕೆಯ ಗಂಡನೇ ಕಾರಣ. (ಬಾಲಕ್ರಿಸ್ತನಿಗೆ ರೂಪದರ್ಶಿ ಯಾದ ಎರ್ನೆಸ್ಟೊ ಜುದಾಸನ-ಚಿತ್ರಣಕ್ಕೆ ರೂಪದರ್ಶಿಯಾದುದೂ ಈ ಟಾಯಿಟ್ಟನ ಕ್ರೌರ್ಯದಿಂದಲೇ). ತಂದೆಯ ಪರಮ ಸ್ನೇಹಿತನಾದ ಮೈಕೇಲ ನಲ್ಲಿ ಲೀನಾ ತನ್ನ ಪಾಡನ್ನು ತೋಡಿಕೊಂಡು, ಆದರೂ ತನ್ನ ಕರ್ತವ್ಯವನ್ನು ಕೈಬಿಡದೆ ನಿರ್ವಹಿಸುತ್ತಾಳೆ. ೧೦೪, ೧೦೫ನೆ ಪುಟಗಳನ್ನು ನಾನು ಓದುತ್ತಾ ನೊಂದಿದ್ದೇನೆ. ಲೀನಾ ಎಂಥ ಹೆಣ್ಣು! ನಮ್ಮ ಸೀತಾ, ಚಂದ್ರಮತಿ ಇವರ ಗೆಳತಿ. ಅವಳದು ಸೂಕ್ಷ್ಮ ಆರೋಗ್ಯ; ವಿಷಯ ಸುಖದ ಕಡೆಗೆ ಅವಳಿಗೆ ಆಸಕ್ತಿ ಇಲ್ಲ. ಇವಕ್ಕೆ ವಿರುದ್ಧವಾಗಿದೆ ಟಾಯಿಟ್ಟನ ಜೀವನ ಮಾರ್ಗ; ಇವನಿಗೆ ಭೋಗಾಪೇಕ್ಷೆ ಬಹಳ: ಆ ಸಮಯಗಳಲ್ಲಿ ಇವನು ಒಂದು ಕೀಳುಮೃಗದಂತೆ ಆಗಿ, ಮಾನವತೆಯನ್ನೆ ಮರೆತು, ಹೆಂಡತಿಯನ್ನು ಕಾಡಿ ಹಿಂಡುತ್ತಾನೆ. ಹೀಗೆ ಇವಳಿಗೆ ಪ್ರಾಯದಲ್ಲಿ ಮುಪ್ಪು ಮೂಡಿದೆ; ಜೀವನ ಮುಳ್ಳುದಾರಿಯಾಗಿದೆ. ಆದರೆ ತನ್ನ ಮಗುವಿಗಾಗಿ ಇರಬೇಕು; ಗಂಡನನ್ನು ತಿದ್ದಿ ಬಾಳಬೇಕು. ಇದು ಅವಳ ಆಸೆ. ಗಂಡನೇನೋ ಸಿರಿ ವಂತನೇ; ಹೆಂಡತಿಯನ್ನು ಚೆನ್ನಾಗಿಟ್ಟುಕೊಂಡಿರಬೇಕೆಂದೇ ಅವನು ದುಡಿಯುತ್ತಾನೆ; ಹೆಂಡತಿಯನ್ನು ಕುರಿತು 'ಒಳ್ಳೆಯ ಆಹಾರವನ್ನು ತೆಗೆದುಕೋ. ಒಳ್ಳೆಯ ಹವೆಯಲ್ಲಿ ತಿರುಗಾಡು' ಎನ್ನುತ್ತಾನೆ. ಈ ಉಪ ದೇಶದ ಹಿಂದೆ ಸ್ವಾರ್ಥ ಹಬ್ಬಿಕೊಂಡಿದೆ; ಕುರಿಯನ್ನು ಕೊಬ್ಬಿಸುವುದರಿಂದ ಕುರುಬನಿಗೆ ಲಾಭ ಎಂಬಂತೆ. ಇದನ್ನು ಲೀನಾ ಅರಿತವಳೇ. 'ಅಯ್ಯೋ!

ನಾನೇನು ಮಾಡಲಿ ?' ಎಂದು ಅಜ್ಜ ಮೈಕೇಲನೆದುರಿಗೆ ಅವಳು ಕಂಬನಿ ತುಂಬುವಾಗ ಅವಳು ಇನ್ನೂ ಏತಕ್ಕಾಗಿ ಉಳಿದಿದ್ದಾಳೆ ಎನ್ನುವುದು ಅರ್ಥ ವಾಗುತ್ತದೆ. ಟಾಯಿಟ್ಟನ ರಕ್ಕಸತನ ಅಲ್ಲಿಗೇ ನಿಲ್ಲದೆ, ಅವನು ಬೀದಿಯ ಸೂಳೆ ಯೊಬ್ಬಳನ್ನು ಕಟ್ಟಕೊಂಡು ಮೆರೆಯುತ್ತಾನೆ; ಅವಳನ್ನು ತನ್ನ ಮನೆ ಯಲ್ಲಿಯೇ ತಂದಿಟ್ಟುಕೊಳ್ಳುವುದಕ್ಕಾಗಿ ಲೀನಾದೇವಿಯ ಸಮ್ಮತಿಯನ್ನು ಬಯಸುತ್ತಾನೆ. ಅವಳು ಪ್ರತಿಭಟಿಸುತ್ತಾಳೆ. ಮನಸ್ಸಿನಲ್ಲಿ ಆದ ಗಾಯ, ಮೈಮೇಲೆ ಆದ ಗಾಯ ಇವೆಲ್ಲವನ್ನೂ ತಾಳಿಕೊಂಡು ಮಾನವಾಗಿ ಮನೆ ಯೊಳಗೇ ಇದ್ದ ಹೆಣ್ಣನ್ನು ಬೀದಿಯ ಬಾಯಿಗೆ ಎಳೆಯುವ ತನಕ ಹೋಗು ತ್ತದೆ ಟಾಯಿಟ್ಟನ ಕಾಮಪೂರಿತವಾದ ದುರ್ಬುದ್ಧಿ. ಈ ಕಪ್ಪು ಮೋಡದ ಹೃದಯದಲ್ಲಿ ಅರುಂಧತಿಯಂತೆ ಬೆಳಗುತ್ತಿದ್ದಾಳೆ ಲೀನಾ. ಈ ದುಃಖ ಸಂಗತಿಯನ್ನು ಹತ್ತಿರದಲ್ಲಿ ಅನುಭವಿಸಿದಂತೆ ಕಂಡು ಮೈಕೇಲನ ಬಾಳಿಗೆ ಯಾವ ಸಂಸ್ಕಾರವಾಗ ಬೇಕಿತ್ತೋ ನಾನರಿಯೆ ! ಇಲ್ಲಿಂದ ಮುಂದೆ ಮೈಕೇಲನು ಫ್ಲಾರೆನ್ಸಿನ ದಾರಿ ಹಿಡಿಯುತ್ತಾನೆ; ಜುದಾಸ-ರೂಪದರ್ಶಿ ಗಾಗಿ ಲೋಕದ ಮೂಲೆ ಮೂಲೆಗಳನ್ನು ಹುಡುಕುತ್ತಾನೆ; ದಾರಿಯಲ್ಲಿ "ಅಲಿಮಾರಿ" ಹಳ್ಳಿಯಲ್ಲಿ 'ಗರಿಬಾಲ್ಡಿ' ಸಿಕ್ಕುತ್ತಾನೆ, ಹೆಂಡದಂಗಡಿಯ ಸೂರಿನ ಕೆಳಗೆ. ಅವನನ್ನು ತೃಪ್ತಿಪಡಿಸಿ, ಲಂಚ ಕೊಟ್ಟು ಫ್ಲಾರೆನ್ಸಿಗೆ ಮೈಕೇಲ್ ಕರೆತರುತ್ತಾನೆ, ಗಂಗೆಯನ್ನು ಭಗೀರಥ ತಂದಂತೆ. ಊರಿಗೆ ಬಂದರೂ ನೀರಿಗೆ ಬರಲಿಲ್ಲ ಎಂಬಂತೆ ಗರಿಬಾಲ್ಡಿ ದೇವಾಲಯದೊಳಗೆ ಬರುವುದಿಲ್ಲ ಎನ್ನುತ್ತಾನೆ: ಮತ್ತೆ ಹೊನ್ನಿನ ಲಂಚವನ್ನು ಕೊಟ್ಟು ಮುಂದಿನ ಕೆಲಸ ಮಾಡಬೇಕಾಗುತ್ತದೆ. ಅಂತೂ 'ಗರಿಬಾಲ್ಡಿ'ಯನ್ನು ಅಟ್ಟಣೆಯ ಮೇಲೆ ಕೂರಿಸಿಕೊಂಡು ಮೈಕೇಲ್ ತನ್ನ ನಡುಗುವ ಕೈಯಲ್ಲಿ ಕುಂಚ ಹಿಡಿದು ಜುದಾಸನ ಚಿತ್ರವನ್ನು ಪೂರ್ಣಗೊಳಿಸುತ್ತಾನೆ. ಅಟ್ಟಣೆಯ ಮೇಲಿನ 'ಗರಿಬಾಲ್ಡಿ' ಗೋಡೆಯ ಮೇಲಿನ ಬಾಲಕ್ರಿಸ್ತನ ಚಿತ್ರವನ್ನು ನೋಡಿ ತನ್ನ ಹಿಂದಿನ ಎರ್ನೆಸ್ಟೊ ಜೀವನ ಕಣ್ಣಿಗೆ ಬಂದು, ಸ್ಮೃತಿಪಲ್ಲಟ ವಾಗಿ, ಮೈಕೇಲನನ್ನು ಹಿಂದೆ ಎರ್ನೆಸ್ಟೊ ಕರೆದಂತೆ, " ಚಿಕ್ಕಪ್ಪಾ " ಎಂದು ಕರೆದು, ತನ್ನ ಕಥೆಯನ್ನು ಹೇಳುತ್ತಾನೆ. ಈ ಸಂಗತಿಯನ್ನು ಕೇಳಿ ಯಾವ ಸಂಸ್ಕಾರವಾಗಬೇಕಿತ್ತೋ ಧನ್ಯ ಮೈಕೇಲನಿಗೆ ನಾನು ಕಾಣೆ! ಈ ದುಃಖದ

ಕಥೆ ಮುಗಿಯುವ ಹೊತ್ತಿಗೆ, ದೇವಾಲಯದ ಎತ್ತರದ ಘಂಟೆ ಗುಡುಗುತ್ತಿರುವಾಗ ವಿಕೃತ ಎರ್ನೆಸ್ಟೊ ಮತ್ತೆ ಗರಿಬಾಲ್ಡಿಯಾಗಿ ಘಟ್ಟಿಯಾಗಿ ಚೀರಿ, ಮೈಕೇಲನನ್ನು ಕೊಲ್ಲಲು ಮಾಡಿದ ಪ್ರಯತ್ನ ಸಾರ್ಥಕವಾಗದೆ, ಅಟ್ಟಣಿಯಿಂದ ಕೆಳಕ್ಕೆ ಬಿದ್ದು ಸಾಯುತ್ತಾನೆ. ದೇವಾಲಯದ ಪಿತೃಭೂಮಿಯಲ್ಲಿ ಎರ್ನೆಸ್ಟೊವಿನ ಸಮಾಧಿಯಾಗುತ್ತದೆ; ತನ್ನ ಮಗನ ನೆನಪಿಗಾಗಿ ವೃದ್ಧ ಮೈಕೇಲ್ ತನ್ನ ನಡುಗುವ ಕೈಗಳಿಂದಲೇ ಸ್ಮಾರಕವನ್ನು ರಚಿಸುತ್ತಾನೆ.

ಕಥೆಯ ವಿವರಗಳನ್ನೆಲ್ಲ ಇಲ್ಲಿ ಕೊಡುವುದು ಸಾಧ್ಯವಲ್ಲದ ಕೆಲಸ. ಆದರೆ ಅದು ಸಾಗುವ ದಾರಿ ಹೀಗಿದೆ. ದಾರಿಯ ಎಡಬಲದಲ್ಲಿ ಸಂಗತಿಗಳು ಉಪ ಸಂಗತಿಗಳು, ಬರುವ ಜನ, ಅವರ ಸುದ್ದಿಗಳು, ಕಷ್ಟ, ಸುಖ, ಸಂತೋಷ, ಸಂತಾಪ ಇವು ಕಥೆಗೆ ಹೊಂದಿಕೊಳ್ಳುವಂತೆ, ಕೊಂಡಿ ಕಿತ್ತು ರಸಭಂಗವಾಗದಂತೆ ಒಂದು ಮೃದುವಾದ ದೊಡ್ಡ ಮನಸ್ಸು ನೋಡಿಕೊಂಡಿದೆ. ಈ ಕಾದಂಬರಿಯ ಕಥೆಗಳ ಉಪಕಥೆಗಳ ಗೊಂಚಲಲ್ಲಿ ಅನೇಕ ವ್ಯಕ್ತಿಗಳ ಜೀವನದ ಹಣ್ಣು ಹೂಗಳು ತೂಗುತ್ತಿವೆ: ಉಸಿರಾಡುವ ಹೂಗಳು ಮಾತಾಡಲು ಹವಣಿಸುವ ತಂಗಾಳಿ. ಇದನ್ನು ಓದುವುದರಿಂದ ಸಂತೋಷವೋ ದುಃಖವೋ ಆಗುತ್ತದೆ; ಅದಕ್ಕಿಂತ ಹೆಚ್ಚಾಗಿ ಒಂದು ಅನುಭವ ಬರುತ್ತದೆ. ಓದಿನ ನೆರಳು ಮನಸ್ಸಿನಲ್ಲಿ ಬಹುಕಾಲ ತಂಗುತ್ತದೆ.

ಅಲ್ಲಲ್ಲೇ ಆಣಿಮುತ್ತಿನಂಥ ಮಾತುಗಳು ಬರುತ್ತವೆ; ಆಡಿದ ಮಾತಿನ ಬೆಳಕಿನಲ್ಲಿ ನುಡಿದವರ ಮುಖ ಮಿನುಗುತ್ತದೆ.

ಕಲಾವಂತರು ಇಂಥವನ್ನು ಬರೆದಾರು, ನಿಜ. ಆದರೆ —

"ಮಳೆಯ ದಿನಗಳಾದರೂ ಒಂದೇ ಒಂದು ಹನಿ ಮಳೆಯಾಗಲಿಲ್ಲ. ತೊರೆಯ ನೀರಂತೂ ಹೋದವರ್ಷವೇ ಇಲ್ಲದಂತಾಯ್ತು. ತೋಟದ ಬಾವಿಗಳಲ್ಲೂ ನೀರು ಪಾತಾಳಕ್ಕೆ ಹೋಗಿತ್ತು. ಕೆಲಸದವರೂ ನೀರೆತ್ತಿ ನೀರೆತ್ತಿ ಸೋತು ಹೋದರು. ಎರಡು ವರ್ಷಗಳಿಂದ ಮಳೆಯಿಲ್ಲದೆ ನೆಲ ಕಲ್ಲಾಗಿತ್ತು. ಯಜಮಾನರ ಮನಸ್ಸಿಗೆ ಯೋಚನೆ ಹತ್ತಿತು." ಎಂಬಲ್ಲಿ ಕಲೆಗಾರಿಕೆಯ ತೋರಿಕೆ ಎಳ್ಳಷ್ಟೂ ಇಲ್ಲದಿದ್ದರೂ, ಇಂಥ ಸಹಜವಾದ ಹಿತವಾದ ಸಮಯ ಸನ್ನಿವೇಶಗಳ ವರ್ಣನೆ ಬದುಕನ್ನು ಬಲ್ಲವರಿಗೆ ಮಾತ್ರ ಸುಲಭ. ಇಂಥ ನೇರವಾದ ಬುರುಡೆಗಟ್ಟಿಯಾದ ಬರವಣಿಗೆ ಈಗ ಅಪೂರ್ವವಾಗುತ್ತಿದೆ.

ಅಥವಾ ಬರವಣಿಗೆಯ ಚಟವಿಲ್ಲದವರು ಬರೆದರೆ ಇಷ್ಟು ಅಣಿಯಾಗಿ ಮಾತು ಒದಗೀತೇನೊ!

ಇಲ್ಲಿ ಬರುವ ಪಾತ್ರಗಳನ್ನು ಕುರಿತು ಒಂದು ಮಾತು. ಈ ಪರ್ವತದ ಅತ್ಯುನ್ನತ ಶಿಖರ ಮೈಕೇಲ್; ಅವನ ದೈವಭಕ್ತಿ, ಕರ್ತವ್ಯನಿಷ್ಠೆ, ಕಲಾಸಕ್ತಿ, ತುಂಬಿದ ಹೂವಿನಂತಹ ಮೃದುಮನಸ್ಸು, ಗಂಭೀರವಾದ ಧ್ವನಿ, ಧನ್ಯ ಏಸು ಕ್ರಿಸ್ತನ ಜೀವನ ಸಂಗತಿಗಳನ್ನು ಸ್ಮರಣೆಗೆ ತರುತ್ತವೆ. ಎರಡನೆಯ ಶಿಖರ 'ರೂಪದರ್ಶಿ' ಎರ್ನೆಸ್ಟೊ, ಕಡೆಗೆ ಅವನೇ ಗರಿಬಾಲ್ಡಿ; ಮೊದಲು ಬಾಲ ಕ್ರಿಸ್ತನ ಚಿತ್ರಕ್ಕೆ ಮಾದರಿ, ಕಡೆಗೆ ಎರಡನೆಯ ಸೈತಾನ ಜುದಾಸನ ಚಿತ್ರಕ್ಕೆ ಮಾದರಿ. ಎರ್ನೆಸ್ಟೊ ಮನ್ಮಥನಂತಿದ್ದವನು ಸೈತಾನನಂತಾದದ್ದು, ಲೋಭಿ ಗಿಯೋವನಿ, ವಿಷಯಲಂಪಟ ಟಾಯಿಟ್ ಇವರ ಹೊಡೆತಗಳಿಂದ. ಆ ಕ್ರೌರ್ಯದ ಕಣ್ಮರೆಯಲ್ಲಿ, 'ರೂಪದರ್ಶಿ'ಯನ್ನು ತಾಯ್ತನದ ಪ್ರೀತಿಯಿಂದ ಹರಸಿದವರು, ಲಿಸ್ಸಾ, ಲೀನಾ ಮಾತೆಯರು. ರೂಪದರ್ಶಿಯ ಪ್ರಿಯಪತ್ನಿ ಯುವೋನಾ ಅವನ ಜೀವನದ ಅಂಚಿನಲ್ಲಿ ಕ್ಷಣಕಾಲ ಹೊಳೆದ ಶಾಂತಿಯ ಮಿಂಚು; ಎಲ್ಲ ಅರ್ಥದಲ್ಲೂ ಮುಖಭಂಗ ಹೊಂದಿದ ರೂಪದರ್ಶಿಗೆ ಈ ಲೋಕದ ಸೌಜನ್ಯವನ್ನು ಸ್ಮರಣೆಗೆ ತಂದ ಇವನ ಬಾಳ ದಾರಿಯಲ್ಲಿ ಹತ್ತು ದಿನ ಒಡಬಾಳಿದ ನಾಯಿ ನಿನ್ನಿ. ಲಿಸ್ಸಾತಾಯಿಯ ಯಜಮಾನರು ಬೆನೆಟ್ಟೊ ಆಕೆಯ ಮಗ ಸಿಮೊನಾ, ಮಗಳು ರೂತ್, ಲೀನಾ ತಾಯಿಯ ಕಂದ ಮೈಕೇಲ್; ಆಕೆಯ ತಂದೆ ಬೆನೆಟ್ಟೊ; ರೂಪದರ್ಶಿಯ ಬಾಲ್ಯದ ಸಂಗಾತಿ ಕುರುಡಿ ಬಾಂಬೀ: ಅವನ ಅಜ್ಜಿಗೆ ಔಷಧೋಪಚಾರ ಮಾಡಿದ ವೈದ್ಯ ಗಾರ್ಡಿಯಾ, ಇವರೆಲ್ಲ ಆ ಪರ್ವತದ ಅಲೆಅಲೆಗಳಾದ ಇತರ ಶಿಖರಗಳು. ಈ ಪರ್ವತದ ನಡುಮಟ್ಟದಲ್ಲಿ ಮಹಾಪೂಜ್ಯ ಪೋಪ್‌ರವರ ಸ್ಮರಣೆಯು ಎತ್ತರವಾದ ದೇವಾಲಯ ಎದ್ದು ಕಾಣುತ್ತಿದೆ; ಅದರ ತುದಿಯ ಶಿಲುಬೆ ಅನಾಥರಿಗೂ ದುರ್ಬಲರಿಗೂ ಅಭಯದಾನ ಮಾಡುತ್ತಿದೆ. ಎಂಥ ಮೃದುಜೀವ ಅವರದು! ಇಳಿವಯಸ್ಸಿನ ಮೈಕೇಲ್ ವಾಟಿಕನ್ನಿನ ಚಿತ್ರಗಳನ್ನು ಹಗಲಿರುಳೂ ದುಡಿದು ಪೂರ್ಣಗೊಳಿಸಿದ ಮೇಲೆ, ಪೋಪರು ಅವನನ್ನು ತುಂಬು ಮನಸ್ಸಿನಿಂದ ಆಶೀರ್ವದಿಸಿ: "ಮೈಕೇಲ್, ತಂದೆಯ ರಾಜ್ಯದಲ್ಲಿ ನಿನ್ನ ಸ್ಥಾನವನ್ನು

ಎಂದೋ ಮೀಸಲಾಗಿರಿಸಿರುವರು. ಒಂದು ವೇಳೆ ನೀನೇ ಅಲ್ಲಿಗೆ ಮುಂದಾಗಿ ಹೋದರೆ ನಮಗೂ ಒಂದಿಷ್ಟು ನಿನ್ನ ಶಿಪಾರಸು ಇರಲಿ, ಮರೆಯಬೇಡ" ಎನ್ನುತ್ತಾರೆ. ಇದಕ್ಕಿಂತ ದೊಡ್ಡ ಮಾತನ್ನು ನಾವು ಎಲ್ಲಿಂದ ತರೋಣ? ಇಂಥವರಿಂದ ಲೋಕ ಪಾವನವಾಗುತ್ತದೆ. ಮಾಡಿದ ಕೆಲಸಕ್ಕೆ ಇಂಥ ಮಾತನ್ನು ಕೇಳುವುದೇ ಒಂದು ಸಿದ್ಧಿ. ಪೋಪರ ಕೊರಳಿನಲ್ಲಿದ್ದ ಚಿನ್ನದ ಶಿಲುಬೆ ಮೈಕೇಲನ ಕೊರಳಿನಲ್ಲಿ ತಂಗಿತು; ಮೈಕೇಲ್ ಆ ಪುಣ್ಯಕ್ಕೆ ತಕ್ಕವನೇ ಸರಿ. ಅದನ್ನೂ ಅವನು ಇಟ್ಟುಕೊಳ್ಳಲಿಲ್ಲ; ತನ್ನ ಮೊಮ್ಮಗಳು ಎನ್ನಿಸಿಕೊಂಡ ಸಾಧ್ವೀ ಶಿರೋಮಣಿ ಲೀನಾ ದೇವಿಯ ಕೊರಳಿಗೆ ಅದನ್ನು ಹಾಕಿ "ಮಗೂ ಇದು ನಿನ್ನ ಕಷ್ಟಗಳನ್ನು ಪಾರುಮಾಡಲಿ" ಎಂದು ಹರಸುತ್ತಾನೆ. ಅವಳೂ ಆ ದಾನಕ್ಕೆ ತುಂಬ ಅರ್ಹಳೇ. ಇಂಥ ನಡೆನುಡಿಗಳಿಂದ ಈ ಕಾದಂಬರಿಗೆ ಜೀವಕಳೆ ಬಂದಿದೆ. ಜೀವವೂ ಇದೆ, ಜೀವಕಳೆಯೂ ಇದೆ ಈ ಕೃತಿಯ ಹಸನ್ಮುಖದಲ್ಲಿ. ಇದನ್ನು ಹೊಗಳದವರು ಕಡುಲೋಭಿಗಳೆನ್ನಬೇಕು. ಶ್ರೀ ಅಯ್ಯರವರಿಗೆ ಜೀವನದ ಒಳಗೂ ಹೊರಗೂ ನಡೆದದ್ದನ್ನು, ನಡೆಯಬಹುದಾದ್ದನ್ನು, ಇಡೀ ಜೀವನಕ್ಕೆ ಗೌರವವನ್ನೂ ಗಾಂಭೀರ್ಯವನ್ನೂ ತರಬಹುದಾದ್ದನ್ನು, ಸಾಹಿತ್ಯಕ್ಕೆ ಸೆಳೆಯುವ, ನೇರವಾಗಿ ಹೃದಯಂಗಮವಾಗಿ ನುಡಿಯುವ ಶಕ್ತಿ ಅಪಾರವಾಗಿದೆ. ಒಳ್ಳೆಯದು ಒಳ್ಳೆಯದನ್ನೇ ಮಾಡುತ್ತದೆ; ತಾನೂ ಬಂಗಾರವಾಗಿ ಬಾಳುತ್ತದೆ.

ನಾಯಿಮಲ್ಲಿಗೆ

ಎರಡು ವರುಷದ ಹಿಂದೆ ಒಂದು ಸಲ ನಮ್ಮ ತುಂಗಭದ್ರೆಗೆ ದೇಹಾಲಸ್ಯವಾಯಿತು; ಅದು ಜ್ವರಕ್ಕೆ ತಿರುಗಿತು; ಜ್ವರ ಕೆಂಡಾಮಂಡಲವಾಗಿ ಕಾಯುತ್ತಿತ್ತು. ಮೀನಾಕ್ಷಿಗೆ ಭಯ. ನನಗೆ ಆತಂಕ. ನಾವಿಬ್ಬರೂ ಮಗುವಿನ ಹತ್ತಿರವೇ ಇದ್ದು ಒಬ್ಬರಿಗೊಬ್ಬರು ಧೈರ್ಯ ಹೇಳುತ್ತ, ಔಷಧ ಉಪಚಾರ ನಡಸುತ್ತಿದ್ದೆವು. ಬಾಗಿಲ ಬಳಿ ನಮ್ಮ ಸಂಸಾರಕ್ಕೆ ಸೇರಿದ ಒಂದು ನಾಯಿ, ನಮ್ಮ ಜಾಕಿ, ಹೊಸಲಿನ ಮೇಲೆ ತಲೆಯಿಟ್ಟು ಮಗುವನ್ನೇ ನೋಡುತ್ತಿತ್ತು. ಮಗುವಿನ ಬಳಿ ನಾನು ಮೀನಾಕ್ಷಿ ಇಬ್ಬರು ಮಾತ್ರ ಸುಳಿದಾಡಬಹುದಾಗಿತ್ತು. ಇನ್ನು ಯಾರೂ ಎಂಥ ಒಳ್ಳೆಯವರೂ ನೆರಳು ಹಾಕುವಂತಿರಲಿಲ್ಲ; ಜಾಕಿ ಅಡ್ಡಬರುತ್ತಿತ್ತು. ನಾನಾಗಲಿ ಆಕೆಯಾಗಲಿ ಮರೆಯಾದ ವೇಳೆಯಲ್ಲಿ ಮಗು ಅತ್ತರೆ,ನಿಂತು, ಏನಾಯಿತೆಂದು ಕಣ್ಣಲ್ಲೇ ಕೇಳುತ್ತಿತ್ತು, ಮಗು ಸುಮ್ಮನಾಗುತ್ತಿತ್ತು.

ಇಂಥ ಒಳ್ಳೆಯ ನಾಯಿಯ ವಿಚಾರದಲ್ಲಿ ನಮಗೆ ತುಂಬ ನಂಬಿಕೆ ಬಂದದ್ದು ಆಶ್ಚರ್ಯವೇನಲ್ಲ. ಬರುತ್ತ ಬರುತ್ತ ಜಾಕಿ ನಮ್ಮ ಮನಸ್ಸಿಗೆ ನಾಯಿಯಾಗಿ ತೋರಲಿಲ್ಲ. ನಾವು ಅದಕ್ಕೆ ದಿನವೂ ಹಾಕುತ್ತಿದ್ದ ಒಂದು ತುತ್ತು ಅನ್ನಕ್ಕಾಗಿ ,ತನ್ನ ಕೃತಜ್ಞತೆಯನ್ನು ಸೂಚಿಸುವ ಕೇವಲ ಒಂದು ಮೂಕಪ್ರಾಣಿಯಾಗಿಯೂ ತೋರಲಿಲ್ಲ, ಅದಕ್ಕಿಂತಲೂ ಹೆಚ್ಚಿನ ಸೌಹಾರ್ದಕ್ಕೆ ಬಾಳುವ, ನಮ್ಮನ್ನು ಅರ್ಥಮಾಡಿಕೊಂಡು ನಮ್ಮ ಕಷ್ಟಸುಖಗಳಲ್ಲಿ ಬೆರೆಯುವ ಮಾನವರೂಪವೊಂದು ಮಾತ್ರ ಇಲ್ಲದ, ಪರಮ ಸ್ನೇಹಿತನಂತೆ ತೋರಿತು. ಮಗುವಿಗೆ ಆಟಕ್ಕೆಂದು ನಾನು ಮದರಾಸಿನಿಂದ ತಂದ ನಾಯಿ ಬೊಂಬೆಗೆ ಈ ಗುಣವಿರಲಿಲ್ಲ. ಅದರ ಕಣ್ಣಿನಲ್ಲಿ ಜೀವದ ದೀಪವಿರಲಿಲ್ಲ. ಅದಕ್ಕೆ ಸುಮ್ಮನೆ ನಾಲ್ಕು ರೂಪಾಯಿ ಸುರಿದ ದಡ್ಡ ನಾನು. ಮಗು ಅದನ್ನು ಆಡಿಸಿ ಓಡಿಸಿ ಮೂಲೆಗೆ ಎಸೆಯಿತು. ನಮ್ಮ ಜಾಕಿಯಂತೆ ಅದು ಒಂದು ನಿಮಿಷವೂ ಮಗುವನ್ನು ಆಡಿಸಿಲ್ಲ. ಮಗುವಿನ ವಿಷಯದಲ್ಲಿ ಅದಕ್ಕೆ ಅಭಿಮಾನವೂ ಇಲ್ಲ. ಆತಂಕವೂ ಇಲ್ಲ. ಜಾಕಿ ಹಾಗಲ್ಲ; ಮಗುವಿನ

ಮೇಲೆ ಸಾವಿರ ಕಣ್ಣು ಅದಕ್ಕೆ. ಮಗು ಆಡಿಕೊಂಡಿರದಂತೆ ಈ ಜ್ವರ ತಡೆಯುತ್ತಿದೆಯಲ್ಲ, ಮಗು ತೆಳ್ಳಗಾಯಿತಲ್ಲ ಎಂದು ನಾನೂ ಅವಳೂ ಮಾತಾಡಿಕೊಳ್ಳುತ್ತಿದ್ದರೆ, ನಾಯಿ ನಮ್ಮಿಬ್ಬರ ನಡುವೆ ನಿಂತು 'ಏಕೆ?' ಎಂದು ಕೇಳಿದಂತಿತ್ತು. ಅದು ಹೊಸಿಲ ಮೇಲೆ ತಲೆಯಿಟ್ಟು ಮಲಗಿದ್ದರೆ, ಅವೊಂದು ಅಂಚು ಒದ್ದೆಯಾಗಿರುತ್ತಿತ್ತು.

ದಿನದಿನಕ್ಕೆ ಜ್ವರ ಕಳೆದು ಮಗು ಗುಣಮುಖವಾಗುತ್ತ ಬಂದಿತು. ಮತ್ತೆ ಚೆವರಿದ ಮೋಡ, ಒಂದೆಳೆ ಹೊಂಬಿಸಿಲು, ಮಗು ಎದ್ದು ನಿಲ್ಲಲು, ನಿಂತು ನಡೆಯಲು ಗೋಡೆಯ ಪಕ್ಕದಲ್ಲಿ ಸಾಹಸಮಾಡುತ್ತಿತ್ತು: ರಕ್ಕೆಯಿಲ್ಲದ ಹಕ್ಕಿಯಂತೆ ಚಾಪೆಯ ಮೇಲೆ ಬೀಳುತ್ತಿತ್ತು. ಮಗು ಬಿದ್ದಿತಲ್ಲ ಎಂದು ನಾವು ನುಗ್ಗುವ ಮೊದಲೇ ಜಾಕಿ ಅಲ್ಲಿಗೆ ಹಾರಿ ಮಗುವಿಗೆ ಬೆನ್ನು ಕೊಟ್ಟು ಅದು ಬೀಳದಂತೆ ನೋಡಿಕೊಳ್ಳುತ್ತಿತ್ತು. ಮಗು ತನ್ನ ಪುಟ್ಟ ಕೈಗಳಿಂದ ನಾಯಿಯ ಬೆನ್ನನ್ನು ತಟ್ಟಿ ತನ್ನ ಜೇಬಿನಲ್ಲಿದ್ದ ಬಿಸ್ಕತ್ತನ್ನು ನಾಯಿಯ ಬಾಯಿಗಿಡುತ್ತಿತ್ತು. ಮಗು ಓಡಾಡಿತು; ನಾಯಿಯ ಮುಖ ಗೆಲುವಾಯಿತು. 'ಜ-ಆ-ಕೀ' ಎಂದು ಮಗು ಕೂಗಿದರೆ, ಅದು ಎಲ್ಲಿಂದಲೋ ಹಾರಿಬಂದು ಉದ್ದವಾಗಿ ಕಾಲುನೀಡಿ ತಲೆ ಚಾಚಿ ಮಗುವಿಗೆ ನಮಸ್ಕಾರಮಾಡುತ್ತಿತ್ತು. ಆ ನಮಸ್ಕಾರ ಬಹುಶಃ ಮಗುವನ್ನು ಕಾಪಾಡಿದ ದೇವರಿಗೇ ಇರಬೇಕು.

ಜ್ವರ ಬಿಟ್ಟರೂ ಮಗು ಬಡವಾಗಿ ಮಲ್ಲಿಗೆಯ ಹಂಬಿನಂತಿತ್ತು. ಒಂದು ಸಲ ಡಾಕ್ಟರಿಗೆ ತೋರಿಸಿ ವಿಷಯ ತಿಳಿದು ಆರೈಕೆ ಮಾಡಬಹುದಲ್ಲವೆ ಎಂದು ಇವಳು ಸೂಚಿಸಿದಳು. ನಾನೂ ಒಪ್ಪಿದೆ.

ಮಾರನೆಯ ದಿನ ಬೆಳಗಿನ ಒಂಬತ್ತು ಘಂಟೆಯ ಹೊತ್ತಿಗೆ ಟಾಂಗಾ ಬಂದು ಬಾಗಿಲಲ್ಲಿ ನಿಂತಿತು. ನಾನು ಅಣಿಯಾಗುವುದಕ್ಕೆ ಹೆಚ್ಚು ಹೊತ್ತು ಹಿಡಿಯಲಿಲ್ಲ; ಇವಳೂ ಬೇಗ, ಎಂದಿಗಿಂತ ಬೇಗ, ಸಿದ್ಧವಾದಳು. ಆಗ ನಮ್ಮ ಜಾಕಿ ಮನೆಯಲ್ಲಿರಲಿಲ್ಲ; ನಾನೂ ಹುಡುಕಲಿಲ್ಲ. ಸರಿ, ತುಂಗಭದ್ರೆಗೆ ಬಿಳಿಲಂಗ ಹಾಕಿ ಬೆಚ್ಚಗೆ ಶಾಲು ಹೊದ್ದಿಸಿಕೊಂಡು, ಮೀನಾಕ್ಷಿ ಟಾಂಗಾದಲ್ಲಿ ಕುಳಿತಳು. ನಾನೂ ಕನ್ನಡಕ ಸರಿಮಾಡಿಕೊಂಡು ಪಕ್ಕದಲ್ಲಿ ಕುಳಿತೆ. ಈ ಬಗೆಯ ಮೆರವಣಿಗೆ ಬಾಳಿಗೆ ಆಗಾಗ ಒದಗುತ್ತದೆ; ಅದೂ

ಒಳ್ಳೆಯದೇ. ಮಗುವಿನ ಅಂಗಿಗೆ ಗುಂಡಿಹಾಕುವ ಸಡಗರದಲ್ಲಿ, ವಿಶಾಲಾಕ್ಷಿ ನಕ್ಕ ನಯವಾದ ನಗೆ, ಆ ಹಿಗ್ಗಿನ ಸಮಯದಲ್ಲಿ ಅವಳ ತುರುಬಿನಿಂದ ಏಕಾ ಏಕಿ ನನ್ನ ಮೇಲುರುಳಿದ ಒಂದು ದುಂಡು ಮಲ್ಲಿಗೆಯೆಸಳು, ಅದನ್ನು ಹಿಡಿಯಲು ತವಕಿಸಿದ ತುಂಗಭದ್ರೆಯ ಪುಟ್ಟ ಕೈಬೆರಳು—ಇವುಗಳಿಗೆ ನಾನು ಬೆರಗಾಗಿ, ಏನನ್ನೋ ಜ್ಞಾಪಿಸಿಕೊಳ್ಳುತ್ತಿದ್ದಾಗ, ಬೀದಿಯ ತಿರುಗಿನಲ್ಲಿ, ಜಾಕಿ ನಮ್ಮನ್ನು ಕಂಡು ಬೆನ್ನಟ್ಟಿ ಬಂದಿತು. ಮಗು ಹಾಸಿಗೆ ಹಿಡಿದಿದ್ದ ದಿನದಿಂದಲೂ ತನ್ನ ಅನ್ನದ ತುತ್ತನ್ನು ಸಂಪೂರ್ಣವಾಗಿ ಸಂತೋಷವಾಗಿ ತಿನ್ನದಿದ್ದ ನಾಯಿ, ತನ್ನ ಆತಂಕವೊಂದೇ ತನ್ನ ಎಲ್ಲ ಶಕ್ತಿಯೂ ಆಗಿ, ಕುದುರೆಯೊಂದಿಗೆ ಕುದುರೆಯಂತೆ ಓಡಿ ಓಡಿ ಬರುತ್ತಿತ್ತು. ನಾನು ಹೇಳಿದೆ: ಮನೆಗೆ ಹೋಗು ಜಾಕಿ, ಕಾವಲಾಗಿರು; ಬಂದುಬಿಡುತ್ತೇವೆ, ಎಂದು. ಇವಳು ಹೇಳಿದಳು: ಹೋಗು ಜಾಕಿ, ನೀನು ಬರಬಾರದು; ಮನೆಗೆ ಹೋಗು, ಭಯವಿಲ್ಲ ಹೋಗು, ಎಂದು. ಅದು 'ಉಹುಂ' ಎಂದಿತು. ಮಗು ಉದ್ದಕ್ಕೂ ಕೈನೀಡಿ ನಾಯಿಯನ್ನೇ ತೋರಿಸುತ್ತಿತ್ತು. ನಾಯಿ ಕುದುರೆಯ ಕಾಲುಕಾಲಿಗೆ ತೊಡರುತ್ತಿತ್ತು. ಸಾರಥಿ ಸಾಬು ತುಂಬ ಸಹನೆಯಿಂದ ಜಾಣ್ಮೆಯಿಂದ ಟಾಂಗಾ ನಡಸಿದ. ದಾರಿಯಲ್ಲಿ ಜನ ಏನೆಂದು ಕೊಂಡರೋ! ಕಷ್ಟಪಡುವುದಕ್ಕೇ ಹುಟ್ಟಿದ ಕುದುರೆಗೆ ಈ ನಾಯಿಯ ಕಾಟದಿಂದ ಹೆಚ್ಚು ಹಿಂಸೆಯಾಗಿರಲಾರದು! ಕಣ್ಣುಪಟ್ಟಿ ಇರುವುದು ಕುದುರೆಯ ಕಂಬನಿ ನಮಗೆ ಕಾಣದಿರಲಿ, ಎಂದು, ಅಷ್ಟೆ!

ನಾವು ಆಸ್ಪತ್ರೆಗೆ ಬಂದಕೂಡಲೆ ದತ್ತಾತ್ರೆಯವರು ನಮ್ಮನ್ನು ಪ್ರೀತಿಯಿಂದ ಮಾತಾಡಿಸಿದರು. ನಾವು ಅವರ ಕೂಡ ಮಗುವಿನ ವಿಷಯ ಮಾತಾಡುತ್ತ ಕುಳಿತೆವು. ಜಾಕಿ ಮಗುವಿನ ಹತ್ತಿರ ಕಿವಿ ಮೇಲಕ್ಕೆ ಮಾಡಿಕೊಂಡು ನಿಂತುಬಿಟ್ಟಿತು. ಏಳು ಜಾಕಿ, ಹೊರಗಿರು, ಎಂದೆ. ಅದು ಏಕೆ ಕೇಳಬೇಕು! ಡಾಕ್ಟರ್ ಮಗುವನ್ನು ಎತ್ತಿಕೊಂಡು ಒಳಮನೆಗೆ ಹೋದರು. ನಾವೂ ಹಿಂದೆ ಹೋದೆವು. ನಾಯಿಯೂ ಬಂದುಬಿಟ್ಟಿತು. "ಈ ನಾಯಿ ನಮ್ಮನ್ನು ಬಿಡುವಂತಿಲ್ಲ ಇರಲಿ, ಬಿಡಿ" ಎನ್ನುತ್ತ ಡಾಕ್ಟರ್ ನಕ್ಕರು. ಆಮೇಲೆ ಮಗುವನ್ನು ತಕ್ಕಡಿಯ ಮೇಲೆ ನಿಲ್ಲಿಸಿದರು; ನಾಲಗೆ ಹಿಡಿದು ನೋಡಿದರು. ಬೆನ್ನನ್ನು ಮಿಡಿದು, ಎದೆಯ ಮೇಲೆ ತಲೆಯಿಟ್ಟು,

ರಮಾತ್ರನನ್ನೇ ಪರೀಕ್ಷೆಮಾಡಿದರು. ಅಲ್ಲಿಗೇ ನಿಲ್ಲಿಸದೆ, ಹೊಟ್ಟೆಯಲ್ಲಿ ಷ್ಟಿಯಿದೆಯೇ ನೋಡೋಣವೆಂದೋ ಏನೋ, ಮಗುವನ್ನು ರಬ್ಬರಿನ ಂಚದ ಮೇಲೆ ಮಗ್ಗುಲಾಗಿ ಮಲಗಿಸಿದರು. ಮಗುವಿಗೆ ಇಂಜೆಕ್ಷನ್ನಿನ ಯುವೇ ಬಂದಿತೋ, ಇಲ್ಲ, ರಬ್ಬರಿನ ಮಂಚ ತಣ್ಣಗೆ ಕೊರೆಯುತ್ತಿದ್ದುದ ುದಲೋ ಅಂತೂ ಅದೊಂದು ಸಲ ಕಿಟ್ಟನೆ ಕಿರಿಚಿತು. ಕೂಡಲೆ ನಾಯಿ ುಕ್ಟರನ್ನು ಬೆದರಿಸುತ್ತ ಎಲ್ಲರನ್ನೂ ತಳ್ಳಿಕೊಂಡು ಮಂಚವನ್ನು ಹತ್ತಿ ುಗುವಿನ ಬಳಿ ಅಡ್ಡಲಾಗಿ ನಿಂತುಕೊಂಡಿತು. ಅವರು ಮಗುವನ್ನು ುತ್ತಿ ಮುಟ್ಟಗೊಡಿಸಲಿಲ್ಲ, ಆ ನಾಯಿ!

ಕಡೆಗೆ ಯತ್ನವಿಲ್ಲದೆ ನಾನು ಜಾಕಿಯನ್ನು ಎಳೆದು ಹಿಡಿದುಕೊಂಡೆ; ನೆಷ್ಟು ಹಗುರವಾಗಿತ್ತು ಅದರ ಮೈ. ಹಾಗೆಯೇ ಮನಸ್ಸಿನಲ್ಲಿ, ಇದೇನಿದು ುಷ್ಟು ತೆಳ್ಳಗಾಯಿತಲ್ಲ, ಎಂದುಕೊಂಡೆ. ಅಂತೂ ಅವರು ಮಗುವನ್ನು ವರವಾಗಿ ಪರೀಕ್ಷಿಸಿ, 'ಆರೋಗ್ಯವಾಗಿದೆ; ಭೇಷಾಗಿದೆ: ತುಂಬ ಹಾಲು ಣ್ಣು ಅಪ್ಪಚ್ಚಿ ಕೊಡಿ; ತಿಂಗಳು ಕಳೆಯಲಿ, ನಾನೇ ಬಂದು ನೋಡು ೕನೆ' ಎಂದು ಹೇಳಿ, ತುಂಗಭದ್ರೆಯನ್ನು ಮೆಲ್ಲಗೆ ಕೆನ್ನೆಗೆ ಒತ್ತಿಕೊಂಡು ಇಗಿಳಿಸಿದರು. ಮಗು ಮೆಲ್ಲಗೆ ನಕ್ಕು ನಾಯಿಯನ್ನು ನೋಡಿತು. ನಾಯಿ ುಕ್ಟರಿಗೆ ನಮಸ್ಕಾರ ಮಾಡಿತು. ಮೀನಾಕ್ಷಿ, ನಡುರಾತ್ರಿಯಲ್ಲಿ ಸಿರಿ ುದಷ್ಟು ಸಂಭ್ರಮದಿಂದ, ನನ್ನ ಕಡೆ ನೋಡಿದಂತೆ ಮಾಡಿ 'ಜೈಹಿಂದ್ ುಡಮ್ಮ ಡಾಕ್ಟರಿಗೆ' ಎಂದಳು. ಮಗು ನಾಚಿಕೊಂಡು ದೂರ ಇದ್ದ ಗಳನ್ನು ನಿಧಾನವಾಗಿ ಜೋಡಿಸಿಕೊಂಡು ಡಾಕ್ಟರಿಗೆ ಕೈಮುಗಿಯಿತು.

ನಮ್ಮ ಡಾಕ್ಟರ್ ನಮ್ಮ ಆರೋಗ್ಯದ, ಸಂತೋಷದ, ಸಾಂಸಾರಿಕ ರ್ಯದ ಹಡಗಿನ ಯಜಮಾನರು. ಅವರು ಹೇಳಿದ್ದು ನಮಗೆ ವೇದವಾಕ್ಯ. ರು ಅಭಯ ಕೊಡುತ್ತಲೇ ಇರುವುದರಿಂದ ನಾವು ನಿರ್ಭಯವಾಗಿದ್ದೇವೆ. ುವಿನ ವಿಷಯದಲ್ಲಿ 'ಏನೂ ಭಯವಿಲ್ಲ' ಎಂದು ಅವರು ಹೇಳಿದ ಮೇಲೆ ುಗೆ ಎಷ್ಟೋ ಧೈರ್ಯವಾಯಿತು. ಆದರೂ ನಮ್ಮ ಜೊತೆ ಟಾಂಗಾ ಬಳಿಗೆ ದರು; ಮತ್ತು ಹೊರಡುವ ಸಮಯದಲ್ಲಿ ಹೇಳಿದರು—'ನೋಡಿ, ುರ್ತಿ, ಮಗು ಚೆನ್ನಾಗಿದೆ. ಆದರೆ, ಈ ನಾಯಿ ತೆಳ್ಳಗಾಗುತ್ತ ಬಂದಿದೆ; ರ ಸ್ಥಿತಿ ಚಿಂತಾಜನಕವಾಗಿದೆ. ಇದಕ್ಕೆ ಸ್ವಲ್ಪ ಔಷಧ ಕೊಡಿಸಿ, ಸರಿ

ಯಾಗಿ ನೋಡಿಕೊಳ್ಳಿ' ಎಂದು. ನಾನೂ ಈ ಮಾತು ಒಪ್ಪಿದೆ. ಮಗು ನಾಯಿಯನ್ನೇ ನೋಡುತ್ತಿತ್ತು, ನಾಯಿ ತನ್ನ ಗುಲಾಬಿ ನಾಲಗೆಯನ್ನು ಉದ್ದವಾಗಿ ನೀಡಿ ಮಗುವನ್ನೇ ನೋಡುತ್ತಿತ್ತು.

ಹಿಂದಿರುಗುವಾಗ ಜಾಕಿ ನಮ್ಮ ಟಾಂಗಾ ಹಿಂದೆ ಓಡಿಬರಲಿಲ್ಲ. ದಾರಿಯಲ್ಲಿ ಎಲ್ಲೋ ಕಣ್ಮರೆಯಾಯಿತು. ಅಂತೂ ನಾವು ಮನೆಗೆ ಬರುವಷ್ಟರಲ್ಲಿ ಅದು ಬಾಗಿಲ ಬಳಿ ಕಂಬಳಿ ಚೂರಿನಂತೆ ಬಿದ್ದುಕೊಂಡು ಪಿಳಿಪಿಳಿ ಕಣ್ಣು ಬಿಟ್ಟು ನಮ್ಮನ್ನೇ ಕಾಯುತ್ತಾ ಮಲಗಿತ್ತು.

ಡಾಕ್ಟರ್ ದೇವರಲ್ಲ; ಆದರೂ ಅವರು ಹೇಳಿದ್ದಂತೆ ಜಾಕಿ ಬಡವಾಗುತ್ತ ಬಂದಿತು. ಹತ್ತು ದಿನ ಔಷಧ ತರಿಸಿ ಅನ್ನದಲ್ಲಿ ಬೆರಸಿ ಹಾಕಿದೆವು. ಏಕೋ ಏನೋ ಅದು ಒಂದನ್ನೂ ಮುಟ್ಟಲಿಲ್ಲ. ಇವರು 'ನನಗೆ ಔಷಧ ಹಾಕಿದ ಅನ್ನ ಹಾಕುತ್ತಾರಲ್ಲ' ಎಂದು ತುಂಬ ಬೇಸರಪಟ್ಟುಕೊಂಡು ಉಪವಾಸ ಮಾಡುತ್ತಾ ಮನೆಯ ಬಾಗಿಲಲ್ಲಿ ಒಂದು ಹಿಡಿ ಹುಲ್ಲಾಗಿ ಬಿದ್ದಿತ್ತು; ನಾಯಿ ತನ್ನೊಡನೆ ಆಡುತ್ತಿಲ್ಲವಲ್ಲ ಎಂದು ತುಂಗಭದ್ರೆಗೆ ಕೊರಗು; ಮೊದಲೇ ಮಗುವಿಗಾಗಿ ಬಳಲಿ ಹಣ್ಣಾಗಿದ್ದ ಮೀನಾಕ್ಷಿ ಮತ್ತೂ ಮೃದುವಾಗಿ 'ಅಯ್ಯೋ ನೋಡಿ! ನಮ್ಮ ಜಾಕಿ ಹೇಗಾಯಿತು' ಎಂದು ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿದ್ದಳು. ನನ್ನ ಸಂಸಾರದ ನಿಜವಾದ ಸ್ನೇಹಿತನಂತೆ ಇದ್ದ ವಸ್ತು ಹೀಗೆ ತನ್ನ ಮೈಯನ್ನೆಲ್ಲ ಕಳೆದುಕೊಂಡು ಮಾತಾಡದೆ ಮಲಗಿದೆಯಲ್ಲ ಎನ್ನುವ ಚಿಂತೆಯಲ್ಲಿ ನನಗೂ ದಾರಿತೋರಲಿಲ್ಲ. ಅದನು ಉಳಿಸಿಕೊಳ್ಳಲು ನಾವು ಮಾಡಿದ ಸಾಹಸ ವಿಧಿಯ ಕಣ್ಣಿಗೆ ಅಪರಾಧವೆನಿಸಿತೇನೋ! ನಾವೂ ಹೋರಾಡಿದೆವು ಇದನ್ನು ಸಾವಿನ ಬಾಯಿಗೆ ಸುಮ್ಮನೆ ಕೊಡಲೇಬಾರದೆಂದು ವಿಶ್ವಪ್ರಯತ್ನ ಮಾಡಿದೆವು; ನಾಯಿಗೂ ಅದರಿಂದ ಹಿಂಸೆಯೇ ಆಯಿತು ; ಪ್ರಯೋಜನವಾಗಲಿಲ್ಲ. ಯಮಪಾಶದ ಎಳೆತದಲ್ಲಿಯೂ ನಾಯಿಗೆ ಮಗುವಿನ ಮೇಲೆ ತುಂಬ ಗೀಳು. ಮಗು ದೂರದಲ್ಲಿ ಓಡಾಡುತ್ತಿದ್ದರೆ, ನಾನೇ ನಿನ್ನ ಹತ್ತಿರ ಬರುತ್ತೇನೆಂದು ಜಾಕಿ ತೆವಳಲು ಹವಣಿಸುತ್ತಿತ್ತು. ಪ್ರಾಣವಿತ್ತು; ತ್ರಾಣವಿರಲಿಲ್ಲ. ಹೀಗೆರಡು ದಿನ ಬದುಕಿನ ಬಯಲಿನಲ್ಲಿ ಸಾವಿನ ನೆರಳು ಬೊಂಬೆಯಾಟ ನಡೆಯಿತು. ಎರಡೇ ದಿನ, ಅಷ್ಟೆ!

ಮಗುವಿಗಾಗಿ ನೊಂದು ನವೆದಿದ್ದ ನಾಯಿ, ತನ್ನ ನೋವಿಗೆ ಆಹುತಿ ರಾಗಿ, ಚಿತ್ರಾ ಪೂರ್ಣಿಮೆಯ ನಡುಹಗಲಲ್ಲಿ ದೊಡ್ಡದಾಗಿ ಕಣ್ತೆರೆದು ೋಕದ ವ್ಯವಹಾರವನ್ನೆಲ್ಲ ಮುಗಿಸಿಕೊಂಡು ತಣ್ಣಗಾಯಿತು. ಸತ್ತ ಾಯಿಯ ಮೇಲೆ ಕಂಬಳಿಯ ಚೂರೊಂದನ್ನು ಹೊದಿಸಿದೆ; 'ತುಂಗಭದ್ರೆ ರುನ್ನು ಪಕ್ಕದ ಮನೆಯಲ್ಲಿ ಬಿಟ್ಟು ಬಾ; ಇದರ ಕೆಲಸ ಮುಗಿದ ಮೇಲೆ ರೆತರಬಹುದು' ಎಂದು ನಾನು ಮೀನಾಕ್ಷಿಗೆ ಹೇಳಿದೆ. ಪಾಪ! ಅವಳಿಗೂ ೖಕಾಲು ನಡುಕ; ಆದರೂ ಮಗುವನ್ನೆತ್ತಿಕೊಂಡು ಈಚೆಗೆ ಬಂದಳು. ಮಗು ಇವರೇಕೆ ಹೀಗೆ ಮಾಡುತ್ತಾರೆ ಎನ್ನುವ ಸಂಶಯದಿಂದ ನನ್ನ ಕಡೆ ೋಡಿ 'ಅಣ್ಣಾ, ಜಾಕೀಗೆ ಚಳಿ: ನನ್ನ ಕಂಬಳೀ ಹೊದಿಸು' ಎಂದಿತು. ಗಲಿ, ಎಂದು ನನ್ನ ದುಃಖವನ್ನೆಲ್ಲ ನುಂಗಿಕೊಂಡೆ.

ಮೀನಾಕ್ಷಿ ಹೋಗಿ ಬರುವಷ್ಟರಲ್ಲಿ ಬೇಲಿಯ ಮೂಲೆಯ ತೆಂಗಿನ ುರದ ಬಳಿ ಆಳವಾಗಿ ಅಗೆದು, ತಾಯಿಮಣ್ಣಿನಲ್ಲಿ ಜಾಕಿಯನ್ನು ಮಲಗಿಸಿ ೕಲೆ ಮಣ್ಣೆಳೆದು, ಇದೂ ಒಂದು ಕರ್ತವ್ಯವಾದರೆ, ಇದೋ ನಿನ್ನಿಷ್ಟ, ಂದು ದೇವರಿಗೆ ಕೈಮುಗಿದೆ. ಮೇಲೊಂದು ಮಲ್ಲಿಗೆಯ ಹಂಬನ್ನು ಬ್ಬಿಸಿದೆ, ಅದು ನನ್ನಿಷ್ಟ.

ಮೀನಾಕ್ಷಿ ತುಂಗಭದ್ರೆಯನ್ನು ಅಳುತ್ತ ಮನೆಗೆ ಕರೆತಂದಳು. ೊಸಿಲ ಬಳಿ ನಾಯಿ ಇಲ್ಲದ್ದನ್ನು ನೋಡಿ ಮಗು ಜಾಕಿ ಎಲ್ಲಿ ಎಂದು ಕೇಳಿ ೕಳಿ ನಮ್ಮನ್ನೂ ಅಳಿಸಿ, ಉತ್ತರ ಬಾರದಿರಲು ಸುಸ್ತಾಗಿ ಚಾಪೆಯ ಮೇಲೆ ಮಲಗಿತು.

ಹಬ್ಬದ ಅಡುಗೆಯನ್ನು ಬೀಸಾಡಿ ಕಣ್ಣೀರಿನಲ್ಲಿ ಕೈತೊಳೆದು ೊಂಡೆವು.

ಆ ಮಲ್ಲಿಗೆಯ ಹಂಬು ಈಗ ದೊಡ್ಡ ದೊಡ್ಡ ಹೂಗಳನ್ನು ತೊಡುತ್ತಿದೆ. ೆ ನಾಯಿ ಹಾಗೆ ಕಣ್ಣು ಬಿಟ್ಟುಕೊಂಡೇ ಮಣ್ಣಾಗಿತ್ತು.

ವೀ. ಸೀ.

"ವಿ. ಸೀ" ಅವರು ಕಿರಿಯರೊಂದಿಗೆ ಹೊಂದಿಕೊಂಡಿರುವ ಹಿರಿಯರ ಪ್ರಿಯ ಪ್ರತಿನಿಧಿಗಳು. ಅವರ ವ್ಯಕ್ತಿಪರಿಚಯವನ್ನು ಮಾಡಿಕೊಡುವುದಕ್ಕೆ ನನಗಿಂತ ಸಮರ್ಥರು ಇದ್ದಾರೆ. ನನ್ನನ್ನು ಈ ಕೆಲಸಕ್ಕೆ ತಗಲು ಹಾಕಿದವರ ಜಾಣ್ಮೆಗೆ ಮರುಳಾಗಿ ಎಂಬಂತೆ ನಾನು ಅವರ ವಿಷಯದಲ್ಲಿ ನಾಲ್ಕು ಪಂಕ್ತಿ ಬರೆಯುತ್ತಿದ್ದೇನೆ. ಅವರೊಂದಿಗೆ ಓಡಾಡುತ್ತಿರುವವರಲ್ಲಿ ನನ್ನ ಪುಣ್ಯವಶಾತ್ ನಾನೂ ಒಬ್ಬ ; ಅಷ್ಟರಿಂದಲೇ ಹಿಗ್ಗಿ ನಾನು ಈ ಕೆಲಸಕ್ಕೆ ತೊಡಗಿದ್ದೇನೆ. ನನಗೆ ಈ ಲೇಖನದಿಂದ ಬರಬೇಕಾದುದು ಕೀರ್ತಿಯಲ್ಲ; ಉಳಿಯಬೇಕಾದುದು ನನ್ನ ಸ್ವಂತ ಮರ್ಯಾದೆ! " ವಿ. ಸೀ " ಅವರು ಕವಿಗಳು, ಗ್ರಂಥಕರ್ತರು, ಉತ್ತಮ ವಾಗ್ಮಿಗಳು. ಅದಕ್ಕಿಂತ ಹೆಚ್ಚಾಗಿ ಅವರು ಅಪ್ಪಟ ರಸಿಕರು. ಎಲ್ಲಕ್ಕೂ ಮಿಗಿಲಾಗಿ ಅವರ ಹೃದಯವೇ ಮಾನವತೆಯ ಪ್ರೇಮಮಯ ಸಿಂಹಾಸನದಂತಿದೆ. ಈ ಮೂರನೆಯ ಗುಣದಿಂದ ಅವರ ವ್ಯಕ್ತಿತ್ವಕ್ಕೆ ವಿಶೇಷ ತೇಜಸ್ಸು ಬಂದಿದೆ. ಅವರನ್ನು ಬಲ್ಲವರು ಇದನ್ನು ಕಂಡಾರು! ಕೇವಲ ಪುಸ್ತಕ ಬರೆದು ಒಂದು ದೇಶ ಉದ್ಧಾರವಾಗಿಲ್ಲ, ಉಪನ್ಯಾಸದಿಂದಲೇ ಒಂದು ಜನಾಂಗ ಉದ್ಧಾರವಾಗಿಲ್ಲ, ಅದರ ಉತ್ತಮ ಸಂಸ್ಕೃತಿಯಿಂದ, ಅದು ತಲೆಯೆತ್ತಿ ಬಾಳುತ್ತದೆ. ಸಾಹಿತ್ಯ ಪ್ರಪಂಚದಲ್ಲಿ ಅಂಥ ಒಂದು ಉತ್ತಮ ಸಂಸ್ಕೃತಿಯ ಪ್ರತಿನಿಧಿಗಳು " ವಿ. ಸೀ. " ಅವರು.

ನನಗೆ ಅವರ ಪರಿಚಯ ಪ್ರಥಮತಃ ೧೯೩೬ ರಲ್ಲಿ ಬೆಂಗಳೂರಿನಲ್ಲಿ. ಅದಕ್ಕೆ ಪ್ರಬಲವಾದ ಒಂದು ಕಾರಣವೂ ಇತ್ತು. ಕವಿತೆ ಬರೆಯುವ ಚಾಳಿಯೊಂದಿಗೆ, ಮುಗಿಸಿದ ಕವಿತೆಯನ್ನು ಯಾರಿಗಾದರೂ ಓದಿ ಅವರ ಅಭಿಪ್ರಾಯ ಹೇಗೆ ಎಂಬುದನ್ನು ತಿಳಿದುಕೊಳ್ಳುವ ಪದ್ಧತಿಯೂ ಬರುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ ನನಗೆ. ಮೈಸೂರಿನಲ್ಲಿದ್ದಾಗ ' ತೀ.ನಂ.ಶ್ರೀ ' ಅವರಿಗೆ ನನ್ನಿಂದ ಹೀಗೆ ತೊಂದರೆ, ಕಾಲಹರಣ ಆಗಿರಬೇಕು. ಬೆಂಗಳೂರಿನಲ್ಲಿ ' ವಿ.ಸೀ.' ಅವರು ಸಿಕ್ಕಿದರು! ಸಿಕ್ಕಿದ

ರೊವಲ ಬೆಳಗಿನಲ್ಲೆ ವಿಶ್ವಾಸದಿಂದ ಒಳಗೆ ಕರೆದು ಹತ್ತಿರ ಕೂರಿಸಿಕೊಂಡು,
ನ್ನ ಪದ್ಯ–ಶಾನುಭೋಗರ ಮಗಳು–ಓದಿ ಓದಿಸಿ ನಕ್ಕು ಚೆನ್ನಾಗಿದೆ
ಂದರು. ಹೀಗೆ ಹತ್ತಾರು ಸಲ ಅವರನ್ನು ಕಾಣುವುದು, ಅವರ ಒಳ್ನುಡಿ
ುನ್ನು ಕೇಳುವುದು, ಕಬ್ಬನ್‌ಪಾರ್ಕ್, ಲಾಲ್‌ಬಾಗ್ ಸುತ್ತಿ ಮನೆಗೆ
ುರುವುದು –ಆ ಬಳಸಿನಲ್ಲಿ ಕವಿತೆಯ ವಿಷಯದಲ್ಲಿ ಅವರು ಇಲ್ಲಿ ಹೀಗಿದೆ,
ಲ್ಲಿ ಹಾಗಿದೆ, ನೋಡಿ ಎನ್ನುತ್ತಿದ್ದರೇ ವಿನಾ ಇದೇ ಸರಿ ಅದೇ ಸರಿ ಎನ್ನ
ಲ್ಲ. ಇಂದಿಗೂ ಅಷ್ಟೇ, ಮುಂದೆಯೂ ಅಷ್ಟೆ. ಅಂದಮಾತ್ರಕ್ಕೆ ಅವರ
ಭಿಪ್ರಾಯ ಏನಿರಬಹುದು ಎಂಬುದು ತಿಳಿಯುವಂತಿತ್ತು. ಹೂವಿನಲ್ಲಿ
ರಿಮಳವೆಷ್ಟಿದೆ ಎನ್ನುವುದನ್ನು ಅವರು ಬಲ್ಲರು, ನುಡಿದರೆ ಕುಂದು
ುಂದೀತು ಎನ್ನುವ ನವುರಾದ ಆಲೋಚನೆಯಿಂದ ಅವರು ಸುಮ್ಮನಿರು
ುದ್ದರು.

ಕಾಲಕ್ರಮೇಣ ಅವರು ನನ್ನ ಕವಿತೆಯ ವಿಷಯದಲ್ಲಿ—ಅದು ಹೊರ
ಾಗಿ ಬೆಳೆಯಲೆಂದು, ಬೇರೂರಿ ನಿಲ್ಲಲೆಂದು—ಅಲ್ಲೊಂದು ಮಾತು
ಲ್ಲೊಂದು ಹೋಲಿಕೆ ಕೊಡುತ್ತ ಬಂದರು; ಈಗಲೂ ಹಾಗೆಯೇ. ಈ
ಕ್ಕಿನಿಂದ ಮಾತ್ರ ಅವರ ವ್ಯಕ್ತಿತ್ವದ ಮೇಲೆ ಬೆಳಕು ಬೀರುವುದು ಈ
ರಿಚಯದ ಗುರಿ. ಅದನ್ನು ಅವರು ಆಡಿದ ಮಾತುಗಳಿಂದಲೇ ಚಿತ್ರಿಸು
ುದು ಇಲ್ಲಿನ ದಾರಿ.

"ವಿ. ಸೀ" ಅವರೊಂದಿಗೆ ನಾನು ಮಾತಾಡುವಾಗೆಲ್ಲ, ಅವರಿಂದ
ನಾದರೂ ಒಂದು ಹೊಸ ವಿಷಯವನ್ನು ತಿಳಿಯುವ ಕಡೆಗೇ ನನ್ನ ಗಮನ.
ಷ್ಟೋ ದಿನ, ಅವರು ಮೈಸೂರಿನಲ್ಲಿದ್ದಾಗ ಅವರ ಮನೆಗೆ ಹೋಗಿ, ಅಲ್ಲಿಯೇ
ಮಾತು ಈ ಮಾತಿನಲ್ಲಿ ಕಾಲಕಳೆದಿದ್ದೇನೆ. ಆ ನಡುವೆ 'ಎಲ್ಲಿ ಹೊಸ
ದ್ಯ?' ಎಂದು ಅವರು ಕೇಳಿದ್ದಾರೆ. ನಾನು ಅಳುಕಿನಿಂದಲೇ, ಜೇಬಿ
ಲ್ಲಿದ್ದ ಪದ್ಯವನ್ನು ತೆಗೆದು ಓದಿದ್ದೇನೆ. ನನ್ನ ಓದು ಅವರಿಗೆ ಹಿಡಿಸದೆ
ಾವೇ ಅದನ್ನು ಬಹುಚೆನ್ನಾಗಿ ಓದಿದ್ದಾರೆ; ಅವರು ಓದಿದಾಗ 'ಇದು ನನ್ನ
ದ್ಯವೇ?' ಎಂದು ಭ್ರಮೆ ನನಗೆ ಆಗಿದೆ. ಆಗಲ್ಲೇ ಎಲ್ಲಿ ಮತ್ತೆ ಲೇಖನಿ
ಳಿಸಿ ತಿದ್ದಬೇಕು ಎಂಬುದೂ ವಿಶದವಾಗಿದೆ. ನನ್ನ ಪದ್ಯ ಓದಿದಮೇಲೆ,
ತ್ತಿರದಲ್ಲೇ ಇರುವ ಪುಸ್ತಕ ಪಂಕ್ತಿಯಿಂದ ಒಂದನ್ನು ಎಳೆದು ಅಲ್ಲೊಂದು

ಪುಟ ಇಂಗ್ಲಿಷ್ ಕವಿತೆಯನ್ನು ಓದುವುದು ರೂಢಿ. ಒಂದು ಸಲ ನನ್ನ ವಿದ್ಯಾಗುರುಗಳಾದ ಶ್ರೀಯವರು ನಮ್ಮ ತರಗತಿಯಲ್ಲಿ Mathew Arnold ನ Rugby Chapel ಕವಿತೆಯನ್ನು ಓದಿದರು. ಆ ಓದುಗಾರಿಕೆ ನನ್ನ ಮನಸ್ಸಿನಲ್ಲಿ ನಿಂತಿದೆ. ಅದರ ವೈಖರಿಯೇ ಬೇರೆ, ಪ್ರಭಾವವೇ ಬೇರೆ. ಅಲ್ಲಿಂದೀಚೆಗೆ ನನಗೆ ಬಹು ಉತ್ಕೃಷ್ಟವಾದ ಇಂಗ್ಲಿಷ್ ಕವಿತೆಗಳ ಪರಿಚಯ ಸ್ವಲ್ಪಮಟ್ಟಿಗಾದರೂ ಆಗಿದ್ದರೆ ಅದು ವಿ. ಸೀ. ಅವರಿಂದ. ನನಗೆ Ascent of F-6 ನಾಟಕವನ್ನು ಅವರು ಮೊದಲಿಂದ ಕೊನೆಯವರೆಗೆ ಓದಿದರು. ನನ್ನ ಮನಸ್ಸಿನಲ್ಲಿ ಆ ಛಂದಸ್ಸಿನ ಛಾಯೆ ನೆಲಸಿತು. 'ಅಶ್ವತ್ಥಾಮನ್' ನಾಟಕವೆಂದರಂತೂ ಅವರಿಗೆ ಪ್ರಾಣ. ಅಷ್ಟೇಕೆ ಕಾಲೇಜ್ ಎದುರಿಗೆ ಹಾಸಿರುವ ಹಸಿರು ಬಯಲಿನಲ್ಲಿ ಒಂದು ಬೇಸಗೆಯ ಹಗಲಿನಲ್ಲಿ ಅವರು 'ಜ್ವಲಿಸುವ ವಸಂತವಿದೆ; ತಿಳಿನೀಲಿ ಗಗನವಿದೆ' ಎಂಬ ಹಾಡನ್ನು ನುಡಿದದ್ದು ನನ್ನ ಕಿವಿಯಲ್ಲಿ ಇನ್ನೂ ಹೊಳಲು ಗೊಡುತ್ತಿದೆ. ಎಲ್ಲಿ ಯಾವ ಪತ್ರಿಕೆಗಳಲ್ಲಿ ಯಾವ ಪದ್ಯ ಕಾಣಿಸಿದರೆ-ಅದು ಸ್ಯಾಜಿಟೇರಿಯಸ್‌ನದಾಗಲಿ, ಮೆಕ್ನೀಸ್‌ನದಾಗಲಿ, ಅಲ್ಲಿ ಅವರ ಕಣ್ಣು. ಅಂಥದು ನಮ್ಮಲ್ಲಿ ಬರಲಿ, ಬರಲಿಲ್ಲವಲ್ಲ ಅನ್ನುವ ತವಕ. ಹತ್ತಿರ ಬಂದ ತರುಣನ ಕಿವಿಯಲ್ಲಿ ಎದೆ ಯಲ್ಲಿ ಕವಿತೆಯ ಕೇಕೆಯನ್ನು ತುಂಬುವ ನಿರಂತರ ಪ್ರಯತ್ನ.

ಪದ್ಯವಷ್ಟೇ ಅಲ್ಲ; ರಕ್ತಪುಷ್ಟಿಯುಳ್ಳ ದೃಢಾಂಗವಾದ ಇಂಗ್ಲಿಷ್ ಗದ್ಯವೂ ಅವರಿಗೆ ತುಂಬ ಪ್ರಿಯ. ಗದ್ಯದ ಭಾಷೆ ಗಟ್ಟಿಮುಟ್ಟಾಗಬೇಕು ಎಂದು ಅವರ ಆಸೆ. ನಾನು ಅರ್ಥಶಾಸ್ತ್ರದ ವಿದ್ಯಾರ್ಥಿಯಲ್ಲದಿದ್ದರೂ, ಅವರು ನನಗೆ ದಿವಂಗತ ಕೀನ್ಸ್‌ರವರ ಗ್ರಂಥಗಳಿಂದ ಕೆಲವು ಪಂಕ್ತಿಗಳನ್ನು ಬಹುಸಂತೋಷದಿಂದ ಓದಿದ್ದಾರೆ. ಆ ಗದ್ಯದ ಜೀವಗುಣವನ್ನು ನಾನು ಕಾಣಲೆಂದು ಮತ್ತೆ ಮತ್ತೆ ಓದಿದ್ದಾರೆ. ನಾನು ಗುರುದಕ್ಷಿಣೆ ಕೊಡದೆ ಹಾಜರಾತಿ ಹಾಕದೆ ಇವರಲ್ಲಿ ನಿರಂತರ ವಿದ್ಯಾರ್ಥಿಯಾಗಿದ್ದೇನೆ. ನನ್ನ ಕವಿತೆಯ ವಿಷಯದಲ್ಲಿ ನಿರ್ದಾಕ್ಷಿಣ್ಯವಾಗಿ ಟೀಕೆ ಮಾಡುವ ಸ್ವತಂತ್ರತೆ ಇವರಿಗಿದ್ದರೂ ಇವರು ಅದನ್ನು ಬಳಸುತ್ತಿಲ್ಲ. ನಾನು ಕಂಡಂತೆ ಇವರು ವಿಮರ್ಶೆಯಲ್ಲಿ ಅಹಿಂಸಾವಾದಿಗಳು. ಕನ್ನಡ ಕವಿತೆಯಲ್ಲಿ ಕನ್ನಡ ಭಾಷೆ ಹೆಚ್ಚಾಗಿ ಬರಬೇಕು, ಸಂಸ್ಕೃತವನ್ನೇ ಅತಿಯಾಗಿ ತುಂಬಿದ ಮೇಲೆ ಅದನ್ನು

ಕನ್ನಡ ಕವಿತೆಯೆಂದು ಕರೆದರೆ ಏನು ಲಾಭ? ಎಂಬ–ನನ್ನ ಈ ಪ್ರಶ್ನೆಯನ್ನೂ ಇವರು ಒಪ್ಪುವುದಿಲ್ಲ, 'ನೀವು ಒಲ್ಲದ ಕವಿತೆ ನಿಮ್ಮ ರೀತಿಯಲ್ಲಿಲ್ಲ ಬಿಡಿ' ಅನ್ನುತ್ತಾರೆ. ಹಾಗೆಯೇ ಅದರ ಗುಣಗಳನ್ನು ವರ್ಣಿಸಿ ಅದೂ ಒಳ್ಳೆಯ ಕವಿತೆಯೆಂದು ಸಾಧಿಸುತ್ತಾರೆ. ನನಗೆ ಏನು ತೋರುತ್ತದೆ ಅಂದರೆ ಇವರು ಒಳ್ಳೆಯದಲ್ಲ ಎಂದು ತಳ್ಳಿ ಬಿಡುವ ಕವಿತೆ ಇನ್ನೂ ಹುಟ್ಟಿಲ್ಲವೇನೊ! ಎಲ್ಲದ ರಲ್ಲೂ ಗುಣವನ್ನು, ಇರುವಷ್ಟನ್ನು ಗ್ರಹಿಸುತ್ತಾರೆ. ನನ್ನಂಥವರಿಗೆ ಈ ತಾಳ್ಮೆ ಹಿಡಿಸದು; ನಮ್ಮ ಒರಟು ಉತ್ಸಾಹ ಅವರಿಗೆ ಒಪ್ಪದು. ಅವರ ದಾರಿಯೇ ಸರಿಯೇನೋ ಎಂದು ನನಗೆ ತೋರುತ್ತದೆ.

ನನ್ನ 'ತುಂಗಭದ್ರೆ' ಎಂಬ ಕವಿತೆ ಇವರಿಗೆ ಪ್ರಿಯ; ಮೊದಲಸಲ ಅದನ್ನು ಇವರು ಓದಿದರು; ಅದರ ಮುಕ್ತಾಯ ಅಸಿರ್ದಿಷ್ಟವಾಯಿತು ಎಂದು ಟೀಕೆ ಮಾಡಿದರು. ಆ ರೀತಿ ಆಯಿತು, ನಿಜ; ನಾನು ಅದನ್ನು ತಿದ್ದು ವುದಕ್ಕೆ ಮನಸ್ಸು ಕೊಡಲಿಲ್ಲ. ನನ್ನ "ಚಿಂತೆಗೆ ಕಣ್ಣ ತೆತ್ತವಳೆ" ಎಂಬ ಸಾಂಗತ್ಯವನ್ನು ನಾನು ಬೆಂಗಳೂರಿನಲ್ಲಿ ಇವರಿಗೆ ತೋರಿಸಿದೆ; ಇವರೂ ಹಾಡಿ ಒಪ್ಪಿದರು. ಆದರೆ ಮತ್ತೆ ಅದೇ ಆಕ್ಷೇಪಣೆ ಒಳ್ಳೆಯ ಅರ್ಥದಲ್ಲಿ- "ಹಾಡಿನ ಕಡೆಯ ಸಾಲೆರಡು ನಾನೆಂದಿಗೂ ಹೇಳುವಂತೆ ನೀವು ಪದ್ಯ ಗಳನ್ನು ಮುಗಿಸಿಬಿಡುವ ಆತುರ ಅವಾಂತರಗಳಿಗೆ ಸಾಕ್ಷಿ". ನನ್ನ ತಪ್ಪು ನನಗೆ ವಿಶದವಾದದ್ದು ಇವರ ಟೀಕೆಗಳಿಂದ; ನನ್ನ ಕೃತಿಗಳ ವಿಷಯದಲ್ಲಿ ನಾನು ಹೇಗೆ ಎಚ್ಚರದಿಂದ ನಡೆಯಬೇಕು ಎಂಬುದು ತಿಳಿದದ್ದು ಇವರ ರಚನಾತ್ಮಕ ಸಲಹೆಗಳಿಂದ. ಕಾಲ ಕ್ರಮೇಣ ನಾನೇ ತಿಳಿಯಬಹುದಾಗಿದ್ದ ನನ್ನ ಕುಂದು ಕೊರತೆಗಳನ್ನು ಹೀಗೆ ಅಷ್ಟು ಬೇಗನೆ ತಿಳಿಯುವುದು ಸಾಧ್ಯ ವಾದ್ದರಿಂದ ನನಗೆ ಲಾಭವಾಯಿತೆಂದು ಹೇಳಬೇಕಾಗಿಲ್ಲ. ನನ್ನ ಕವಿತೆಯ ಕುಂದುಕೊರತೆಯ ಕಡೆಗೆ ಬೆರಳು ತೋರಿಸುತ್ತಿದ್ದರೂ, ಇವರು ಮೆಚ್ಚಿದ ಕೃತಿಗಳನ್ನು ಕುರಿತು ಎಷ್ಟು ರಸಿಕತೆಯಿಂದ ನುಡಿಯುತ್ತಾರೆ ಎಂಬುದಕ್ಕೆ ಇವು ಸಾಕ್ಷಿ: ನನಗೆ ಬಂದ ಅವರ ಕಾಗದಗಳಿಂದ :—

ನನ್ನ 'ಅನ್ನಪೂರ್ಣೆ'ಯನ್ನು ಕುರಿತು; "ನಿನ್ನೆ ಸಂಜೆ ಏನೋ ಮನಸ್ಸಿನಲ್ಲಿದ್ದಾಗ್ಗೆ ಪುನಃ ನಿಮ್ಮ "ಕಣ್ಣೆಲ್ಲೋ ಎತ್ತರದಲಿ ತುಟಿ ದುಃಖದ ಬಿರುಕು" ಮೇಲೆ ಮೇಲೆ ನೆನಪಾಯಿತು. ಒಂದು ಸಲ ಹೇಳಿಕೊಳ್ಳುವಾಗ

ದುಃಖದಲ್ಲಿನ **ವಿಸರ್ಗ** ಎದ್ದು ಕೊರಳಿಗೆ '**ಒಲ್ಕೆ**' ಬಂದು ಉಸಿರು-ಎದೆ ಕಟ್ಟಿತು. ನೆನಪಿನಲ್ಲಿ ಈ ಕಾಗದ. [ಚಿಕ್ಕಮಗಳೂರು : ೮-೧೨-೧೯೪೮].

ನನ್ನ 'ಉಂಗುರ' ಕವನ ಸಂಗ್ರಹವನ್ನು ಕುರಿತು: Your ಉಂಗುರ is before me. Some I know and have expressed my response to you on them. I need not speak about them. Of those with which I was not acquainted I particularly like ಪ್ರಥಮ ರಾಜನಿಗೆ. It is a triumph. Even 'ಮನೆಗೆ ಬಂದ ಹೆಣ್ಣು' is lovely. [ಚಿಕ್ಕಮಗಳೂರು ೧೮-೧-೧೯೫೦].

ನನ್ನ 'ಇರುವಂತಿಗೆ' ಕವನ ಸಂಗ್ರಹವನ್ನು ಕುರಿತು:

"ಪ್ರೇಮದ-ಅದರ ವಿರಸದ-ಚಿತ್ರಗಳು ನಿಮ್ಮ ಎಂದಿನ ಕೈವಾಡಕ್ಕೆ ಮಾತ್ರ ಸಾಧ್ಯವಾದುವು. ಆ ನಯದ ಜಾಣತನದ ವಿಲಾಸ ಬೇರೊಬ್ಬರಿಗೆ ಬಾರದು. ಒಳ ಜೀವಾಳ ಧ್ವನಿಯ ತೆರೆಗಳೂ ಹಾಗೆಯೇ. "ಅಕ್ಕಿಯಾರಿಸುವಾಗ"— ಪದ್ಯ ಚೆನ್ನಾಗಿದೆ. ಮೊದಲೆರಡು ಸಾಲಿನ ಸಿರಿತನದ ಕೊರೆ ಮುಂದಿನ ಭಾಗಗಳ ಸಂಪತ್ತಿನಲ್ಲಿ ತೇಲಿ ಮಾಯವಾಗುತ್ತದೆ. ಬಳೆ, ಬೆರಳು, ಹರಳು ಮರುಳು ಮಾಡುತ್ತವೆ. ಜಲ್ಲೆನುವುದು ಓದುವವರ ಎದೆ. ಇಷ್ಟು ಅಲ್ಪಾವಕಾಶದಲ್ಲಿ ಈ ಮೋಹನವನ್ನು ಇನ್ನಾರು ಕವಿಸಿ ಸೆರೆ ಹಿಡಿದಾರು! ಪದ್ಯದ ಕುಂದಣ ಅಚ್ಚುಕಟ್ಟು ನಿಮ್ಮವೇ. [ಬೆಂಗಳೂರು : ೨೯-೨-೧೯೫೨]

The hard core of your spirit can build up stronger structures and sustain you on heights like 'ಪ್ರಥಮ ರಾಜನಿಗೆ'....The Masti sonnet is extremely good. The triumph is scored on the upturned ಮೂಗಿಂಗೆ, which is superb, a stroke of genius. But my feeling still is that the secret of the sonnet is still not pierced into.

The rhymes must be organic and record the progress and movement patterns of the thought and theme. It must close naturally, not be forced. Meaning, rhythm, rhyme, pause, line should gather quickly but effectively into the final stop. Else its natural integrity is un-

achieved. It is hard. But your sonnet is not bad, however, even that way. [ಬೆಂಗಳೂರು ೧೯-೩-೫೩].

ಅವರ ಕಾಗದಗಳಿಂದಲೇ ಕೆಲವು ಪಂಕ್ತಿಗಳನ್ನು ಕಾಣಿಸಿದ್ದೇನೆ, ತರುಣರೂ ಉತ್ಸಾಹಿಗಳೂ ಆದ ಬರಹಗಾರರ ವಿಷಯದಲ್ಲಿ ಅವರ ಹೃದಯ ವೀಣೆ ಹೇಗೆ ತುಡಿಯುತ್ತದೆ ಎಂಬುದನ್ನು ಗುರುತಿಸಲು ಮಾತ್ರ. ಅವರು ಇಂದಿನ ಕವಿತೆಯನ್ನು ಬಲ್ಲವರು, ಸ್ವತಃ ಕವಿಗಳು. ಹಳೆಯ ಕವಿತೆಯ ಅನುಕರಣ ಹಳೆಯ ಛಂದಸ್ಸಿನ ಚೌಕಟ್ಟಿನಲ್ಲಿ ಹೊಸ ಸಾಮಗ್ರಿಯನ್ನಿಡುವುದು ಇವು ಅವರಿಗೆ ಸಾಲದೆಂದೇ ನನ್ನ ನಂಬಿಕೆ. ಅವರ ಮನಸ್ಸಿನಲ್ಲಿ ಮೂಡಿರುವ ಎತ್ತರವಾದ ಧೀರವಾದ ಪ್ರಚಂಡ ಕವಿತೆಯ ರೂಪರೇಖೆಗಳನ್ನು ನೆನೆದರೆ ಆ ಕನಸು ಈ ಕಾಲಕ್ಕೆ ಒಲಿದೀತೇ ಅನ್ನಿಸುತ್ತದೆ. ಆದರೂ ಅದರ ನೆನಪಿನಲ್ಲಿ ಮುಂದೆ ಸಾಗಿದರೆ ದಾರಿ ವಿಶಾಲವಾದೀತು, ಕಾವ್ಯದ ಅಮರಾವತಿ ಹತ್ತಿರವಾದೀತು. ನನ್ನ ಕವಿತೆಗಳ ವಿಷಯದಲ್ಲಿ ಅವರು ನುಡಿದಿರುವ ಒಂದೆರಡು ಮಾತುಗಳಿಂದ ನನಗೆ ಒಂದಿಷ್ಟು ಒಳ್ಳೆಯದಾಗಿದೆ. ಅವರ ಕಣ್ಮರೆಯಲ್ಲಿ ನನ್ನ ಕೃತಿಗಳನ್ನು ನಾನೇ ವಿಮರ್ಶಿಸಿಕೊಂಡು ಸಾಗುವುದು ಅಭ್ಯಾಸವಾಗುತ್ತಿದೆ.

ಲೋಕದಲ್ಲಿ ಕೆಲವರು ಕವಿತೆಯ ವಿಷಯ ತಮಗೇಕೆ ಎಂದು ಸುಮ್ಮನಿದ್ದು ಬಿಡುತ್ತಾರೆ. ಇನ್ನು ಕೆಲವರು ತಮಗೆ ಒಪ್ಪಿತವಾದದ್ದೇ ಕವಿತೆ ಎಂದು ಸಾರಿಕೊಳ್ಳುತ್ತಾರೆ. ಕವಿತೆಯ ಗುಟ್ಟು ಇವರಿಗೆ ತಿಳಿಯದು. ಅದನ್ನು ತಿಳಿದವರು ತಮ್ಮ ಸೂಚನೆಗೆ ಓಗೊಡುವ ತರುಣ ಬರಹಗಾರರಿಗೆ ರಚನಾತ್ಮಕವಾದ ಉತ್ತೇಜನವನ್ನು ಕೊಡಬೇಕು; ಈ ಗುಣಕ್ಕೆ "ವೀ. ಸೀ." ಅವರ ಭಾಷೆಯಲ್ಲಿ 'Midwifery' ಎಂದು ಹೆಸರು.

ಸಮಕಾಲೀನ ವಿದ್ವತ್ಕವಿ ಎಜ್ರಾಪೌಂಡ್ ವಿ. ಸೀ. ಅವರಿಗೆ ಮೆಚ್ಚಾದ ಕವಿ. ಅವರಿಂದ ನನಗೆ ಬಂದ ಕಾಗದ :

"Faber publishes 'the Letters of Ezra Pound' by Paige. Hunt out for it in the library and read it. It is an exhilarating book. I know it is such seminal stuff that will make for real creativity. He is a phenomenon.

[ಬೆಂಗಳೂರು ೨೯-೭-೫೨]

ನಾನು ಆ ಪುಸ್ತಕವನ್ನು ಓದಿ ಅವರಿಗೆ ಬರೆದ ಕಾಗದಕ್ಕೆ ಉತ್ತರ ಇದು :

"I was on edge to hear from you how you reactcd to E. P. E. P. is a fresh water bath and is a thing to be grateful for—I am glad to see us agreeing on the details also. Your statement quoting "until some one is honest, we get nothing clear" has its parallel to a rally by T. E. Hulme some 30 years ago making a major esponse to a similar observation made by Pound.

ಎಜ್ರಾ ಪೌಂಡ್ ಹೊಸಮಾರ್ಗವನ್ನು ತೆರೆದುದು ಅಷ್ಟೇ ಅಲ್ಲದೆ ಚೀನಾ ಸಾಹಿತ್ಯದ ಅನೇಕ ರತ್ನಗಳನ್ನು ಬೆಳಕಿಗೆ ತಂದು ಲೋಕದ ಕೃತಜ್ಞತೆಯನ್ನು ಗಳಿಸಿದ್ದಾರೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮಾರ್ಗದರ್ಶನಕ್ಕಾಗಿ ಹಂಬಲಿಸುತ್ತಿರುವ ತರುಣರಿಗೆ ಪುಷ್ಟಿಯಾದ ಸಲಹೆ, ಬೆಂಬಲ ಬೇಕಾದಷ್ಟು ಬೇಕು. "ಮಹಾ ಕವಿಗೆ ಮಾರ್ಗವನ್ನು ತೋರಿಸಿಕೊಡುವವರು ಯಾರು ?" ಎನ್ನಬಹುದು. ಮೂಲವಸ್ತು ಬಂಗಾರವಿದ್ದರೂ, ಅದು ಆಭರಣವಾಗಬೇಕಾದರೆ ಇತರ ಶಕ್ತಿಗಳ ವ್ಯವಹಾರ ಬೇಕಲ್ಲವೆ ? ಇಂಥ ಸಮಯದಲ್ಲಿ ಬೆಂಬಲ ನೀಡುವವರೆಲ್ಲ ಗುರುಗಳು.

ಮಾರ್ಗದರ್ಶನವನ್ನು ಬಯಸುವ ತರುಣ ಕವಿಗಳಲ್ಲಿ ನನ್ನ ಅರಿಕೆ; ಇಂದಿನ ಸಾಹಿತ್ಯ ಪ್ರಪಂಚದಲ್ಲಿ "ವಿ. ಸೀ." ಅವರ ಸ್ಥಾನವೇನೆಂಬುದನ್ನು ನೀವೇ ಯೋಚಿಸಿ. ಈ ಕೆಳಗೆ ಕಾಣಿಸಿರುವ ಮಾತುಗಳಿಂದ ಅಳೆದು ಸುರಿದು ನಿರ್ಧರಿಸಿ:—

ಇನ್ನು ನೂರು ಕವಿತೆಗಳನ್ನು ವರ್ಷಕ್ಕೆ ಬರೆಯಬಲ್ಲ ಶಕ್ತಿ ಇರುವವರಿಗೆ ಯೋಚನೆಯೇಕೆ ? ಬೇಗ ಬರಡಾಗುವ ಹಸುಗಳಿಗೆ ಭೀತಿ; ಸಂತತವಾಗಿ ಕರೆಯುವ ಕಪಿಲೆಗೆ ಚಿಂತೆ ಬೇಡ.

ಮೆಣಸಿನಕಾಯಿಯ ಸಾರ ಸಿಹಿಯಾಗಬಲ್ಲದೆಂದು ಲೌಕಿಕರಿಗೆ ತಿಳಿಸುವುದು ಹೇಗೆ ? ಜೀವದ ಸವಿ ಹೇಗೆ ಹೊಮ್ಮಬೇಕೋ ಯಾರು ಬಲ್ಲರು ? ಹಾಡಿಕೊಳ್ಳುವ ಹಾಡಾಗಿ, ನಿರ್ಮಿಸುವ ಕೃತಿಯಾಗಿ ಹೀಗೆ ಬರುವುದು ಜೀವಕ್ಕೂ ಒಳಿತು, ಲೋಕಕ್ಕೂ ಒಂದು ಸಿರಿ.

ಎರಡು ಕವನ ಸಂಗ್ರಹಗಳನ್ನು ಕುರಿತು

ಇವೆರಡೂ* ಕವನ ಸಂಗ್ರಹಗಳು. ಕನ್ನಡ ಕವಿತೆಗಳಿಗೆ ಅಷ್ಟೇನೂ ಕೊರತೆ ಇಲ್ಲದ ಈ ಕಾಲದಲ್ಲಿ ಸಹ ಕನ್ನಡ ಕವಿಗಳ ಸಂಖ್ಯೆ ಅಷ್ಟಾಗಿ ಕಡಮೆ ಎಂದರೆ ತಪ್ಪಾಗಲಾರದು. ದಿನ ವಾರ ಮಾಸಪತ್ರಿಕೆಗಳಲ್ಲಿ ಸಂತತವಾಗಿ ಕಂಗೊಳಿಸಿ ವಿಮರ್ಶೆ ವಿಸ್ತರಣಗಳಿಗೆ ಆಸ್ಪದವಿಲ್ಲದೆ ನಷ್ಟವಾಗುವ ಕವಿತೆಗಳೇ ಹೇರಳ. ಮಿಣುಕಿ ಆರುವ ಹಣತೆಗಳೇ ಬಹಳ; ನಂದಾದೀಪಗಳು ವಿರಳ. ಹೊಸ ರೀತಿಯಲ್ಲಿ ಬರೆಯುವ ಹಳೆಯ ಕವಿಗಳಿದ್ದಾರೆ; ಇನ್ನೂ ಹಳೆಯ ರೀತಿಯನ್ನು ಬಿಡದ ಹೊಸ ಕವಿಗಳು ಬರುತ್ತಲೇ ಇದ್ದಾರೆ. ಎಲ್ಲ ಕವಿಗಳಿಗೂ ಪತ್ರಿಕಾ ಪ್ರೋತ್ಸಾಹ ಅಗತ್ಯ; ಆದರೆ ಪುಸ್ತಕರೂಪದಲ್ಲಿ ಬಾರದ ಕವಿತೆಗಳಿಂದ ಕವಿಯ ವ್ಯಕ್ತಿಪರಿಚಯ ಸಾಧ್ಯವಿಲ್ಲ. ಮಾಲೆಗಟ್ಟುವುದರಲ್ಲಿ, ವಿವಿಧತೆಯೊಂದೇ ಸಾಧ್ಯವಾಗಿ, ಒಂದೇ ಪಕ್ವತೆಯ ಕವಿತೆಗಳು ಬರಲಾರವೆಂಬ ಬಿನ್ನಾಣದಿಂದ ಕವನಸಂಗ್ರಹಗಳು ಸಮೃದ್ಧಿಯಾಗಿ ಬರುತ್ತಿಲ್ಲವೇನೊ? ಅದು ದೋಷವೂ ಅಲ್ಲ; ಜೀವನವೇ ಹಾಗೆ; ಕವಿತೆ ಅದರ ಹಾಗೆ. ಅಂತೂ ಕವಿಯ ಮನೋಧರ್ಮ ಹೇಗೆ ರೂಪುಗೊಳ್ಳುತ್ತಿದೆ ಎಂಬುದನ್ನು ತಿಳಿಯುವುದಕ್ಕೆ ಬಿಡಿ ಕವನಗಳಿಗಿಂತ ಕವನಸಂಗ್ರಹಗಳು ಅಗತ್ಯ. ಹೊಸತಾಗಿ ಕಾವ್ಯಭೂಮಿಗೆ ಬರುತ್ತಿರುವ ಕವಿಗಳನ್ನು ಗುರುತಿಸಿ ಸ್ವಾಗತಿಸುವ ಕಾರ್ಯ ಹೃದ್ಯವಾದುದೇ ಸರಿ.

ಕವಿತೆ ಜಡವಸ್ತುವಲ್ಲ; ಯಾವುದೋ ಕಾಲದಲ್ಲಿ ಯಾವನೋ ಒಬ್ಬ ಪುಣ್ಯಪುರುಷ ಅಕಸ್ಮಾತ್ತಾಗಿ ಕಟ್ಟಿಬಿಡುವ ಆಶ್ಚರ್ಯಮಂದಿರವಲ್ಲ ಅದು. ಮನುಷ್ಯನ ಕಣ್ಣು, ನಾಲಗೆ, ಕಿವಿ, ಮನಸ್ಸು, ಉಸಿರು, ಸಂತತವಾಗಿ ಕಟ್ಟುತ್ತಿರುವ ಬಯಕೆ, ಹರಕೆ ಹಾರೈಕೆಗಳ ಸೌಂದರ್ಯದ ಬಳುವಳಿ ಅದು. ಅದು ಮುಟ್ಟಿದ ಮೂಲೆ, ಸೋಕಿದ ಸೀಮೆಯ ಸೆರಗು, ಬಂಗಾರವಾಗುತ್ತದೆ. ತಮ್ಮ ತಮ್ಮ ರೀತಿಯಲ್ಲಿ ಕವಿತೆಯನ್ನು ಒಲಿಸಿಕೊಳ್ಳುವ ಕವಿಗಳೆಲ್ಲರೂ

---

* **ಜಲಪಾತ**–ಕಾವ್ಯಾನಂದ (ಸಂಧ್ಯಾ ಸಾಹಿತ್ಯಮಾಲೆ, ಹೈದರಾಬಾದು). **ಹಾಲು ಹಣ್ಣು**–ಭುಜೇಂದ್ರ ಮಹಿಷವಾಡಿ (ಶಾಂತಿ ಸೇವಾಸದನ, ಸೇಡಬಾಳ).

ಧನ್ಯರೇ. ಪಕ್ಷಪಾತಕ್ಕೆ ತಾತ್ಕಾಲಿಕ ಕಾರಣಗಳಿದ್ದಾವು ; ಅಷ್ಟುಮಾತ್ರಕ್ಕೆ ಕವಿ ಅವರಿವರ ಕರುಣೆಗೆ ತುತ್ತಾದ ಕುರಿಮರಿ ಎಂದಲ್ಲ ಅಭಿಪ್ರಾಯ. ಹೃದಯವಂತನಾದ ವಿಮರ್ಶಕ ಕವಿಗೆ ಯಾವ ಅರ್ಥದಲ್ಲೂ ವಿರೋಧಿಯಲ್ಲ ಎಂಬುದು ಸ್ವತಃ ಸಿದ್ಧವಾದ ವಿಷಯ. 'ಕಾವ್ಯಾನಂದ'ರನ್ನೂ ಭುಜೇಂದ್ರರನ್ನೂ ಅವರ ಕವನಸಂಗ್ರಹಗಳಿಗಾಗಿ ಅಭಿನಂದಿಸಲೇ ಬೇಕು. ಬೇಂದ್ರೆಯವರ ಮುನ್ನುಡಿಗಳು ವಿಸ್ತಾರವಾಗಿಯೇ ಇವೆ: ವಿಮರ್ಶಾತ್ಮಕವಾಗಿಯೂ ಇವೆ. ಅಷ್ಟೇ ಅಲ್ಲ, ಉತ್ತೇಜಕವಾಗಿಯೂ ಇವೆ. ಇದರಿಂದ ವಿಮರ್ಶೆಯ ಕೆಲಸ ಹಗುರವಾಗಿದೆ. ಒಳ್ಳೆಯ ಸಂಪ್ರದಾಯವಿದು !

'ಜಲಪಾತ'ದಲ್ಲಿ ರಾಜಕೀಯ ಸಾಮಾಜಿಕ ವಿಷಯಗಳಿಗೆ ಪ್ರಧಾನತೆ ಕಾಣುತ್ತಿದೆ; ಅಶಾಂತಿ ಇದೆ. 'ಹಾಲು-ಹಣ್ಣೆ'ನಲ್ಲಿ—ರಾಜಕೀಯ ಧ್ವನಿ ಇಲ್ಲ ಎಂದಲ್ಲ—ಜನದುಸಿರು, ಪ್ರೇಮಕೂಜನ, ಆದರ್ಶಾರಾಧನೆ, ಮೃದು ಸುಂದರ ಭಾವ ನಿರೂಪಣೆ—ಇವುಗಳಿಗೆ ಹೆಚ್ಚು ಪ್ರಮುಖತೆ: ಶಾಂತಿಗೆ ಮನ್ನಣೆ.

ಕಾವ್ಯವಸ್ತುವಿನ ಪ್ರಶ್ನೆ ಎಂದೂ ಅಷ್ಟು ಮುಖ್ಯವಲ್ಲ; ಹಿಡಿದ ವಸ್ತು ಕವಿತೆಯಾಯಿತೆ ಎಂಬುದು ಅತಿ ಮುಖ್ಯ ವಿಷಯ; ಅದು ವರಿಸಿದ ರೀತಿಯಲ್ಲಿ ಸಿದ್ಧಿಪಡೆಯಿತೆ ಎಂಬುದಂತೂ ಅತ್ಯಂತ ಮುಖ್ಯ ವಿಷಯ. ಈ ದೃಷ್ಟಿಯಿಂದ ಇವೆರಡು ಕೃತಿಗಳನ್ನೂ ಕುರಿತು ಒಂದೆರಡು ಮಾತು ಹೇಳಿದೆ.

ಜಲಪಾತ ಕೇವಲ ಬೀಳು-ನೀರಾಗದೆ ಜ್ವಾಲೆಯನ್ನೂ ಚಾಚುತ್ತಿದೆ; ಮೇಲಷ್ಟು ಹೊಗೆಯೂ ಕಾಣುತ್ತಿದೆ. ಅಬ್ಬರ ಬೇಕಾದಷ್ಟಿದೆ. ಪ್ರಾರಂಭದ ಕವನಗಳ ಪ್ರತಿನಿಧಿಯಾಗಿದೆ '**ಅಬ್ಬರದ ತಡಸಲು**'. ಶೈಲಿಯಲ್ಲಿ ರಭಸವಿದೆ ; ಮಾತು ಕೊಚ್ಚಿ ಬರುತ್ತವೆ.

ಧುಮ್ಮಿಕ್ಕಿ ಹಾರುವೆನು ಧೀಂಕಿಡುತ ಓಡುವೆನು
ಎದುರಾದುದನು ಕೊಚ್ಚಿ ಹುಚ್ಚು ಹೊನಲಾಗಿ;—

ಅದೂ ಆಗಬಹುದು.

ನಾ ನಿಸರ್ಗದ ಭೇರಿ ಕಾನನದ ತುತ್ತೂರಿ ;
ನಾನು ನಡೆದುದೆ ದಾರಿ ;—

ಇದೂ ಆಗಬಹುದು.

ನಾ ಗೈದ ನಾಶದಲೆ ಮುಂದಿನ ವಿಕಾಸವಿದೆ ;—

ನಾಶವೆಲ್ಲಿ ಬಂತು !—ಆದರೂ ಈ ಮಾತು ಅರ್ಥವಾಗುತ್ತದೆ.

'ನನ್ನ ಬರಿ ಜರೆಯುವೆಲ್ಲೆ ನನ್ನ ವಶಪಡಿಸಿಕೊಳಿ'

ಇದೇನಸಾಧ್ಯವಲ್ಲ, ಅಟಾಮಿಕ್—ಶಕ್ತಿಯನ್ನೇ ವ್ಯವಸಾಯ ವಾಣಿಜ್ಯ ಲಾಭಗಳಿಗೆ ತಿರುಗಿಸುತ್ತಿರುವ ಧನ್ಯರಿಗೆ. ಆದರೆ, 'ಮಾಡಿ ನೋಡಿರಿ ನನ್ನ ಶಕ್ತಿ ಫಲಕಾರಿ' ಎಂದು ಮುಗಿಯುವಲ್ಲಿಗೆ ಕವಿತೆ ನಿಜವಾಗಿ ನಿಂತಿತೆ? ಅದು ಸಹಜವಾದ ನಿಲುಗಡೆಯೆ? ಈ ಸಂಶಯ ಉಳಿಯದೆ ವಿಧಿಯಿಲ್ಲ. ಇದು ಕಿವಿಯ ತೀರ್ಮಾನಕ್ಕೆ ಸೇರಿದ ವಿಷಯ.

ಇನ್ನೊಂದು ಕವನ ಪ್ರಾಸಾನುಪ್ರಾಸತರಂಗಿಣಿಯಾಗಿ ಬರುವ **ಮಾನವ ಸಮಾಜ**—

ರಂಗುರಂಗಿನ ಬೆಡಗ ತೊಟ್ಟು ಜಗದಂಗಳದ
ರಂಗಿನಲಿ ವಿವಿಧಭಂಗಿಯಲಿ ಜನಜಂಗುಳಿಯ
ಅಂಗಗಳ ತುಳಿತುಳಿದ ರಿಂಗಣಗುಣಿಯುತಿಹ....

ಎಂದು ಮೊದಲಾಗುವ ಚರಣಗಳು ಎಷ್ಟು ಶಕ್ತಿಯುಕ್ತವಾಗಿವೆ. ಇಷ್ಟು ಅನಾಯಾಸವಾಗಿ ಸುಲಭವಾಗಿ ಸುಂದರವಾಗಿ ಬರುವ ಕವಿತೆ ಅಪೂರ್ವ. ಕವಿ ಇಲ್ಲಿ ಒಳ್ಳೆಯ ಕಾವ್ಯಶಕ್ತಿಯನ್ನೇನೋ ಪ್ರಯೋಗಿಸಿದ್ದರೂ, ಮಾನವ ಸಮಾಜವನ್ನು 'ರೂಪಮತಿಯಾದರೂ ನೀನು ಪಾಪಮತಿ' ಎಂಬ ಪಲ್ಲವಿಯ ಅಣಕು ವಿಚಿತ್ರವಾಗಿಯೇ ಉಳಿಯುತ್ತದೆ. ಕವಿತೆಗಾದರೂ, ಒಂದು ಗಳಿಗೆಯ ಮನೋಭಾವಕ್ಕಾದರೂ ಇಷ್ಟು ಸಲ ಸಮಾಜವನ್ನು ನಿಂದಿಸುವುದರ ಅಗತ್ಯವಿರಲಾರದು. 'ಬಡವರ ಯುಗ' 'ನಿನ್ನಿರವೆ ನರಕ ಬಡವ'—ಈ ವರ್ಗದ ಕವನಗಳಿಗಿಂತ ಬಡವರ ಸ್ಥಿತಿ ಭಯಂಕರವಾಗಿದೆ; ಕನಿಕರಗೊಂಡು ಕವಿತೆ ತಾನು ಮಾಡಬಹುದಾದ ಉಪಕಾರವನ್ನು ಮಾಡಿಲ್ಲವೆಂದೇ ತೋರುತ್ತದೆ. 'ಇಡಿಯ ಏಷ್ಯಾಖಂಡ ಹಿರಿಯ ಬಂದೀ ಖಾನೆ'; ಇದು ಸುಲಭವಾಗಿ ಅರ್ಥವಾಗುವುದಿಲ್ಲ. ಆದಿವಾಸಿ ನಿಮ್ನ ವರ್ಗದವರ ವಿಷಯದಲ್ಲಿ ಸವರ್ಣಿಗಳ ಅನ್ಯಾಯ ವಿಷಮತೆಗಳನ್ನು ಖಂಡಿಸುವ 'ಏಳ್ಕೋಟಿಗೇಳ್ಕೋಟಿಗೆಳ್ಕೋಟಿಗೋ' ಕವನದಲ್ಲಿ ವಾದಕ್ಕೆ ಸಾಕಾಗು

ವಷ್ಟು ಅವಕಾಶವಿರದೆ ಹೋಗಿದೆ. ಈ ಕವಿತೆಗಳಲ್ಲಿ ಕಲೆಗಾರಿಕೆ ಕಡಮೆ.

'ತಾಯ ಬರವು' ತುಂಬ ಸುಂದರವಾಗಿದೆ; ಸರಳವಾಗಿದೆ.

ಕೈಲಾಸವೇ ಸಾಕ್ಷಿ ಕಲ್ಯಾಣವೇ ಸಾಕ್ಷಿ....
ಬಾದಾಮಿ ಬೇಲೂರು ಉಡುಪಿ ಉಡುತಡಿ ಸಾಕ್ಷಿ....

ಸೊಗಸಾಗಿದೆ ಎನ್ನಲು ಯಾವ ಅಡ್ಡಿಯೂ ಇಲ್ಲ.

ಹೊಗೆ ಸುತ್ತಿದ ಮನೆಮಾಳಿಗೆ ವಾಹನಗಳ ಧೂಳು—

ಇದು ಪಟ್ಟಣದ ಚಿತ್ರ. 'ಮುಸುಕು ತೆರೆದೆರೆ', ಇನ್ನೂ ಅಡಕವಾಗಿದ್ದರೆ ಅಚ್ಚುಕಟ್ಟಾಗಿತ್ತು.

ಇರುವುದೊಂದೇ ಒಲವು
ಮೆರೆವುದೊಂದೇ ಚೆಲುವು
ದೊರೆವುದೊಂದೇ ನಲವು
ಇದೇ ಬಾಳ ಗೆಲವು !

ಈ ನಾಲ್ಕು ಸಾಲು ಮನಸ್ಸಿನಲ್ಲಿ ನಿಲ್ಲುತ್ತದೆ.

ಪ್ರೇಮಕ್ಕೆ ಮೀಸಲಾಗಿರುವ ಕೆಲವು ಕವನಗಳು ಇಲ್ಲಿ ಬಂದಿವೆ. ತತ್ತ್ವಾನ್ವೇಷಣೆಗಾಗಿ ಯಾರೂ ಪ್ರೇಮಗೀತಗಳನ್ನು ಆದರಿಸಿ ಹಿಡಿಯುವುದಿಲ್ಲ ಎಂದೇ ನನ್ನೆಣಿಕೆ. ಪ್ರೇಮವೇ ಒಂದು ಮಾಯೆ; ಅಲ್ಲಿ ತತ್ತ್ವವನ್ನು ಹುಡುಕುವ ಕವಿಗೆ ದಿಗ್ಭ್ರಾಂತಿಯೇ ಶಾಸ್ತಿ. ಕವಿವರ್ಯ ಬೇಂದ್ರೆಯವರು ಇಲ್ಲಿನ ಪ್ರೇಮಗೀತಗಳ ವಿಷಯದಲ್ಲಿ ಆಡಿರುವ ಮೆಚ್ಚುಗೆಯ ಮಾತಿನಲ್ಲಿ ಎಷ್ಟು ಔಚಿತ್ಯವಿದ್ದರೂ, ಪ್ರೇಮದ ಹೊಸ ಪಲುಕು ಅಷ್ಟಾಗಿ ಕಂಡು ಬರುವುದಿಲ್ಲ. ಇದಕ್ಕೆ ಬೇಕಾದ ಲವಲವಿಕೆ, ಹೊಸತನ, ಹೃದಯ ಪರಿಪಾಕ ಒದಗಲಿಲ್ಲವೇನೋ ! 'ಬಾಳು ಕಹಿಯಾದರೂ ನೆನಹು ಕಹಿಯಲ್ಲ' ಎಂಬ ಕವನದ ಮೊದಲೆರಡು ಪಂಕ್ತಿಗಳೇನೋ ಮೋಹಕವಾಗಿವೆ :

ಏಕೆ ಸುಳಿಯುವಿ ಮತ್ತೆ ಸ್ಮೃತಿ ಪಥದಿ ಸುಂದರಿಯೆ,
ಶೋಕ ಕಾವ್ಯದ ಮುಚ್ಚಿದೋಲೆಗಳ ತೆರೆವೆ ?—

ಮುಂದೆಲ್ಲ ಸಾಮಾನ್ಯರೀತಿಯ ವರ್ಣನೆ. 'ಕಿವಿಮಾತು' ಹೃದಯಂಗಮ

ವಾಗಿದೆ; ಬೇಂದ್ರೆಯವರ 'ಗುರುದೇವ' ಕವಿತೆಯ ಹೊಳಲು ಸುಳಿಯುತ್ತಿದೆ. ನಿಜ; ಕೇಳಬೇಕು ಅನ್ನಿಸುವ ಕವನವಿದು.—

ಜೀವಾ ಕೇಳಬೇಕನತದ ಕಿವಿಮಾತ
ಸಕ್ಕರಿನಿದ್ದಿಗಿಂತ ಸವಿಮಾತ !

'ಸಮರಸ'ದಲ್ಲಿ ಬರುವ ಭೋಗಿನಲ್ಲನ ಸುದ್ದಿ ಬಹಳ ನಾಜೂಕಾಗಿದೆ; ಕಷ್ಟದಿಂದ ಪಾರಾಗಿದೆ.

ಹೇಗೆ ಹೇಳಲಿ ಸಖಿಯೆ ಭೋಗಿನಲ್ಲನ ಸುದ್ದಿ
ಮೂಗೆಯಾಗಿರುವುದೇ ಮೇಲುಗೆಳತಿ

'ಮೂಗೆ'ಯೇ ಇಷ್ಟು ಮಾತಾಡಿದಮೇಲೆ, ಬಾಯಾಳಿಗೆ ಉಳಿದದ್ದೇನು ಎನ್ನಿಸುತ್ತದೆ !

ಕಾವ್ಯಾನಂದರು ಕನ್ನಡ ನುಡಿಯನ್ನು ಚೆನ್ನಾಗಿ ಬಳಸಬಲ್ಲವರು; ಶಾಸ್ತ್ರ ಸೂತ್ರಗಳಿರದ ಜನಪದಕವಿತೆಗಳ ಶೈಲಿಯಲ್ಲಿ ಇವರು ತುಂಬ ರಮ್ಯವಾಗಿ ಜಯಪ್ರದವಾಗಿ ಕಾವ್ಯರಚನೆ ಮಾಡಬಲ್ಲರು ಎಂಬುದನ್ನು ನಾವು ಈ ಸಂಗ್ರಹವಲ್ಲೇ ಕಡೆಕಡೆಯ ಕವನಗಳಲ್ಲೇ ಕಾಣಬಹುದು. ಅವರ ಆದರ್ಶಗಳು ಉಜ್ಜ್ವಲವಾಗಿವೆ: ಅವು ಅವರಿಗೊಲಿದು ಅವರ ಕವಿತೆ ಸಿದ್ಧಿ ಹೊಂದಲಿ. ಗುರಿ ಒಂದೇ; ದಾರಿ ಸಾವಿರಾರು. ಮಾತು ಅವರಿಗೆ ಅಧೀನವಾದಂತೆ ತೋರುತ್ತದೆ; ಆ ಸೌಲಭ್ಯಕ್ಕೆ ಅವರ ಕವಿತೆ ಮಾತ್ರ ಸೋಲದಿರಲಿ !

'ಜಲಪಾತ'ದಿಂದ 'ಹಾಲು-ಹಣ್ಣಿ'ಗೆ ಬಂದರೆ ಘಟ್ಟಪ್ರದೇಶಗಳಿಂದ ಸಮಭೂಮಿಗೆ ಬಂದಂತಾಗುತ್ತದೆ. 'ಹಾಲು-ಹಣ್ಣಿ'ನಲ್ಲಿ ಒಂದು ಬಗೆಯ ಸರಳತೆ, ಮುಗ್ಧತೆ ಇದೆ. 'ನಿನ್ನೊಂದು ಮುತ್ತಿನಲಿ ಏನಿಲ್ಲವೆಂದೆನಲಿ'— ಇದು ದಿಟಕ್ಕೂ ಕವಿತೆ. ಮುತ್ತಿನಲಿ ಏನಿಲ್ಲ? ಇದು ಪ್ರಶ್ನೆಯೇ ಅಲ್ಲ; ಶುದ್ಧ ಕವಿತೆಯ ಉತ್ತರ. ಈ ಮಾಯೆಯನ್ನು ಕಟ್ಟಬಲ್ಲ ಕವಿ,

ನೀ ಸೂರ್ಯ ನಾ ಶಕ್ತಿ
ನೀ ಪುರುಷ ನಾ ಪ್ರಕೃತಿ

ಎಂಬ Simple Equation ಗಳಿಗೆ ಇಳಿಯದಿದ್ದರೆ ನಷ್ಟವಿರುತ್ತಿರಲಿಲ್ಲ. 'ಒಂದೆ ಜಗದ ರಾಜ್ಯ' ಆದರ್ಶವಾಗಿ ಉಳಿಯಬಹುದು; ಅಂತೆಯೇ 'ವಿಶ್ವ

ಮಾತೆ' 'ಕೃಷ್ಣಾತೀರದ ಷೋಡಶ ರಮಣಿ'ಗಿಂತ 'ಮಾಮರ' ಚೆಲುವಾಗಿದೆ.

ಅದೊ ಅದೊ ಮಾಮರ
ಸೊಬಗಿನ ಚಾಮರ !

ಇವೆರಡು ಪಂಕ್ತಿ ತುಂಬ ಅಂದವಾಗಿವೆ. ಮುಂದಿನ ಕವನಗಳಲ್ಲಿ ಬರುವ

ಗಿಳಿಯ ಹಿಂಡಿನ ತಳಿರ ತೋರಣ
ಮುಗಿಲ ಮಂಟಪದಲ್ಲಿ ಕಟ್ಟಿ:—

ಅದಾವ ದೇವನ ಕರುಣೆಯ ಜಲವಾಗಿ
ಅದಾವ ಪೂರ್ವದ ಪುಣ್ಯದ ಫಲವಾಗಿ....
ತೇನೆ ಹಾಡಿ ಹಾರುವಲ್ಲಿ
ಹಕ್ಕಿ ನಿದ್ರೆ ಮಾಡುವಲ್ಲಿ
ಇರುಳಿನಲ್ಲು ಕೋಗಿಲೆಲ್ಲಿ
ಕೂಗಿ ದಣಿಯಲಾರದೆಲ್ಲಿ....
ಬೆಳ್ಳನ ಬಿಳಿಯ ಸಿಂಪಿಯ ಒಳಗ
ಬೆಳ್ಳಿಯ ಮುತ್ತು ಹೊರಳುವ ಹಾಂಗ
ಮುಂಜಾನ್ಹೊತ್ತು ಹೂವಿನ ಒಳಗ
ಮಂಜಿನ ಹನಿಯು ಉರುಳವ ಹಾಂಗ....

ಅಲ್ಲಾಡಲೊಲ್ಲದಾ ಮಲ್ಲಾಡ ಮಲೆಯಾಗಿ
ನಲ್-ನಾಡ ನೆಲೆಯಾಗಿ ನಿಲ್ಲುಮಾತೆ....

ಈ ಮುಂತಾದ ಕವಿತೆಯ ಪಂಕ್ತಿಗಳನ್ನು ತುಂಬ ಸಂತೋಷದಿಂದ ನೆನೆಯಬೇಕು; ಇಂಥವನ್ನು ಬರೆದವರು ಮುಂದೆ ಒಳ್ಳೆಯ ಕವಿಗಳಾದಾರು ಎಂಬ ಕವಿವರ್ಯ ಬೇಂದ್ರೆಯವರ ನಿರೀಕ್ಷೆಯನ್ನು ಶ್ರೀ ಭುಜೇಂದ್ರರು ಪೂರ್ಣಗೊಳಿಸಬಲ್ಲರು. 'ಇದು ಇವರ ವಯಸ್ಸಿಗೆ ಸಣ್ಣ ಮಾತಲ್ಲ. ಇವರ ಮನಸ್ಸು ಒಟ್ಟನಲ್ಲಿ ಲಲಿತವಾಗಿದೆ. ಪ್ರಸನ್ನವಾಗಿದೆ. ಶ್ರೀ ಮಧುರ ಚೆನ್ನರಿಗೆ ಇವರು ಅರ್ಪಿಸಿರುವ ಕವನ ತುಂಬ ಯೋಗ್ಯವಾಗಿದೆ- ಕವಿತೆಗಳನ್ನು ರಚಿಸುವ ಭರದಲ್ಲಿ ಚಿಂತನೆಗೆ ಅಷ್ಟಾಗಿ ಮನಸ್ಸು ಕೊಡದೆ ಹತ್ತಿರದ ದಾರಿ (Short

Cut) ಹುಡುಕಿದ ಕಡೆಗಳಲ್ಲಿ ಎಲ್ಲರಂತೆ ಇವರೂ ಸಾಮಾನ್ಯವಾಕ್ಯತೆ, ಗದ್ಯತೆಗಳಿಗೆ ಗುರಿಯಾಗುವಂತಿದ್ದರೂ, ಒಟ್ಟು ನೋಟದಲ್ಲಿ ಇವರಿಂದ ಉತ್ತರೋತ್ತರ ಒಂದಿಷ್ಟು ಒಳ್ಳೆಯ ಕೆಲಸವಾದೀತೆಂಬ ಆಸೆಗೆ ಅಭಯವಿದೆ. ತಾಜಮಹಲನ್ನು ಕಟ್ಟಿದವರ ತಾಳ್ಮೆಯನ್ನು ನೆನೆಯಬೇಕು, ಅವರು ಅವಸರ ಮಾಡಿದ್ದರೆ ಅದು ಬೇಗನೆ ಮುಗಿಯುತ್ತಿತ್ತೇನೋ, ತಾಜಮಹಲಾಗುತ್ತಿರಲಿಲ್ಲ. ಕವಿತೆಯ ವಿಷಯ ಇದಕ್ಕಿಂತ ಬೇರೆಯಲ್ಲ—ಅದು ಕಲೆಯಾಗಿರುವ ತನಕ ಅದು ತಾಜಮಹಲಾಗಲಿ, ಉಕ್ಕಿನ ಕೋಟೆಯಾಗಲಿ, ಈ ಸೂತ್ರ ಅನ್ವಯಿಸುತ್ತದೆ. ಕವಿಗಳಿಬ್ಬರಿಗೂ ಹೃತ್ಪೂರ್ವಕ ಅಭಿನಂದನೆಗಳು.

ನನ್ನ ರೇಡಿಯೋ ಅನುಭವ

ನನ್ನ ರೇಡಿಯೋ ಅನುಭವ ದ್ವಿಮುಖವಾಗಿದೆ. ಕಳೆದ ೧೪ ವರ್ಷಗಳಲ್ಲಿ ನಾನು ಹಲವು ಸಲ ಆಕಾಶವಾಣಿಯ ಅಂತಃಪುರಕ್ಕೆ ಹೋಗಿಬಂದಿದ್ದೇನೆ. ಅದರೊಳಗಿನಿಂದ ಓದಿದ್ದೇನೆ; ಹೊರಗಿನಿಂದ ಕೇಳಿದ್ದೇನೆ. ನಾನೇ ನನ್ನವನ್ನು ಓದಿದ್ದೇನೆ, ಇತರರೂ ಹಾಡಿದ್ದಾರೆ. ನನಗೊಂದು ರೀತಿಯ ಅನುಭವ; ನನ್ನ ಕವಿತೆಗೊಂದು ರೀತಿಯ ಅನುಭವ. ಇದು ನಡೆಯುತ್ತಲೇ ಇದೆ. ಈ ಸ್ಥಿತಿಯನ್ನು ನಾನು ಆಗಾಗ ವಿಮರ್ಶಿಸಿಕೊಂಡಿದ್ದೇನೆ. ಆ ಚಿಂತನೆಯ ಒಂದೆರಡು ಎಳೆಗಳನ್ನು ಇಲ್ಲಿ ಕಾಣಬಹುದು.

ಧ್ವನಿವರ್ಧಕಯಂತ್ರ ಕವಿತೆಗೆ ಒದಗಿರುವ ಹೊಸ ರಥ. ಸಹೃದಯ ಗೋಷ್ಠಿಯಲ್ಲಿ, ತುಂಬಿದ ಸಭೆಗಳಲ್ಲಿ ಕವಿತಾವಾಚನ ಮಾಡುವುದು ಇಂದಿಗೆ ಹಳೆಯಪದ್ಧತಿಯಾಗಿರಬೇಕು. ರೇಡಿಯೋ ಮೂಲಕ ಇಂದಿನ ಕವಿತೆ ಜನದ ಕಿವಿಗೆ ಪ್ರವಹಿಸುತ್ತಿದೆ. ಕಿಟಕಿಗಳಿರದ, ಉಸಿರಾಡಲುಮಾತ್ರ ಸಾಕಷ್ಟು ಗಾಳಿಯಿರುವ, ಬೆಚ್ಚಗೆ ಬೆಳಕಾಗಿರುವ ರೇಡಿಯೋ ನಿಲಯದಿಂದ ನಾನು ನನ್ನ ಕವಿತೆಯನ್ನು ಸಾವಿರಾರು ಜನ ಕೇಳುತ್ತಾರೆಂಬ ಉತ್ಸಾಹದಿಂದ ಓದುತ್ತೇನೆ. ಮೈಕಿನ ಮೂತಿಗೆ ಎಗರಿ ಮಾತಾಡಿದ ತಪ್ಪನ್ನು ನಾನೂ ಮೊದಲೆಲ್ಲಾ ಮಾಡಿದ್ದೇನೆ. ಅದೇ ನನಗೆ ಸಭೆಯೂ, ಸ್ನೇಹಿತನೂ ಆಗಿ ನನ್ನನ್ನು ಕನಿಕರಿಸಿ ನೋಡಿದೆ. ನನ್ನ ಹೃದಯದ ರಾಗ ಭಾವಗಳಿಗೆ ಕೊಂಚವೂ ತಲೆದೂಗದೆ, ನೆಲಕ್ಕೆ ನಾಟಿದ ಹಾರೆಯಂತೆ ಅದು ನಿಲ್ಲುತ್ತದೆ; ನನ್ನ ಉಸಿರನ್ನೇ ಹೀರುತ್ತಿದ್ದರೂ, ಸಾವಿನಂತೆ ಸುಮ್ಮನಿದೆ, ನಗದಿದೆ. ನನ್ನ ಮನಸ್ಸು ಅದರಂತೆ ಆದಾಗ—ಆ ಕಾಲ ಎಂದಿಗೆ ಬರುವುದೋ!—ನನ್ನ ಕವಿತೆ ಚಿರಸ್ಥಾಯಿಯಾದೀತು! ಒಪ್ಪಿದ ಕೆಲಸವನ್ನು ಅದರಷ್ಟು ಚೆನ್ನಾಗಿ ಮಾಡುವುದು ನನಗೆ ಸಾಧ್ಯವಾಗಿಲ್ಲ. ನನ್ನ ಚಿತ್ತ ಚಂಚಲ; ಹೂವನ್ನು ಕಂಡರೆ, ಹೆಣ್ಣಿನ ಚೆಲುವು ನೆರಳು ಹಾಕಿದರೆ, ದೇವರ ದೀಪ ಪ್ರಜ್ವಲಿಸಿದರೆ ವೀಣೆಯ ಇಂಪು ವಿಶಾಲವಾದರೆ ನನ್ನ ಮನೋಧರ್ಮ ಹದಗೆಡುತ್ತದೆ. ಮೈಕಿಗೆ ಈ ಅಬಲತೆಯಿಲ್ಲ, ಅದರ ಎದೆಬಂಡೆಯ ಮುಂದೆ ಹಾಡಿ ನನ್ನ

ಕವಿತೆಯು ವೈಗಟ್ಟು ಸ್ಫುಟವಾಗುತ್ತಿದೆ, ನಾನು ಅದಕ್ಕೆ ಸ್ವಾಭಾವಿಕವಾಗಿ ಚಿರಋಣಿ.

ನಾನು ಕವಿತೆಗಳನ್ನು ರೇಡಿಯೋ ಪ್ರಸಾರ ಮಾಡಿದಾಗೆಲ್ಲ, ಸಾವಿರಾರು ಜನ ಕೇಳಿರುವರೆಂಬುದು ಶುದ್ಧ ಮೋಸ! ಸಂಜೆಯಲ್ಲಿ ಮುದುಕರು, ಸಣ್ಣ ಮಕ್ಕಳು ಹೊರತು, ಎಲ್ಲರೂ ಸಾಮಾನ್ಯವಾಗಿ ಮನೆಯ ಹೊರಗೆ ಇರುತ್ತಾರೆ. ರಾತ್ರಿ ಚಳಿಗೆ ಬೇಗ ಮಲಗಿ ನಿದ್ರಿಸುತ್ತಿರಬಹುದು. ಅಂತೂ ಯಾರಾದರೂ ಮಾರನೆಯ ಬೆಳಗಾಗ "ನಿಮ್ಮ ಕವಿತೆಯನ್ನು ಕೇಳಿದೆ, ಚೆನ್ನಾಗಿತ್ತು" ಎಂದರೆ ಸಾಕು, ನನ್ನ ತಲೆಗೆ ಇಲ್ಲದ ಕಿರೀಟ ಬಂದಂತೆ! ಪ್ರಪಂಚದ ದಿನದಿನದ ಗದ್ದಲದ ನಡುವೆ ನನ್ನ ಧ್ವನಿ ಕಡೆಗೆ ಕೆಲವು ಕಿವಿಗಾದರೂ ಬಿತ್ತಲ್ಲ ಎಂಬ ಜಂಬ! ಇಷ್ಟು ಸಂತೋಷಕ್ಕೂ ಎಡೆ ಈ ಲೋಕದಲ್ಲಿ ಇಲ್ಲವಾದರೆ ಇನ್ನೇನು ಗತಿ! ಅಲ್ಲದೆ ಕವಿತೆಯ ಸೌಂದರ್ಯವನ್ನು ಅಚ್ಚಾದ ಅಕ್ಷರಗಳಲ್ಲಿ ಕಾಣುವುದಕ್ಕಿಂತ ಸಹಜವಾದ ಮಾರ್ಗ ರೇಡಿಯೋ ಪ್ರಸಾರ. ರೇಡಿಯೋ ಯಂತ್ರದಿಂದ ಕವಿತೆಯ ಮುಖಕ್ಕೆ ಒಂದು ಅಪೂರ್ವ ತೇಜಸ್ಸು ಬಂದಿರಬಹುದೇನೋ! ನಾನು ನನ್ನ ಕವಿತೆಗಳನ್ನು ಅಲ್ಲಿಂದ ಪ್ರಸಾರಮಾಡಿದಾಗ, ಈ ಹೊಸ ತೇಜಸ್ಸು ಕಾಣಿಸಿದೆಯೋ ಇಲ್ಲವೋ—ನಾನಲ್ಲ ಹೇಳಬೇಕಾದವನು!

ನನ್ನ ಕವಿತೆಗಳನ್ನು ಇತರರು ಪ್ರಸಾರಮಾಡುವುದನ್ನು ನಾನು ಎಲ್ಲೋ ಕೆಲವು ವೇಳೆ ಕೇಳಿದ್ದೇನೆ. ನನ್ನ ಮಟ್ಟಿಗೆ ಹೇಳುವುದಾದರೆ ಅವರಲ್ಲಿ ಕೆಲವರು ನನ್ನ ಕವಿತೆಯ "ಸಾಹಿತ್ಯ"ವನ್ನೂ ಬದಲಾಯಿಸುತ್ತಾರೆ; ಭಾವದ ಬಾಯಿಗೆ ಇಂಪಿನ ರೇಷ್ಮೆ ಕರವಸ್ತ್ರವನ್ನು ತುರುಕಿ ಅಗ್ಗದ ಮಟ್ಟುಗಳ ಧಾಟಿಯಲ್ಲಿ ಮುಗಿಸಿದ್ದಾರೆ. ಅಂಥವರು ಕೃಪೆಮಾಡಿ ತಾವು ಆರಿಸಿದ ಕವಿತೆಯನ್ನು ಹೃದಯದಲ್ಲಿ ಹರಡಿಕೊಂಡು ನೋಡಿದ್ದರೆ, ತಮ್ಮ ನಿರ್ಧಾರಗಳನ್ನು ಅದರ ತಲೆಗೆ ಒತ್ತದೆ, ಅದು ಸೂಚಿಸುವ ಧಾಟಿಯಲ್ಲಿ ಸುಖವಾಗಿ ಸಾಗಿದ್ದರೆ, ಹೆಚ್ಚು ಸಂತೋಷಕ್ಕೆ ಅವಕಾಶವಿರುತ್ತಿತ್ತು. ಸರಿದಾರಿ ಇಂದಲ್ಲ ನಾಳೆ ಅವರಿಗೆ ಹೊಳೆದೀತು ಎಂದು ನನ್ನ ಆಸೆ. ಇದೂ ಎಲ್ಲರಿಗೂ ಒಪ್ಪುವ ಮಾತಲ್ಲ. ನನ್ನ ಹಾಡುಗಳನ್ನು ತುಂಬ ಚೆನ್ನಾಗಿ ಹಾಡುತ್ತಿರುವ ಸೋದರರೂ ತಂಗಿಯರೂ ನನಗೆ ಇದ್ದಾರೆ. ಅವರಿಂದ

ಬರುವ ಸಂತೋಷ ತುಂಬ ಬೆಲೆಯುಳ್ಳದ್ದು. ಇಷ್ಟರಮೇಲೆ ಯಾರ ನ್ನಾಗಲೀ ಕುರಿತು "ಈ ದಾರಿಯೇ ಸರಿ, ಇಲ್ಲೇ ನಡೆಯಿರಿ" ಎಂದು ಹೇಳು ವುದು ಉಚಿತವಲ್ಲ, ಓದುವ, ಕೇಳುವ ಸಹೃದಯರ ಸಂಖ್ಯೆ ಹೆಚ್ಚಾಗು ತ್ತಿರುವ ಈ ಶುಭಕಾಲದಲ್ಲಿ ಎಚ್ಚರಿಕೆಗೆ ಮಿತಿಯೆಲ್ಲಿ? ಇದನ್ನು ಅಹಂಕಾರ ವಲ್ಲದ, ನ್ಯಾಯವಾದ ಆಸಕ್ತಿ ಎಂದು ತಿಳಿಯುವುದಾದರೆ ನಾನು ಕೃತಜ್ಞ.

ನನಗಿರುವಂತೆಯೇ, ಗಮಕಿಗಳಿಗಿರುವಂತೆಯೇ, ರೇಡಿಯೋ ನಿಲಯದ ಕಾರ್ಯಭಾರಕ್ಕೂ, ದಿನದಿನ ಎದುರಿಸಬೇಕಾದ ಕಷ್ಟಗಳಿಲ್ಲದೆ ಇಲ್ಲ. ಅವು ಸುಲಭವಾದ ಕಷ್ಟಗಳಲ್ಲ. ಪ್ರತಿದಿನದ ಕಾರ್ಯ ವಿವರವನ್ನು ನಕ್ಷೆಮಾಡುವಾಗ ಅದು ಕೇವಲ ಯಂತ್ರದಂತೆ ಇರುವುದಿಲ್ಲ. ತನ್ನ ಕಲಾಭಿರುಚಿ, ಸೌಂದರ್ಯ ಕಲ್ಪನೆಗಳನ್ನಲ್ಲದೆ, ಜನಾಭಿಪ್ರಾಯವನ್ನೂ ಗಮನಿಸಬೇಕಾಗುತ್ತದೆ. ಎಲ್ಲರ ಮೆಚ್ಚುಗೆ ಯಾರಿಗೂ ಸಾಧ್ಯವಲ್ಲವೆಂದಮೇಲೆ ನಾವು ಅದನ್ನೇ ಅತಿಯಾಗಿ ಟೀಕೆಮಾಡುವುದು ಅನುಚಿತ. ಅದು ನಮ್ಮ ಕಲಾಕೇಂದ್ರ; ಅಲ್ಲಿಂದ ನಾವು ಕೇಳುವುದು ಯಂತ್ರಗಳ ಧ್ವನಿಯನ್ನಲ್ಲ; ಜನಧ್ವನಿಯನ್ನೇ. ಜನ ಧ್ವನಿ—ಎಲ್ಲ ಅರ್ಥಗಳಲ್ಲೂ—ಉತ್ತಮಗೊಂಡಂತೆ, ರೇಡಿಯೋ ಕಾರ್ಯಕ್ರಮ ಗಳು ಶಕ್ತಿಯುತವೂ ಸುಂದರವೂ ಆಗುತ್ತವೆ. ಒಂದೇ ಮುಖದ ಆಡುವ ಬಾಯೇ ಕೇಳುವ ಕಿವಿಗೆ ಕಹಿಯಾದರೆ, ದೋಷಕ್ಕೆ ಯಾರು ಹೊಣೆ!

ಈ ಮಿತಿಯಲ್ಲಿ ರೇಡಿಯೋನಿಲಯ ಕೆಲಸ ಮಾಡುತ್ತಿದೆ. ಇದು ಸರ್ಕಾರದ ಕೇವಲ ಒಂದು ಕಛೇರಿಯಲ್ಲ. 'ಆಕಾಶವಾಣಿ'ಗೆ ಜನಜೀವನದ ಸುಂದರ ಕಲ್ಪನೆಗಳೇ, ಹೃದಯಧ್ವನಿಯೇ ಜೀವ. ಇವು ಅದಕ್ಕೆ ಒದಗುವಂತೆ ಮಾಡಲು ಕಲೆಗಾರರೂ ಸಹೃದಯರೂ, ಆಲೋಚಿಸಬೇಕು. ದೂರ ಕುಳಿತು ಮಾಡುವ ಟೀಕೆ ಅಪ್ರಯೋಜಕ. ಈ ಕಲಾಮಂದಿರ ನಮ್ಮದು.

ಎಲ್ಲೋ ಕುಳಿತು ಕೇಳಿದ ಜನ 'ಹೀಗೆನ್ನುತ್ತಾರೆ ಹಾಗೆನ್ನುತ್ತಾರೆ' ಎಂಬ ಆಕ್ಷೇಪಣೆಗಳಿಗೆ ಹೆದರಿ ಅಲ್ಲದಿದ್ದರೂ, ರೇಡಿಯೋನಿಲಯದರು ಸಾಹಿತ್ಯವನ್ನೊದಗಿಸಿರುವವರಿಗೂ, ಗಮಕಿಗಳಿಗೂ ನಿಲಯದ ಕಾರ್ಯ ಕ್ರಮಗಳ ವಿಷಯದಲ್ಲಿ ಸಾಮರಸ್ಯ ಬರುವಂತೆ, ಸಂಪರ್ಕವನ್ನು ಒದಗಿಸ ಬೇಕು. ಒಬ್ಬರನ್ನೊಬ್ಬರು ಕಂಡು ವಿಚಾರವಿನಿಮಯ ಮಾಡಿಕೊಳ್ಳಲು ಸೌಕರ್ಯವನ್ನು ನಿಲಯದಲ್ಲಿ ಏರ್ಪಡಿಸಬೇಕು. ಸರ್ಕಾರಿ ನಿಯಮ ನಿಬಂಧನೆ

ಗಳ ಪ್ರಕಾರ ರೇಡಿಯೋ ನಿಲಯದವರು ಹೀಗೆ ಮಾಡಬೇಕಾಗಿಲ್ಲ, ನಿಜ. ಇದನ್ನು ಮಾನವತೆಯ ದೃಷ್ಟಿಯಿಂದಲಾದರೂ ನಡೆಸಿಕೊಡಬೇಕು. ಉತ್ಸಾಹಿಯಾದ ಗಮಕಿಗೆ ತಾನು ಹಾಡುವ ಗೀತೆಯ ವಿಷಯದಲ್ಲಿ ಹತ್ತಿರದಲ್ಲೇ ಇರುವ ಕವಿಯಿಂದ ಸಲಹೆಯನ್ನು ಪಡೆಯುವುದು ಸಾಧ್ಯವಾದರೂ ಅನಗತ್ಯವಾಗಬಾರದು. ಕವಿಯ ದೃಷ್ಟಿ ಗಮಕಿಯ ಗತಿಯನ್ನು ತಿದ್ದುವುದರಿಂದ ಅಥವಾ ಬದಲು ಸಲಹೆ ಕೊಡುವುದರಿಂದ ಲಾಭವಿದೆ. ಯಾರ ಪ್ರತಿಷ್ಠೆಗೂ ಇದರಿಂದ ಗ್ರಹಣ ಹಿಡಿಯುವುದಿಲ್ಲ. ಕವಿಯಿಂದ ಗಮಕಿಗೆ ಗಮಕಿಯಿಂದ ಕವಿಗೆ ಈ ರಸವಾಣಿಜ್ಯ ನಡೆಯುವಂತೆ ಮಾಡುವ ಕೆಲಸ ಆಕಾಶವಾಣಿಗೆ ಹೆಚ್ಚು ಕೀರ್ತಿಯನ್ನು ತರುವುದು ಸಂಭವ.

ಕಲಾವಿದೆ ಕಂಡ ಪೂರ್ವಯೂರೋಪ್

ಶ್ರೀಮತಿ ಲಲಿತಾ ಶಿವರಾವ್ ಉಭಯಕರ್ ಅವರು ತಮ್ಮ ಪೂರ್ವ ಯೂರೋಪ್ ಪ್ರವಾಸದ ಅನುಭವವನ್ನು ಸುಮಾರು ಎರಡು ಗಂಟೆಗಳ ಕಾಲ, ಮುಕ್ಕಾಲುಪಾಲೆಲ್ಲ ಇಂಗ್ಲೀಷಿನಲ್ಲಿ, ವರ್ಣಿಸಿದರು. ನಾನು ಅವರ ಪ್ರವಾಸ ಕಥನದ ವಿವರಗಳನ್ನೂ ಕಾವ್ಯ ಶೈಲಿಯನ್ನೂ ತುಂಬ ಮೆಚ್ಚಿಕೊಂಡೆ. ನಾನು ಕೇಳಿದ್ದರಲ್ಲಿ ನನಗೆ ರುಚಿಸಿದ ಮತ್ತು ನನ್ನ ನೆನಪಿನಲ್ಲಿ ಉಳಿದ ಕೆಲವು ಸಂಗತಿಗಳನ್ನು ಸಂಭಾಷಣೆಯ ರೂಪದಲ್ಲಿ ಇಲ್ಲಿ ಕನ್ನಡಿಸಿದ್ದೇನೆ. ವಿಷಯ ಅವರದು; ಬರಹ ನನ್ನದು.

೧

೧೦-೭-೫೬ರ ಮಧ್ಯರಾತ್ರಿ ಭಾರತದ ಸಾಂಸ್ಕೃತಿಕ ನಿಯೋಗವೊಂದು ಸೋವಿಯೆಟ್ ಯೂನಿಯನ್ ಮೊದಲಾದ ಪೂರ್ವ ಯೂರೋಪ್ ರಾಷ್ಟ್ರಗಳಲ್ಲಿ ಪ್ರವಾಸ ಮಾಡಲು ಬೊಂಬಾಯನ್ನು ಬಿಟ್ಟಿತು. ೩೫ ಸದಸ್ಯರ ನಿಯೋಗ: ಭರತನಾಟ್ಯ, ಕಥಕ್ಕಳಿ, ಕಥಕ್, ಜಾನಪದ ನೃತ್ಯಗಳಲ್ಲಿ ಹೆಸರಾದವರು, ಪರಿಣತ ಗಾಯಕರು, ಸಿತಾರ್ ಸರೋದ್ ವಾದನ ಚತುರರು, ವಂಗ ಸಂಗೀತ ರವೀಂದ್ರ ಸಂಗೀತ ಪರಿಶ್ರಮವುಳ್ಳವರು ಇತ್ಯಾದಿ, ಇತ್ಯಾದಿ....

ಹೊಸ ದೇಶಗಳನ್ನು ಮೊದಲ ಸಲ ನೋಡುವ ಉತ್ಸಾಹ ದೆಹಲಿಯಿಂದ ಬೊಂಬಾಯಿ ತನಕ ನಮಗಾಗಿದ್ದ ಮಾರ್ಗಾಯಾಸವನ್ನು ಪರಿಹರಿಸಿತ್ತು.... ಹೀಗೆ ಹೇಳುತ್ತ ಬಂದರೆ ವರದಿಯಾಯಿತೇನೋ! ಅಲ್ಲ?

"ಇಲ್ಲ: ಆದರೆ...."

ಓ—ಹಾಗೇ ಹೇಳಬೇಕು, ಹೌದು....

ಸಮುದ್ರಕ್ಕೆ ಸಹಸ್ರಾರು ಅಡಿಗಳ ಎತ್ತರದಲ್ಲಿ ಚಲಿಸುವ ನಕ್ಷತ್ರದಂತಿತ್ತು ನಮ್ಮ ವಿಮಾನ. ಎಂಜಿನ್ನಿನ ಸಮಧ್ವನಿ; ನಮಗೆ ನಿದ್ದೆ ಬಂತು. ಇರುಳು ಕಳೆಯಿತು. ಬೆಳಗಾಯಿತು. ಅದೆಂಥ ಬೆಳಗು!—ನೀಲ ಜಲರಾಶಿಯ ಒಂದಂಚಿನಲ್ಲಿ ಅಪ್ಪಟ ಚಿನ್ನ ಕರಗಿ ಕರಗಿ ಹೊರಳುತ್ತಿತ್ತು.... ಹೀಗೆ ಹೇಳುತ್ತ ಹೋದರೆ ಕವಿತೆಯಾಯಿತು ಎನ್ನುವಿರೇನೊ?

"ನಾನು ಹಾಗೆ ಹೇಳುವುದಿಲ್ಲ!"

ಬಿಸಿಲಿನೊಂದಿಗೆ ಬಂತು ಕೈರೋ. ಒಂದು ಗಂಟೆಯ ವಿರಾಮ— ಬೆಳಗಿನ ಉಪಾಹಾರಕ್ಕಾಗಿ ಟೀ, ಚಮಚಗಳ ಸದ್ದು. 'ಇದು ಈಜಿಪ್ಟ್' ಎನ್ನುವಷ್ಟರಲ್ಲಿ ನಮ್ಮ ವಿಮಾನ ಮುಗಿಲ ಮರೆಯಲ್ಲಿ ಮೊರೆಯುತ್ತಿತ್ತು.

೨

ಸಂಜೆ ೪-೩೦ ಗಂಟೆಗೆ ನಾವು ಜೆಕೋಸ್ಲೊವಾಕಿಯಾ ರಾಜಧಾನಿ ಪ್ರಾಗಿನಲ್ಲಿಳಿದೆವು. ನಮ್ಮ ಅಧಿಕೃತ ಪ್ರವಾಸದ ಮೊದಲ ಹೆಜ್ಜೆ ಅದು. ಕೈತುಂಬ ಹೂಗಳನ್ನು ಹಿಡಿದ ಮುದ್ದು ಬಾಲಿಕೆಯರ ಜಯಕಾರಗಳ ನಡುವೆ ಅಲ್ಲಿನ ಅಧಿಕಾರಿಗಳು ನಮ್ಮನ್ನು ಸ್ವಾಗತಿಸಿದರು. ಅದು ನಾವು ಕೇಳಿದ ಮೊಟ್ಟಮೊದಲನೆಯ ಸ್ವಾಗತ ಭಾಷಣವಾಗಿದ್ದುದರಿಂದ ನಮಗೆಲ್ಲ ಹೆಮ್ಮೆ ಬಂದಿತು.

ಪ್ರಾಗ್ ಸುಂದರವಾದ ನಗರ; ಅದರ ಸುತ್ತ ಶರತ್-ದೃಷ್ಟಿ ಬಿದ್ದ ಉನ್ನತ ಪೈನ್ ವೃಕ್ಷ ಪಂಕ್ತಿಗಳು. ಜನ ಹಸನ್ಮುಖಿಗಳು. ಅಲ್ಲಿ ನಮಗೆ ನೆರವಾದ ದ್ವಿಭಾಷಿಗಳಿಗೆ ಹಿಂದಿ ಚೆನ್ನಾಗಿ ಬರುತ್ತದೆ. ಮುಲ್ಕ್‌ರಾಜ್ ಆನಂದ್, ಪ್ರೇಮ್‌ಚಂದ್, ಮುಂತಾದವರ ಕೆಲವು ಕೃತಿಗಳು ಈಗಾಗಲೇ ಜೆಕ್ ಭಾಷೆಗೆ ತರ್ಜುಮೆಯಾಗಿವೆ. ಪ್ರಾಗಿಗೆ ಸಮೀಪದಲ್ಲಿ ವಿಕಾರವಾದ ಬಂಡೆಗಳಲ್ಲಿ ಬೃಹದಾಕಾರದ ಗುಹೆಗಳಿವೆ. ಒಳಗೆ ಹೋದರೆ ಬಹಳ ಚಳಿಯಾಗುತ್ತದೆ; ತಲೆಯ ಮೇಲೆ ಪಾಚಿಗಟ್ಟಿದ ಕಲ್ಲಿನ ಬಿಳಲುಗಳು ಇಳಿದಿವೆ. ಇಲ್ಲಿಗೆ ಸದಾಕಾಲವೂ ಪ್ರವಾಸಿಗಳು ಬರುತ್ತಲೇ ಇರುತ್ತಾರೆ. ಇಲ್ಲಿನ ಒಂದು ಗುಹೆಗೆ, ಬಲಮಗುವನ್ನು ಕಾಡಿದ ತಪ್ಪಿಗೆ ಗಂಡನ ಕೈಯಿಂದ ಕೊಲೆಯಾದ ದುರ್ದೈವಿ ಹೆಂಡತಿಯೊಬ್ಬಳ ಹೆಸರಿಟ್ಟಿದ್ದಾರೆ. ನಿಜ; ಆ ಗುಹೆಯ ನೋಟ ಅಷ್ಟು ಚಿಂತಾಜನಕವಾಗಿದೆ.

ಕಾರ್ಲೊವವಾರಿ ಎಂಬ ಇನ್ನೊಂದು ಪಟ್ಟಣದಲ್ಲಿ ಬಿಸಿ ನೀರಿನ ಚಿಲುಮೆಗಳಿವೆ. ಬಂಡೆಗಳ ಮೇಲೆ ಬರುವ ಧಾತುಮಿಶ್ರಿತವಾದ ಜಲ ಆರೋಗ್ಯಕರವಷ್ಟೆ ಅಲ್ಲ, ರುಚಿಯಾಗಿಯೂ ಇರುತ್ತದೆ. ಇದೊಂದು (City Holiday) ವಿಶ್ರಾಂತಿ ನಗರ. ಇಲ್ಲಿ ಗಾಜಿನ ಕಾರ್ಖಾನೆಗಳಿವೆ.

ನಾವು ಈ ಊರಿಗೆ ಬಂದ ಕೂಡಲೆ ಸ್ನೇಹಪರರಾದ ಇಲ್ಲಿನವರು ನಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಬಣ್ಣಬಣ್ಣದ ಗಾಜಿನ ಗಿಂಡಿಗಳನ್ನು ಓದಿಸಿದರು. ಇವುಗಳಲ್ಲಿ ಚಿಲುಮೆಯ ಬಿಸಿನೀರನ್ನು ತುಂಬಿಕೊಂಡು ಕುಡಿಯಲು ತುಂಬ ಚೆನ್ನ. ಇಲ್ಲಿ ವಿಶೇಷವಾಗಿ ನನಗೆ ಕಂಡುಬಂದುದು ಇಲ್ಲಿನ 'ಮಕ್ಕಳ ವಿಹಾರ !'

"ಅಂದರೆ ನಮ್ಮ ದೇಶದ ಶಿಶು ವಿಹಾರಗಳಂತಿರಬಹುದೆ, ಅದು ?"

೩

ಅಲ್ಲ ಅದೊಂದು ಮಕ್ಕಳ ಪ್ರಪಂಚ. ತಂದೆತಾಯಿ ಪೇಟೆಗೋ ಆಸ್ಪತ್ರೆಗೋ ಹೋಗಬೇಕಾದಾಗ ಮಕ್ಕಳನ್ನು ಈ ಸಾರ್ವಜನಿಕ ಕೇಂದ್ರಗಳಲ್ಲಿ ಬಿಟ್ಟುಹೋಗುತ್ತಾರೆ. ಮಕ್ಕಳು ಬಯಸುವ ಎಲ್ಲ ಆಟದ ಸಾಮಾನುಗಳೂ ತಿಂಡಿ ತೀರ್ಥಗಳೂ ಅಂಗಡಿಗಳೂ ಬೊಂಬೆಯ ಪುಸ್ತಕಗಳೂ ಇಲ್ಲಿ ಮಕ್ಕಳ ಕೈಗೆ ಎಟಕುವ ಅಟ್ಟಗಳ ಮೇಲೆ ಸಿದ್ಧವಾಗಿರುತ್ತವೆ. ಮಕ್ಕಳು ಇಲ್ಲಿ ಸುಖವಾಗಿ ಆಡಿಕೊಳ್ಳುತ್ತವೆ, ಹಾಡಿಕೊಳ್ಳುತ್ತವೆ. ನನಗೆ ಈ ವ್ಯವಸ್ಥೆ ರುಚಿಸಿತು.

ಇಂಥ ಒಂದು ಕೇಂದ್ರದಿಂದ ಹೊರಬರುವಾಗ–

"ಬಹುಶಃ ನಿಮ್ಮ ಮಗು ನಂದನನ ಜ್ಞಾಪಕ ಬಂದಿತೇನೋ !"

ಅಯ್ಯೋ ! ಹೌದು. ಬೆಂಗಳೂರಿನಲ್ಲಿ ಬಿಟ್ಟುಬಂದ ಅವನಿಗಾಗಿ ಅಲ್ಲಿನ ಅಂಗಡಿಯೊಂದರಲ್ಲಿ ಆಟದ ರೈಲನ್ನು ವ್ಯಾಪಾರ ಮಾಡಿದೆ. ನನ್ನ ಜೊತೆಯಲ್ಲಿ ಜೆಕ್ ದ್ವಿಭಾಷಿಣಿ ಇದ್ದಳು. ಅದರ ಬೆಲೆಗೆ ಸರಿಯಾಗುವ ಒಂದು ಪ್ರಯಾಣಿಕರ ಹುಂಡಿ (Traveller's Cheque) ಯನ್ನು ಅಂಗಡಿಯವನಿಗೆ ಕೊಟ್ಟೆ. ಅವನು ನಗದು ಹಣವನ್ನೇ ಬಯಸಿದ. ಚಕ್ಕನ್ನು ಮುರಿಸಲು ವೇಳೆ ಇರಲಿಲ್ಲ. ಆ ವಸ್ತುವೇ ಬೇಡವೆಂದು ಬೇಸರದಿಂದ ನಾನು ಹೊರಗೆ ಬಂದೆ.

"ಆಗ ?"

ನನ್ನ ಸ್ನೇಹಿತೆ ಈ ಸಾಮಾನನ್ನು ನೀವು ತೆಗೆದುಕೊಳ್ಳಲೇಬೇಕೆಂದು ಒತ್ತಾಯ ಪಡಿಸಿ ಅದನ್ನು ನನಗೆ ತಂದು ಕೊಟ್ಟಳು. ಅವಳ ಹಣದಿಂದ

ನಾನು ಅದನ್ನು ಕೊಂಡದ್ದು ನನಗೆ ನಾಚಿಕೆಯಾಯಿತು. ಅದರ ಬೆಲೆ ನಂಬುವಿರಾ! ಐವತ್ತು ರೂಪಾಯಿ! ನಾನು ಜೆಕೋಸ್ಲೊವಾಕಿಯಾವನ್ನು ಬಿಡುವಾಗ ಆಕೆಗೆ ಈ ಹಣವನ್ನು ಹಿಂದಿರುಗಿಸಲು ಪ್ರಯತ್ನ ಮಾಡಿದೆ. ಆಕೆ ಕೊಟ್ಟ ಉತ್ತರ ಮಾನವತೆಯ ವೀಣಾ ಧ್ವನಿಯಂತಿತ್ತು. "ಇದನ್ನು ಕಟ್ಟಿಕೊಂಡು ನಾನೇನು ಮಾಡಬೇಕು!"....ಗೆದ್ದವಳು ಅವಳು.

೪

ನಮ್ಮ ವಿಮಾನ ಜೆಕೋಸ್ಲೊವಾಕಿಯಾವನ್ನು ಬಿಟ್ಟು ಪೋಲೆಂಡನ್ನು ತಲಪಿತು. ನನ್ನ ಕಣ್ಣಿಗೆ ಪೋಲೆಂಡ್, ಶಾಂತಿ, ಚಿಂತೆ (Sad and Calm) ಗಳಿಂದ ಕೂಡಿತ್ತು. ಎರಡನೆಯ ಮಹಾಯುದ್ಧದ ಹುಲಿ ಬಗೆದು ಹೋದ ಬದುಕಿನಚಿತ್ರಗಳು ಇನ್ನೂ ಉಳಿದಿವೆ. ವಾರ್ಸಾ ಸಂಪೂರ್ಣವಾಗಿ ಚೇತರಿಸಿ ಕೊಂಡಿಲ್ಲ. ಆದರೂ ಜನ ಗಾಂಭೀರ್ಯದಿಂದ ಬಾಳುತ್ತಿದ್ದಾರೆ. ಅಲ್ಲಿನ ಭಾರತ ಮಿತ್ರ ಸಂಘದವರು ನಮ್ಮನ್ನು ಸ್ವಾಗತಿಸಿ ಸತ್ಕರಿಸಿದರು. ವಾರ್ಸಾ ಸಮೀಪದಲ್ಲಿರುವ ತತ್ವಜ್ಞಾನಿ ಷಾಪೆನ್‌ಹಾವರ್ ಅವರ ಜನ್ಮಸ್ಥಳಕ್ಕೆ ನಾವು ಹೋಗಿದ್ದೆವು. ಅಂದು ಆ ಮಹಾವ್ಯಕ್ತಿಯ ವರ್ಧಂತಿ; ಸಣ್ಣ ಜಲ ಪಾತಗಳ ಆವರಣದಲ್ಲಿ ಒಂದು ಅರಮನೆಗೆ ಸೇರಿದಂತಿದ್ದ ಸಣ್ಣ ಮನೆ ಯೊಂದರಲ್ಲಿ ಉತ್ಸವ ನಡೆಯುತ್ತಿತ್ತು. ಪೋಲೆಂಡಿನ ಪ್ರಮುಖ ಪಿಯಾ ನೋವಾದನಕಾರರೆಲ್ಲ ಅಲ್ಲಿ ವಾದ್ಯಗೋಷ್ಠಿ ನಡಸುತ್ತಿದ್ದರು. ನಾನಾ ವರ್ಣದ ದೀಪಗಳಿಂದ ಅಲಂಕೃತವಾದ ವೇದಿಕೆಯ ಮೇಲೆ 'ಹಂಸ ಸರೋವರ' ವೆಂಬ ಸಾಮೂಹಿಕ ನೃತ್ಯ ನಡೆಯುತ್ತಿತ್ತು. ಹಂಸಗಳ ಧ್ವನಿ, ಹಂಸಗಳ ನೃತ್ಯ; ಪರಿಪೂರ್ಣತೆಯ ಅವತಾರ. ಅದೊಂದು ಸುಂದರ ಸ್ವಪ್ನ. 'ಒಂದು ಹಂಸೆ ಒಬ್ಬ ರಾಜಕುಮಾರನನ್ನು ಪ್ರೀತಿಸುತ್ತಿದ್ದಿತು: ಒಬ್ಬಳು ಕಟುಕಿ ಮಾಯಗಾತಿ ಆ ಪ್ರೇಮವನ್ನು ಮುರಿದಳು.'

ಆ ದೇಶದ ಜನಕ್ಕೆ ನಮ್ಮ ಶಾಸ್ತ್ರೀಯ ಸಂಗೀತದಲ್ಲಿ ವಿಶೇಷ ಅಭಿ ಮಾನ. ನಮ್ಮ ಒಂದು ಕಚೇರಿಗೆ ಯೂರೋಪಿನ ಹೆಸರಾಂತ ಗಾಯಕಿ ಮೆರಿಯಾ ಎಂಬಾಕೆ ಬಂದಿದ್ದರು. ಪ್ರತಿ ಕಾರ್ಯಕ್ರಮಕ್ಕೂ ೪೦೦೦ ಜನ ರಿರಬಹುದಾದ ಸಭೆ; ರೇಡಿಯೊ, ಟೆಲಿವಿಷನ್ ಸೌಕರ್ಯಗಳು! ಪ್ರೋತ್ಸಾಹ ಕರವಾದ ಜಯಕಾರ....

೫

ಪೋಲೆಂಡನ್ನು ಬಿಟ್ಟು ನಮ್ಮ ವಿಮಾನ ಮಾಸ್ಕೋವಿನಲ್ಲಿ ಇಳಿದಾಗ ಸಂಜೆ—ಮಳೆ ಹಿಡಿದಿತ್ತು; ವಿಪರೀತ ಮಳೆ. ಮಳೆಯ ಮೇಲು ಹೊದಿಕೆಯನ್ನು ಹೊದ್ದ ಮಹಾನಗರ ನಾವು ಕಂಡಷ್ಟು ದೂರಕ್ಕೂ ಹಬ್ಬಿತ್ತು.

ಅಲ್ಲಿನ ಚಿತ್ರಶಾಲೆ ಕಲಾವಸ್ತು ಸಂಗ್ರಹಾಲಯ. ಕಲೆಯ ಒಂದು ವಿಶ್ವರೂಪದ ಕೈಪಿಡಿಯಂತಿದೆ. ಯಾವಾಗಲೂ ತೆರೆದ ಕದ; ದಿನವೂ ೭೦೦೦ ಕ್ಕೆ ಮೀರಿದ ಪ್ರೇಕ್ಷಕರು.

ಲೆನಿನ್ ಗ್ರಾಡ್ ತುಂಬ ರಮಣೀಯವಾದ ಪಟ್ಟಣ. ದೀಪಾಲಂಕಾರಗಳಿಂದ ರಾತ್ರಿಯೂ ಹಗಲಿನಂತಿರುತ್ತದೆ. 'White Nights' ರಜತ ರಾತ್ರಿಗಳು ಎಂದು ಕರೆಯುತ್ತಾರೆ. ಹಿಂದಿನ ಪೀಟರಿನ ಅರಮನೆ ಇಂದು 'Hermitage' ಎಂಬ ಹೆಸರನ್ನು ಪಡೆದು ಅಪೂರ್ವ ವಸ್ತು ಪ್ರದರ್ಶನಾಲಯವಾಗಿದೆ. ಯಾತ್ರಿಕರ, 'ಕ್ಯೂ' ದಿನವೂ ಇರುತ್ತದೆ. ಮೈಕೇಲ್ ಎಂಜೆಲೋ, ಲಿಯನಾರ್ಡೋ ಡ ವಿಂಚಿಯವರ ಅಪೂರ್ವ ವರ್ಣ ಚಿತ್ರಗಳು ಇಂದಿಗೂ ಜೀವಂತವಾಗಿ ಜ್ವಲಿಸುತ್ತಿವೆ. ನಾವು ರಷ್ಯನ್ ಬ್ಯಾಲೆಯನ್ನು ನೋಡಿದೆವು; ಅದು ಸೋವಿಯಟ್ ಯೂನಿಯನ್ನಿನ ವಿಶಿಷ್ಟ ಭಾಗ್ಯ. ಆ ಶಿಸ್ತು, ಅಚ್ಚುಕಟ್ಟು, ಆ ದೇಶದ ಜನರಿಗೆ ಸಾಧ್ಯ. ಲೆನಿನ್‌ಗ್ರಾಡಿನಲ್ಲಿ ನಾವು ಎರಡು ಕಾರ್ಯಕ್ರಮಗಳನ್ನು ನಡೆಸಿದೆವು. ಉನ್ನತ ಅಭಿರುಚಿಯುಳ್ಳವರೂ, ಮಿತ ಭಾಷಿಗಳೂ ಆದ ಆ ಜನರ ಮುಂದೆ ಕಲೆಯನ್ನು ಪ್ರದರ್ಶಿಸುವುದು ಎಂಥ ಕಲೆಗಾರನಿಗೂ ಹೆಮ್ಮೆಯ ವಿಷಯ. ಅವರು ಅದನ್ನು ಮೆಚ್ಚಿಕೊಂಡು ನಮ್ಮನ್ನು ಅಭಿನಂದಿಸಿದರು. ನಾಟಕ ಮಂದಿರದ ಸುತ್ತ ನೂರು ಚಿಲುಮೆಗಳ ನರ್ತನ; ಪುಷ್ಪವನಗಳ ನಡುವೆ ಮರದಂತೆ ಕಂಡದ್ದು ಚಿಲುಮೆಯಾಗಿ ಉಕ್ಕಿ ಜಿಲ್ಲೆನ್ನುವ ಮಾಯಾಜಾಲ.

"ನನಗೆ ಈಗ ಆ ಮಹಾ ಪುರುಷ ಟಾಲ್‌ಸ್ಟಾಯ್‌ನ ಸ್ಮರಣೆ ಬರುತ್ತಿದೆ. ನೀವು ಆತನಿದ್ದ ಸ್ಥಳಕ್ಕೆ ಹೋಗಿದ್ದಿರಾ ?"

೬

ನಾನು ಅಲ್ಲಿಗೆ ಹೋಗಿದ್ದೆ. ಅದೊಂದು ಪವಿತ್ರ ದಿನ ನನ್ನ ಜೀವನ

ದಲ್ಲಿ. ಮಾಸ್ಕೋವಿನಿಂದ ೨॥ಗಂಟೆಗಳ ಪ್ರಯಾಣದ ತರುವಾಯ ಸಿಕ್ಕುತ್ತದೆ ಯಾಸ್ನಾಯು ಪೋಲಿಯಾನಾ. ಅಲ್ಲಿ ಒಂದು ಶಾಂತ ಪ್ರದೇಶದಲ್ಲಿ ಟಾಲ್‌ಸ್ಟಾಯ್ ಇದ್ದ ನಿರಾಡಂಬರ ನಿವಾಸ ಕಾಣಿಸುತ್ತದೆ. ೧೬ ಮಕ್ಕಳೊಂದಿಗೆ ಆತ ಅಷ್ಟು ಚಿಕ್ಕ ಮನೆಯಲ್ಲಿ ವಾಸಮಾಡಿದ್ದು ಹೇಗೋ ನಾನು ಹೇಳಲಾರೆ! ಆತನು ಕಣ್ಮರೆಯಾದಾಗ ಎಲ್ಲ ಎಲ್ಲೆಲ್ಲಿ ಹೇಗೆ ಹೇಗೆ ಇತ್ತೋ ಹಾಗೆಯೇ ಇದೆ. ಒಳ ಕೋಣೆಯಲ್ಲಿದ್ದ ಎರಡು ಪಿಯಾನೋಗಳು ಹಾಗೆಯೇ ತೆರೆದಿವೆ: ಅವನು ಈ ಲೋಕವನ್ನು ಬಿಡುವ ಮುನ್ನ ತೆರೆದ ಕಡೆಯ ಪುಸ್ತಕದ ನಡುವಿನ ಪುಟ ಇನ್ನೂ ತೆರೆದೇ ಇದೆ. ಒಟ್ಟು ೧೨೦೦ ವಸ್ತುಗಳಿವೆ. ಆ ಮನೆ ಪವಿತ್ರ ಯಾತ್ರಾಸ್ಥಳವಾಗಿದೆ.

"ಟಾಲ್‌ಸ್ಟಾಯ್ ಬರೆದಿರುವ ರಿಸರಕ್ಷನ್ ಕಾದಂಬರಿಯಲ್ಲಿ ಬರುವ ಕೋಚ್‌ಮನ್ ವಿಷಯ...."

ಓ, ಹೌದು! ಆತ ಬದುಕಿದ್ದಾನೆ: ಈಗತಾನೆ ಅವನಿಗೆ ೮೫ ವರ್ಷ ತುಂಬಿದೆ. ಅಲ್ಲಿ ವರ್ಣಿತವಾಗಿರುವಂತೆ ಅವನ ತಲೆಗೂದಲು ಬೆಳ್ಳಿಯ ತಂತಿಗಳಂತಿವೆ. ಟೋಪಿ ತೆಗೆಸಿ ಫೋಟೋ ತೆಗೆದುಕೊಂಡೆವು.

"ಟಾಲ್‌ಸ್ಟಾಯ್ ಸಮಾಧಿ?"

ಅವನ ಜೀವನದಂತೆಯೇ ಅವನ ಸಾವಿನ ಗುರುತೂ ಸರಳ. ವಿಶಾಲವಾದ ಬಯಲಿನಲ್ಲಿ ಹಸುರು ಹುಲ್ಲಿನ ಒಂದು ಸಣ್ಣ ಹಚ್ಚಡದಂತಿದೆ ಆ ಸಮಾಧಿ. ಮೇಲಿನ ಲತೆಯಿಂದ ಆಗಾಗ ಬಿಳಿಯ ಹೂ ಉದುರುತ್ತದೆ.

ಮಾಸ್ಕೋವಿನಲ್ಲಿ ನಾವು ೪ ಪ್ರದರ್ಶನಗಳನ್ನು ನಡೆಸಿದೆವು. ಲಘು ಸಂಗೀತ ಅಲ್ಲಿನ ಜನಕ್ಕೆ ತುಂಬ ಪ್ರಿಯವಾಯಿತು.

"ಸೋವಿಯೆಟ್ ಯೂನಿಯನ್ನಿನಲ್ಲಿ ನೀವು ಕಂಡ ಇತರ ಪಟ್ಟಣಗಳನ್ನು ಕುರಿತು ನಿಮ್ಮ ನೆನಪನ್ನು ಒಂದೊಂದು ಮಾತಿನಲ್ಲಿ ಹೇಳುವಿರಾ–"

ಹೇಳಬಹುದು ಹೀಗೆ—

ಟ್ಯಾಷ್‌ಕೆಂಟಿನಲ್ಲಿ ಬಿಸಿಲು, ಸೆಖೆ. ಆರ್ಮಿನಿಯಾದ ಗಡಿ ತುರ್ಕಿಗೆ ೨೦ ಮೈಲಿ.

"ಇಷ್ಟು ಅವಸರ ಬೇಡ".

ಆರ್ಮಿನಿಯ ಉಜ್‌ಬೆಕ್ ಎಂಬ ಎರಡು ರಾಷ್ಟ್ರಗಳ ಸಂಗೀತವೂ

ಹೆಚ್ಚು ಕಡಿಮೆ ನಮ್ಮ ಸಂಗೀತದಂತೆ ಇರುತ್ತದೆ. ಆರ್ಮಿನಿಯದಲ್ಲಿ ಮಕ್ಕಳ ರೈಲೊಂದನ್ನು ನಾನು ನೋಡಿದೆ. ಮಕ್ಕಳಿಗಾಗಿ ಮಕ್ಕಳೇ ನಡಸುವ ರೈಲುಗಳು; ಆ ರೈಲುದಾರಿಯಲ್ಲಿ ಸಿಕ್ಕುವ ನಿಲ್ದಾಣಗಳ ಹೆಸರು "Happiness" "Motherland" "Best Wishes" ಮುಂತಾಗಿ.

ಕಪ್ಪು ಸಮುದ್ರ ಎನ್ನುವ ಹೆಸರು ತಪ್ಪು; ಅದರ ನೀರು ಕಪ್ಪಿಗಿಂತ ನೀಲಿ ಎನ್ನಬಹುದು. ಗುಲಾಬಿ ಹೂಗಳ ಸೀಮೆ ಯಾಲ್ಟಾ. ಅಲ್ಲಿನ ಜಾರ್ ಚಕ್ರವರ್ತಿಯ ಅರಮನೆ ಈಗ ವಿಶ್ರಾಂತಿ ನಿಲಯವಾಗಿ ಮಾರ್ಪಟ್ಟಿದೆ. ೧೦೦೦ ಕೊಠಡಿಗಳಿವೆ, ಹಡಗಿನಿಂದ ಪ್ರಯಾಣಮಾಡಿ ಜಾರ್ಜಿಯಾವನ್ನು ತಲಪಿದರೆ ನಾವು ನೋಡುವ ದಡದ ನೋಟವನ್ನು ಮರೆಯುವುದೇ ಸಾಧ್ಯವಿಲ್ಲ. ನೀಪಾ ನದಿಯ ತೀರದಲ್ಲಿರುವ ಕೀವ್ ನಗರದ ಬಹು ಭಾಗ ಕಳೆದ ಯುದ್ಧದಲ್ಲಿ ನಾಶವಾಗಿತ್ತು; ಈಗ ಅದನ್ನು ನೂತನವಾಗಿ ಕಟ್ಟಿದ್ದಾರೆ.

ಮಾಸ್ಕೋವಿನಿಂದ ದಕ್ಷಿಣದಲ್ಲಿರುವ ಆಲ್ಮಾಟ ಪಟ್ಟಣಕ್ಕೆ ೧೨ ಗಂಟೆಗಳ ವಿಮಾನ ಪ್ರಯಾಣ. ಒಳನಾಡಿನ ಊರಿದು; ಹವ ಸೆಕೆಯಾಗಿರುತ್ತದೆ. ಮಂಗೋಲಿಯನ್ ಬುಡಕಟ್ಟಿಗೆ ಸೇರಿದ ಜನರು.

ಮಾಲ್ಡೇವಿಯಾದ ಜನಪದ ನೃತ್ಯ ತುಂಬ ನವಿರಾಗಿರುತ್ತದೆ. ಸೋವಿಯಟ್ ನಾಟಕಶಾಲೆಗಳಲ್ಲಿ ನಡೆಯುವ ಪ್ರದರ್ಶನಗಳ ಒಂದು ವಿಶೇಷ ಲಕ್ಷಣವೆಂದರೆ, ಅವರು ಕಾರ್ಯಕ್ರಮುಗಳನ್ನು ಸಭೆಗೆ ತಿಳಿಸುವುದು. ಸಭೆ ತನ್ನ ಮೆಚ್ಚುಗೆಯನ್ನು ನಾನಾ ರೀತಿಯಲ್ಲಿ ಸೂಚಿಸಿದಾಗ ಕಲಾವಿದರು ಅದನ್ನು ಸ್ವೀಕರಿಸುವ ಗಂಭೀರ ಶೈಲಿ.

ಸೋವಿಯಟ್ಟಿನಲ್ಲಿ ಮಂತ್ರಿಗೂ ಹೆಚ್ಚಿನ ಸ್ಥಾನ ಕಲೆಗಾರರಿಗೆ ಮುಡಿಪು. ಅವರೂ ಸದಾಕಾಲ ಶ್ರದ್ಧೆಯಿಂದ ತಮ್ಮ ಕಲೆಯನ್ನು ಅಭಿವೃದ್ಧಿಪಡಿಸಲೆತ್ನಿಸುತ್ತಲೇ ಇರುತ್ತಾರೆ.

೭

ರುಮೇನಿಯಾ ಜನರು ಕೈಗೆಲಸಗಳಲ್ಲಿ ತುಂಬಾ ಕುಶಲರು; ಜನಪದ ಕಲೆಗಳಲ್ಲಿ ಅವರಿಗೆ ತುಂಬಾ ಆಸಕ್ತಿ, ಪ್ರೀತಿ. ಬುಖಾರೆಸ್ಟಿನ ನಾಟ್ಯಶಾಲೆ ಅತ್ಯಾಧುನಿಕವಾಗಿ ತೋರಿತು. ಸಾವಿರಾರು ಜನ ಸೇರಿದ ಸಭೆಯಲ್ಲಿ ಒಂದು ಧ್ವನಿವರ್ಧಕ ಯಂತ್ರವೂ ಇರಲಿಲ್ಲ.

“ ಗುಪ್ತವಾಗಿ ಇಟ್ಟಿದ್ದರೇನೋ ”.

ಅದು ತಿಳಿಯದು. ಅವರಿಗೆ ನಮ್ಮ ಶಾಸ್ತ್ರೀಯ ಸಂಗೀತ ತುಂಬ ಇಷ್ಟ. ಅಲ್ಲಿ ಅತ್ಯಂತ ಸುಂದರವಾದ ಅರಮನೆಯೊಂದಿದೆ. ಅದನ್ನು ಇಷ್ಟೂ ಮಾಸದಂತೆ ಇಟ್ಟುಕೊಂಡಿದ್ದಾರೆ: ನಡೆದರೆ ನೆಲ ಮಾಸುವುದೆಂದು ಅವರು ಪ್ರವಾಸಿಗಳಿಗೆ ಬಟ್ಟೆಯ ಪಾದರಕ್ಷೆಗಳನ್ನು ಒದಗಿಸುತ್ತಾರೆ.

“ ಪಾದರಕ್ಷೆಯೇನು, ಅರಮನೆಯ ನೆಲವನ್ನು ರಕ್ಷಿಸುವ ಉಪಾಯ!”

ಹೌದು !........

೮

ಅಲ್ಲಿಂದ ಬಲ್ಗೇರಿಯಾ ರಾಜಧಾನಿ ಸೋಫಿಯಾವನ್ನು ತಲಪಿದೆವು. ಆಗ ಮಳೆ ಸುರಿಯುತ್ತಿತ್ತು. ಅಲ್ಲಿನ ಹಾಡುಗಳು ನಮ್ಮ ಹಾಡುಗಳನ್ನು ಹೆಚ್ಚಾಗಿ ಹೋಲುತ್ತವೆ. ಇನ್ನೊಂದು ತಮಾಷೆ. ಮಾತಾಡುವಾಗ ನಾವು ತಲೆಯನ್ನು ಕೆಳಕ್ಕೆ ಇಳಿಸಿದರೆ ನಮ್ಮ ದೇಶದಲ್ಲಿ ಅರ್ಥ “ ಹೌದು ” ಎಂದು, ಅಲ್ಲಿನ ಅರ್ಥ “ಇಲ್ಲ” ಎಂದು. ಹಾಗೆಯೇ ನಾವು ತಲೆಯನ್ನು ಅಲ್ಲಾಡಿಸಿದರೆ ನಮ್ಮ ದೇಶದಲ್ಲಿನ ಅರ್ಥ “ಇಲ್ಲ” ಎಂದು, ಅಲ್ಲಿನ ಅರ್ಥ “ಹೌದು” ಎಂದು. ನಮಗೆ ಈ ವಿಷಯ ತಿಳಿಯದೆ ಸಂಭಾಷಣೆಗಳಲ್ಲಿ ತುಂಬ ಪೇಚಾಡಿದೆವು. ನಾನು ಬರೆದ ಒಂದು ಸಣ್ಣ ಲೇಖನವನ್ನು ಅಲ್ಲಿನ ಮಕ್ಕಳ ಪತ್ರಿಕೆಯೊಂದು ಪ್ರಕಟಿಸಿತು.

೯

“ ಅಲ್ಲಿಂದ ಯುಗೋಸ್ಲಾವಿಯಾಕ್ಕೆ ಹೋದಿರೆಂದು ಇಲ್ಲಿನ ವಾರ್ತೆ ತಿಳಿಸಿತು........”

ಅಲ್ಲಿಂದ ಯುಗೋಸ್ಲಾವಿಯಾ. ಬೆಲ್‌ಗ್ರೇಡ್ ರಾಜಧಾನಿಗಿಂತ ಬ್ರಿಯೋನಿ ಮಾಯಾ ದ್ವೀಪ ನನ್ನನ್ನು ಬೆರಗು ಮಾಡಿತು. ಕಪ್ಪು ನೀಲಿಯ ತೆರೆಗಳನ್ನುಟ್ಟು ಏಡ್ರಿಯಾಟಿಕ್ ಸಮುದ್ರ ಈ ದ್ವೀಪದ ಸುತ್ತ ಬಿಳಿಬಿಳಿ ನೊರೆಗಳಾಗಿ ಒಡೆಯುತ್ತದೆ. ಮನೋಹರವೂ ಶಾಂತವೂ ಆದ ತಪೋವನದಂತಿದೆ ಬ್ರಿಯೋನಿ. ಅಲ್ಲಿಂದ ನಾವು ಉಪಾತ್ಯವೆಂಬ ಇನ್ನೊಂದು ಪಟ್ಟಣಕ್ಕೆ ಬಂದೆವು; ಆಗ ಊರನ್ನು ಸುತ್ತುಗಟ್ಟಿದ ವೃಕ್ಷ ಪಂಕ್ತಿಗಳಲ್ಲಿ ಎಲೆಗಳ ಹಸುರು ಹೊಂಬಣ್ಣಕ್ಕೆ ತಿರುಗಿತ್ತು. ಬಂಡೆಗಳ ಮೇಲಿನ ತಾಮ್ರವರ್ಣದ ಹೂಗಳ ಹೊದಿಕೆ ಕಣ್ಣಿಗೆ ನುಣುಪಾಗಿತ್ತು.

ಲ್ಯೂಬ್ರಿಯಾನಾ ಬೆಟ್ಟಸೀಮೆಯ ಊರು; ಪ್ರವಾಸಿಗಳ ಕೇಂದ್ರ.

" ಅದರ ಸ್ಪೆಲ್ಲಿಂಗ್?"

Ljubljana ! ಅಲ್ಲಿ ಒಬ್ಬಳೇ ಆಂಗ್ಲ ಉಪಾಧ್ಯಾಯಿನಿ ಸಿಕ್ಕಿದಳು; ಎತ್ತರವಾದ ಮನೆಯೊಂದರ ೫ ನೆಯ ಅಂತಸ್ತಿನಿಂದ ಊರ ಚೆಲುವನ್ನು ತೋರಿಸಿದಳು. ಪುಸ್ತಕಗಳನ್ನು ಕೆಳಗಿಟ್ಟು ಅವಳು ತುಂಬು ನೀಲಿಯ ಕಣ್ಣನ್ನು ತೆರೆದಾಗ, ಈ ಊರು ಅವಳಿಗೆ ಎಷ್ಟು ಪ್ರಿಯವಾಗಿದೆ, ಎಂಬುದು ನನಗೆ ತಿಳಿಯಿತು.

೧೦

"ನಮ್ಮ ಪ್ರವಾಸದ ಕಡೆಯ ರಾಷ್ಟ್ರ ಹಂಗೆರಿ. ನಮ್ಮ ಶಾಸ್ತ್ರೀಯ ಸಂಗೀತದಲ್ಲಿ ಹಂಗೇರಿಯನ್ನರಿಗೆ ತುಂಬ ಪ್ರೀತಿ. ಡ್ಯಾನ್ಯೂಬ್ ನದಿಯ ದಡದಲ್ಲಿರುವ ಬುಡಾಪೆಸ್ಟಿನಲ್ಲಿ ನಾವು ಒಂದು ದೊಡ್ಡ ಕಛೇರಿಯನ್ನು ನಡೆಸಿದೆವು. ಹಂಗೆರಿಯ ಸಂಗೀತವನ್ನೂ ಕೇಳಿದೆವು. ಅಲ್ಲಿ ಒಂದು ಟಾಗೋರ್ ಸೊಸೈಟಿ ಇದೆ. ನಾವು ಅಲ್ಲಿಗೆ ಭೇಟಿ ಕೊಟ್ಟಾಗ ಗುರುದೇವನ ಭಾವ ಚಿತ್ರದ ಅನಾವರಣೋತ್ಸವ ನಡೆಯಿತು. ಸಂಸ್ಕೃತಿಯ ಪರಿಚಯ ನಮ್ಮ ಅಲ್ಲಿನ ಜನಕ್ಕೆ ಚೆನ್ನಾಗಿ ಆಗಿದೆ. ಅಲ್ಲಿನ ಉತ್ತಮ ಸಂಗೀತಗಾರರ ಸಂತೋಷಧ್ವನಿ ಇನ್ನೂ ಕಿವಿಯಲ್ಲಿ ಮೊಳಗುತ್ತಲೇ ಇದೆ.

೧೧

ಪೂರ್ವ ಯೂರೋಪಿನ ಯಾತ್ರೆಯನ್ನು ಮುಗಿಸಿಕೊಂಡು ನಾವು ಬುಡಾಪೆಸ್ಟಿನಲ್ಲಿ ವಿಮಾನದಲ್ಲಿ ಕುಳಿತು ಕೈರೋ ಮಾರ್ಗವಾಗಿ ಬೊಂಬಾಯನ್ನು ೯-೧೦-೫೬ರಂದು ತಲುಪಿದೆವು. ಸಮುದ್ರ ತೀರದಲ್ಲಿ ಕೋಟಿದೀಪಗಳಿಂದ ಅಲಂಕೃತವಾದ ನೇಪಲ್ಸ್ ನಮಗೆ ಶುಭಾಶಯಗಳನ್ನು ಬಯಸುವಾಗ ನಮಗೆ ನಿದ್ದೆ ಬರುತ್ತಿತ್ತು. ಆ ಶುಭಾಶಯಗಳ ಪ್ರತೀಕದಂತೆ ಬೊಂಬಾಯಿ ಮತ್ತೆ ನಮ್ಮನ್ನು ಇಳಿಸಿಕೊಂಡಿತು. ಎದೆ ಮಿಡಿಯುವ ಹಸುರು ಬಯಲಿನ ಮೇಲೆ ನಗುತ್ತ ನಡೆದು ಬಂದೆವು.

ವಿಮಾನ ಇಳಿದಾಗ ಲೆಕ್ಕ ಹಾಕಿಕೊಂಡೆ; ನಾನು ಭಾರತವನ್ನು ಬಿಟ್ಟು ಅಂದಿಗೆ ಮೂರು ತಿಂಗಳಾಗಿತ್ತು.

ಕನ್ನಡದಲ್ಲಿ ನವ್ಯಕಾವ್ಯ ಸ್ವರೂಪ

ಕಾವ್ಯವನ್ನು ವಸ್ತು ಸ್ವರೂಪ ಛಂದಸ್ಸು ಎಂದು ವಿಂಗಡಿಸುವುದರಿಂದ ಮೂವರು ಮಾತಾಡಲು ಅವಕಾಶವಾಗಿದೆ. ಇವು ಒಂದನ್ನೊಂದು ಬಿಟ್ಟಿರ ಲಾರವು ಎಂಬುದು ನಿಜ.

ಅಕ್ಷರಗಳು ಪದಗಳ ಅವಯವಗಳು. ಪದಗಳು ಪಂಕ್ತಿಗಳಾಗಿ ಕಣ್ಣಿಗೆ ಬಿದ್ದು, ನಾದವಾಗಿ ಛಂದಸ್ಸಾಗಿ ಕಿವಿಗೆ ಬಿದ್ದು ಬೆಳಕಾಗಿ ನೆರ ಳಾಗಿ ಬುದ್ಧಿಯನ್ನು ದಾಟಿ ಹೃದಯ ಮಂಡಲದಲ್ಲಿ ಪ್ರತಿಧ್ವನಿಸುತ್ತವೆ. ಆ ಪ್ರತಿಧ್ವನಿಗಳ ಸರಸ ವಿರಸ ವ್ಯೂಹವೇ ಕಾವ್ಯ.

ಕಾವ್ಯದ ದೃಶ್ಯಾದೃಶ್ಯ ಶರೀರದೊಳಗಿರುವುದೆಲ್ಲ ಕಾವ್ಯವಸ್ತು ; ಕಾವ್ಯ ವಸ್ತುವಿನ ಪರಿಚಯ ನಮಗಾಗುವುದು ಅದಕ್ಕೊಂದು ಸಿದ್ಧರೂಪವಿರು ವುದರಿಂದ. ಒಂದೊಂದು ಕಾವ್ಯಕ್ಕೂ ಒಂದೊಂದು ವಸ್ತು ಒಂದೊಂದು ಸ್ವರೂಪ ಇರುತ್ತವೆ. ಕಾವ್ಯವಸ್ತು ನೂತನವಾದಾಗ ಮಾತ್ರ ಕಾವ್ಯದ ಸ್ವರೂಪ ಜೀವಂತವಾಗುತ್ತದೆ.

' The living body of a new content '
ಇದು ಕಾವ್ಯಸ್ವರೂಪ, ನವ್ಯ ಕಾವ್ಯಸ್ವರೂಪ.

ತನ್ನ ಒಳ ಹೊರಗಿನ ಅನುಭವಗಳಲ್ಲಿ ಹೊಸತನವನ್ನು ಕಾಣುವ ಕವಿ ನವ್ಯಕವಿ. ತನ್ನ ಅನುಭವಗಳಿಗೆ ಹಿಂದಿನಿಂದ ಬಂದಿರುವ ಬೆಲೆಗಳನ್ನೆ ಕೊಡುತ್ತ ಸಂಪ್ರದಾಯದಲ್ಲಿ ಹಿತವನ್ನು ಕಾಣುವ, ಮತ್ತು ತನ್ನ ಕಾಲದ ಹೊಸತನದಲ್ಲಿ ನಂಬಿಕೆಯಿಲ್ಲದ ಕವಿ ನವ್ಯಕವಿಯಲ್ಲ. ಇವರಿಬ್ಬರ ದೃಷ್ಟಿ ಭೇದವನ್ನು ಕಾವ್ಯವಸ್ತುವಿನಲ್ಲಿ ಕಾವ್ಯಸ್ವರೂಪದಲ್ಲಿ ಕಾಣಬಹುದು.

ಹೊಸಕನ್ನಡ ಕವಿತೆ ಪಂಡಿತರ ಕೋಟೆಯನ್ನು ದಾಟಿ ೫೦ ವರುಷ ಆಗಿದೆ. ಇಂಗ್ಲಿಷನ್ನು ಅನುಸರಿಸಿ ಅವಳ ತೊಡಿಗೆ ಇವಳಿಗಿಟ್ಟದ್ದರಿಂದ ಲಾಭವಾಗಿದೆ. ಶುಚಿ, ರುಚಿ, ವಿವಿಧತೆ, ಗುಣಗಾತ್ರಗಳಲ್ಲಿ ಒಂದು ಪ್ರಬಲ ಸಂಪ್ರದಾಯವೂ ಬೆಳೆಯಿತು. ತಂತ್ರ ಹೊರಗಿನದಾದರೂ ಅದು ಕಟ್ಟಿದ ಕನಸು ಕಂಡ ಬದುಕು ನಮ್ಮವಾದ್ದರಿಂದ ಕವಿತೆ ಜನಪ್ರಿಯವಾಯಿತು. ಅದರ ಹೆಸರಿನಲ್ಲಿ ಇತ್ತೀಚಿಗೆ ಬಂದಿರುವ ಹೆಚ್ಚು ಬರೆವಣಿಗೆಯಲ್ಲಿ ಏನು

ಹೋಗಿದೆ ಏನು ಬಂದಿದೆ ಎಂಬುದು ಇಂದಿನ ಭಾಷಣದ ವಿಷಯವಲ್ಲ. ಏನಾಗಲಿ, ಇವಕ್ಕೆ ತಮ್ಮ ಕಾಲದ ಬೆಳವಣಿಗೆಯನ್ನಾಗಲಿ ಈ ಲೋಕದ ಸಮಸ್ಯೆಯನ್ನಾಗಲಿ ನೋಡುವ ಸ್ಥೈರ್ಯವಿಲ್ಲ ಎನ್ನಬಹುದು; ವಾಸ್ತವಿಕ ಲೌಕಿಕ ನೆಲೆಗಳಿಂದ ಬರವಣಿಗೆ ಸರಿಯಿತು. ಹಣ್ಣೆಲೆಯಮೇಲೆ ಗಾಳಿ ಬೀಸಿತು. ಒಂದು ಸಂಪ್ರದಾಯ ಇನ್ನೊಂದಕ್ಕೆ ದಾರಿಕೊಟ್ಟಿತು.

ಕವಿತೆ ಜೀವ-ಶಕ್ತಿ; ಹರಿಯುವ ನದಿ; ಕೊಳೆಯುವ ನೀರಲ್ಲ. ಅಡ್ಡಬಂದ ಬೇಸರದ ಬಯಲನ್ನು ದಾಟಿ ಹೊಸ ಕನ್ನಡಕವಿತೆ ಎಂಬ ಎರಡನೆಯ ಹೆಜ್ಜೆ ಇಡುತ್ತಿದೆ.

ನವ್ಯಕವಿತೆ ಇಂದಿನ ತೊಡಕುಗಳನ್ನು ಕಾಣುತ್ತಿದೆ. ಅಣುಬಾಂಬಿನ ಅವತಾರದಿಂದ ಮುಖವನ್ನು ಕಾಸಿನಗಲ ಮಾಡಿಕೊಂಡು ಉರುಳುತ್ತಿರುವ ಭೂಮಿಯನ್ನು ನವ್ಯಕವಿ ನೋಡುತ್ತಿದ್ದಾನೆ.

The age demanded an image
Of its accelerated grimace

ಕಾಲಪುರುಷನ ಕಠೋರ ಸ್ವರೂಪವನ್ನು ಚಿತ್ರಿಸತೊಡಗಿದ್ದಾನೆ ನವ್ಯಕವಿ.

ಸಾಕಪ್ಪಾ ಸಾಕು ಈ ಗುಲಾಬಿಹೂಗಳು
ಹಾಡುವ ಕವಿಗಳು
ಎಲ್ಲಾ ಚಿಕ್ಕಣ್ಣಯ್ಯಗಳು
ಕೈ ಎತ್ತುವ ಬಲವಿಲ್ಲದ ಗುಜ್ಜಾರಿಗಳು

I weary of the roses and the singing poets ;
Josephs all, not tall enough to try

ಎಂಬ ದ್ಯಾವಾಪೃಥ್ವಿಯ ಮೂದಲಿಕೆಗೆ ಬೆರಗಾಗಿದಾನೆ.

ನೆಲದಮೇಲೆ ಹೆಜ್ಜೆಯೂರಿ ನಿಂತು ತನ್ನ ಕಾಲದ ಬಿರುಗಾಳಿಗೆ ಕೊಳಲಾಗುತ್ತಿದ್ದಾನೆ ನವ್ಯಕವಿ; ಇಂದಿನ ಇಂಗ್ಲಿಷ್ ಕವಿಗಳ ಮಾರ್ಗ ದರ್ಶನದಲ್ಲಿ ತನ್ನ ಅನುಭವವನ್ನು ತೀವ್ರವಾಗಿ ಸಂಗ್ರಹವಾಗಿ ನಾಟಕೀಯ ವಾಗಿ ತೊಡಕು ತೊಡಕಾಗಿ ನುಡಿಯುವ ತಂತ್ರವನ್ನು ಕಲಿಯುತ್ತಿದ್ದಾನೆ.

ನವ್ಯಕವಿತೆಯಲ್ಲಿ ವಿವಿಧತೆ ವಿಪುಲತೆಗಳಿಲ್ಲ; ಇದಿನ್ನೂ ಐದಾರು ವರುಷದ ಬದುಕು. ಪ್ರಯೋಗ ಸ್ಥಿತಿಯಲ್ಲಿದೆ, ಸಂಶೋಧನೆ ನಡೆಯುತ್ತಿದೆ.

ಇಂದಿನ ಸಮಸ್ಯೆಗಳಿಗೆ ಕೈಹಾಕಿರುವುದರಿಂದ, ಸಂಪ್ರದಾಯಕ್ಕೆ ಎದುರು ಬಿದ್ದಿರುವುದರಿಂದ ಇವರ ನುಡಿ ವಕ್ರ. ಈ ಕೆಸರು ಕಿಸರು ಕಳೆದು ಹೋಗಲು ಕಾಲವೂ ಬೇಕು.

ನವ್ಯಕಾವ್ಯದ ಸ್ವರೂಪವನ್ನು ಕೆಲವು ಪಂಕ್ತಿಗಳಿಂದ ಗುರುತಿಸ ಬಹುದು.

ಹಳೆಯ ಮನೆಯ ಮುರುಕು ಜಂತಿಯಮೇಲೆ ಮುದಿಗೂಬೆ—

'ಯುಗಾದಿ' ಎಂಬ ನವ್ಯಕಾವ್ಯ ಹೀಗೆ ಪ್ರಾರಂಭವಾಗುತ್ತದೆ. ಕವನದ ಅಂಕಿತಕ್ಕೂ ಶರೀರಕ್ಕೂ ನಡುವೆ ಸಂಬಂಧವಿಲ್ಲದಂತೆ ಮಾಡುವುದು ಒಂದು ತಂತ್ರ. ಈ ತಂತ್ರವೇ 'ದೀಪಾವಳಿ' ಎಂಬ ಕಾವ್ಯದ

ಎಲಾ ಇವನ! ಕಿಟಕಿಯೆಲ್ಲ ಮುಚ್ಚಿದ, ಕದವಿಕ್ಕಿದ

ಎಂಬ ಮೊದಲ ಪಂಕ್ತಿಯಲ್ಲಿ ಹೆಚ್ಚು ನಾಟಕೀಯವಾಗುತ್ತದೆ.

ಪಂಕ್ತಿಪಂಕ್ತಿಗೆ ಸಂಬಂಧವಿಲ್ಲದಂತೆ ಮಾಡುವುದು ಇನ್ನೊಂದು ತಂತ್ರ. ಈ ಗುಣಕ್ಕೆ 'ಗಾರುಡಿ' ಎಂಬ ಕಾವ್ಯದ

ಕುಣಿದು ಕುಪ್ಪಳಿಸಿದ್ದ ಹುಲ್ಲೆಮರಿ–ನಗೆಮಾತು ಗಾಜುಮನೆ ಮೀನಾಯ್ತು
ಚಮಚ ಟೀಕಪ್ಪುಗಳ ಕಣ್ಗೆ ಮಂಪರು ಬಂತು

ಎಂಬೆರಡು ಪಂಕ್ತಿಗಳು ಸಾರ್ಥಕ ನಿದರ್ಶನ.

ಪ್ರತಿಮೆಗಳಿಂದ, ಮುಖ್ಯವಾಗಿ ಭೌತಿಕ ಪ್ರತಿಮೆಗಳಿಂದ ಭದ್ರವಾದ ಕಾವ್ಯವನ್ನು ಕಟ್ಟುವುದು ಇನ್ನೊಂದು ನವ್ಯತಂತ್ರ. ಕೆಲವು ಕವನಗಳಿಂದ ಬಿಡಿಸಿದ ಈ ಪ್ರತಿಮೆಗಳ–ಅಲ್ಲ ಉಪಪ್ರತಿಮೆಗಳ–ಚೆಲುವನ್ನೂ ಶಕ್ತಿಯನ್ನೂ ನೋಡಿ:—

ಸಪ್ತ ಲೋಕಗಳ ಹುತ್ತಹುತ್ತದೊಳ ಫಣಾರತ್ನಚೀಲ
ಹೊತ್ತು ತಲೆಯ ಮೇಲಂಬೆಗಾಲ ಲೀಲೆಯಲಿ ಬರುವ ಬಾಲ

* * *

ಈ ದಿಗಂಬರ ಚಕ್ರವರ್ತಿಗಿಲ್ಲವೆ ಮೈಯಮೇಲೆ ಪರಿವೆ
ಉಟ್ಟು ಬಂದಿದ್ದಾನೆ ಪ್ರಶ್ನೆಗಳ ಅರಿವೆ.
ಕತ್ತಲೆಯಲಿ ಬತ್ತಲೆಯಲಿ ತಲೆಗೆದರಿದೆ ಬದುಕು
ಕಣ್ಣೆಲ್ಲೊ ಎತ್ತರದಲಿ ತುಟಿ ದುಃಖದ ಬಿರುಕು

* * *

ಬೆಳಕು ತಮದ ವಿಕಾರ ?

* * *

ಬೆಳಕು ಬೆಂಕಿಯ ನಾಲಗೆ.

* * *

ಮೊದಲ ಮಾನವ ನಾನು ಹಣ್ಣೆಲೆಯ ನೆರಳಾಗಿ ನೀರಿಗಿಳಿದೆ.
ಚಕ್ರರಹಿತ ಮನೋರಥಗಳ ಕಾಮದಹನ ಕಾಷ್ಠವ್ಯಸನದ
ವಕ್ರಮಾರ್ಗದ ಸೀಮಾರೇಖೆಯ ದಾಟಿ ಹೋಗುತಿವೆ
ನಿತ್ಯಜೀವನದ ನಿರಾಧಾರ ಪರಂಜ್ಯೋತಿ.

* * *

ಇಷ್ಟಾದರೂ ಅನೇಕ ಉಪಪ್ರತಿಮೆಗಳ ಕೇಂದ್ರೀಕರಣದಿಂದ ಮೂಲ ಪ್ರತಿಮೆ ಮೂಡಿರುವ ಸಂದರ್ಭಗಳು ವಿರಳ. ಇದಕ್ಕೆ ಕಾರಣ: ಕವಿಯ ಪ್ರಧಾನದರ್ಶನ ಕವಿತೆಯಲ್ಲಿ ಬಹುತರ ಪ್ರಕಾಶಗೊಳ್ಳದಿರುವುದು.

ಸಂಕೇತಗಳ ಬಳಕೆ ನವ್ಯಕಾವ್ಯದ ಇನ್ನೊಂದು ತಂತ್ರ. ಕಾಮ ವಾಸನೆಗೆ (ಇಂಗ್ಲಿಷಿನ) ಕಾಡುಬೆಕ್ಕು, ಮುಗ್ಧತೆಗೆ 'ಮಗು', 'ಹುಲ್ಲೆ' ಇತ್ಯಾದಿ. ಜನ ಆಡುವ ಮಾತಿನಲ್ಲೇ ಬೇಕಾದಷ್ಟು ಸಂಕೇತಗಳಿವೆ. ಅವನ್ನು ಬಳಸುವುದರಿಂದ ನವ್ಯಕವಿತೆಗೆ ನಮ್ಮ ನಾಡಿನ ಜೀವನದ ತೇಜಸ್ಸು ಬರುತ್ತದೆ.

ಮುಕ್ತ ಛಂದಸ್ಸನ್ನು ಸ್ವಾಭಾವಿಕವಾಗಿ ನಡಸುವುದರಲ್ಲಿ ಕಾವ್ಯಪಂಕ್ತಿಯ ಉದ್ದದ ನಿರ್ಣಯದಲ್ಲಿ ನವ್ಯಕವಿತೆ ಇಂಗ್ಲಿಷಿನಿಂದ ಕಲಿಯಬೇಕಾದ ಪಾಠ ಬಹಳವಿದೆ.

ಕೊಲುವದನಿ, ಕೊಂದು ಬದಕಿಸುವ ದನಿ : ಸಾವೆನೆಂಬಾಸೆ
ಕೆರಳಿಸುವ ಜೀವೋತ್ತರ ದನಿ.

ಇವು ಎರಡು ಪಂಕ್ತಿಗಳಾಗಿರುವುದಕ್ಕಿಂತ

ಕೊಲುವ ದನಿ
ಕೊಂದು ಬದುಕಿಸುವ ದನಿ
ಸಾವೆನೆಂಬಾಸೆ ಕೆರಳಿಸುವ ಜೀವೋತ್ತರ ದನಿ

ಎಂದು ಮೂರು ಪಂಕ್ತಿಗಳಾಗುವುದು ಸೂಕ್ತ; ಧ್ವನಿಯ ದೃಷ್ಟಿಯಿಂದ,

ಅರ್ಥದ ದೃಷ್ಟಿಯಿಂದ. ನವ್ಯ ಕವಿತೆಯಲ್ಲಿ ವಿರಾಮ ಚಿಹ್ನೆಗಳನ್ನು ಬಳಸುವವರಿದ್ದಾರೆ; ಬಿಟ್ಟವರಿದ್ದಾರೆ. ಬಿಟ್ಟವರೂ ಅವನ್ನು ಬರವಣಿಗೆಯಲ್ಲಿ ಬಿಟ್ಟಿರುತ್ತಾರೆಯೇ ಹೊರತು, ಕವನವನ್ನು ಓದುವಾಗ—ಅವು ಅಲ್ಲಿವೆಯೆಂದೇ ತಿಳಿದು ಓದುತ್ತಾರೆ. ನವ್ಯಕವಿಗಳು ಬಹಳ ನಾಟಕೀಯವಾಗಿ ಓದುತ್ತಾರೆ.

ಹೊರನೋಟಕ್ಕೆ, ಓದಿಕೊಳ್ಳುವುದಕ್ಕೆ ನವ್ಯ ಕವಿತೆ ಯಾವ ಕಷ್ಟವನ್ನೂ ಕೊಡುವುದಿಲ್ಲ. ಸದ್ಯಕ್ಕೆ ಪದಗಳನ್ನು ಅಕ್ಷರಗಳಾಗಿ ಒಡೆಯುವುದಾಗಲಿ, ನಾಗಬಂಧ ಚಕ್ರಬಂಧಗಳಾಗಲಿ A poem in seven spaces ಮಾದರಿಯ ಚಿತ್ರ ವಿಚಿತ್ರ ಕವನಗಳಾಗಲಿ ಇನ್ನೂ ಬಂದಿಲ್ಲ. ಅಚ್ಚುಮಾಡುವ ಕ್ರಮದಲ್ಲೂ ಹೆಚ್ಚು ಬದಲಾವಣೆಯಾಗಿಲ್ಲ, ಪದ್ಯವನ್ನು ಗದ್ಯದಂತೆ ಮುದ್ರಿಸುತ್ತಿಲ್ಲ. ನಾಮಪದಗಳಿಗೆ ಈಗ ಅಗತ್ಯವಿಲ್ಲದ ಪ್ರತ್ಯಯವನ್ನೆ ಬಿಡಲಾರದಷ್ಟು ಭಯಸ್ತರಿದ್ದಾರೆ ನವ್ಯಕವಿಗಳಲ್ಲಿ; ಅವರಿನ್ನೂ 'ಗೋಮೇಧಿಕವು' 'ರಥವು' ಎಂದೇ ಬರೆಯುತ್ತಿದ್ದಾರೆ. ಛಂದಸ್ಸನ್ನು ಬದಲಿಸಿಕೊಳ್ಳುತ್ತೇವೆ ಎಂದು ಹೊರಟವರು ಪಾದಪೂರಣಕ್ಕೆ ಗಮನ ಕೊಟ್ಟಿದ್ದಾರೆ ಮನಸ್ಸುಮಾಡಿದರೆ

'ತಾರಕದೆತ್ತರ ಪಂಚಮದಾಚೆಗೆ ಗೊಂಚಲು
ದ್ರಾಕ್ಷಿಯ ಮಿನುಗಿತ್ತು' ಎಂದೂ
'ತುಟಿಯ ಕಚ್ಚಿ ಮಾಧವಿ ನಸುಸುಯ್ಯೆ
ಕಣ್ಣ ಮಿಟುಕಿಸಿತು ತಾರೆ' ಎಂದೂ

ಇವರಿಗೆ ಸರಿಬೀಳದ ರೊಮ್ಯಾಂಟಿಕ್ ಕವಿಗಳಿಗಿಂತ ಮಧುರವಾಗಿ ಬರೆಯುತ್ತಾರೆ. ಇಲ್ಲದಿದ್ದರೋ ಹೆಣ, ಚಟ್ಟ, ಗೋರಿ, ಮೂಳೆ, ವ್ಹಿಸ್ಕಿ, ಅದು ಇದು ಎಲ್ಲ ಪ್ರಾರಂಭವಾಗುತ್ತದೆ. ನವ್ಯಕಾವ್ಯದಲ್ಲಿ ಈಗ ಕಾಣುವುದೇನು ? ಪಂಕ್ತಿ ಪಂಕ್ತಿಗಳ ದಿಕ್ಕು ಪಾಲು ನೋಟ; ಶೈಲಿಯ ತೊಡಕು ಬಳುಕು; ಪದಗಳ ವಿಚಿತ್ರ ಜೋಡಣೆ, ಬೆಸುಗೆ; Beria Behring sea, Babel Mandeb, Gulf Stream, Canute, Road Engine, Torch, Watch, etc. etc. ಇಂಗ್ಲಿಷ್ ಪದಗಳ, ಇಂಗ್ಲಿಷ್ ವಾಕ್ಯಗಳ, ಬೆರಕೆ; ಪ್ರತಿಮೆ ಸಂಕೇತಗಳ ಬಳಕೆ; ಸರ್ವಮುಕ್ತಛಂದದ ನಿಲ್ದಾಣಗಳಿರದ ರೈಲು ಮಾರ್ಗಗಳು; ಪ್ರಾಮಾಣಿಕತೆಯ ಹೆಸರಿನಲ್ಲಿ ತೋರಿದ್ದನ್ನು ಝಾಡಿಸಿ ಬಿಡುವ ಸಣ್ಣ ಶೌರ್ಯ; ಕಲ್ಪನಾ ರೇಡಿಯೋ ಕೇಂದ್ರಗಳಿಂದ ಏಕಕಾಲದಲ್ಲಿ

ಬೊಬ್ಬೆಯಿಡುವ ಬಿಸಿ ಹಸಿ ಸುದ್ದಿಗಳು. ಇವನ್ನು ಗೆದ್ದು ಹರಿಯುವ ಐದೋ, ಹತ್ತೋ ನಿರ್ಮಲಕಾವ್ಯ ಪಂಕ್ತಿಗಳು ನಮ್ಮನ್ನು ಬೆರಗು ಮಾಡುತ್ತವೆ. ಇವಿಷ್ಟರ ಹದ ಒಟ್ಟು ಕಾವ್ಯಕ್ಕೆ ಬಂದಿದ್ದರೆ!—ಆದರೂ ಇಂಥ ಕೆಲವೇ ಶಕ್ತ ಸುಂದರ ಕಾವ್ಯಪಂಕ್ತಿಗಳಿಗಾಗಿ ಅಷ್ಟೆಲ್ಲ ಅಬ್ಬರವನ್ನು ದಾಟಬಹುದು. ಆದರೆ ಈ

ಪಂಡಿತನೆ ಪಂಡ ಅಥವಾ ಪುಂಡ ಪಶುಕಲಿಯ
ಖಂಡದಲಿ ಮೇದಸ್ಸು, ಮೇದಸ್ಸು ವಿಜ್ಞಾನ
ಮುಂಡುತರ್ಕವಪಾಯ ಮಾನವೀ ಯಜ್ಞಕ್ಕೆ
ದಂಡವೇದದ ಸೂಕ್ತದನುವಾಕ........

ಎಂಬಂಥ ಒಣಪಂಡಿತತನ ಮಾತ್ರ ಖಂಡಿತವಾಗಿ ಯಾವ ಕಾಲಕ್ಕೂ ಕಾವ್ಯವಲ್ಲ.

ಇನ್ನು ಬುದ್ಧಿಪ್ರಾಧಾನ್ಯದ ವಿಷಯ. ಈಗಾಗಲೇ ಹೇಳಿರುವ ಸಂಗತಿಗಳಿಂದ ನವ್ಯ ಕವಿತೆ ಬುದ್ಧಿ ಪ್ರಧಾನವಾಗುತ್ತಿದೆ ಎಂಬುದೂ, ಇದು ಅದರ ಪ್ರಮುಖ ತಂತ್ರವೆಂಬುದೂ ಸ್ಪಷ್ಟ. ಒಂದೇ ಕವನ ಎರಡಾದರೂ ಮಟ್ಟಗಳಿಂದ ಮಾತಾಡಬೇಕು ಎನ್ನುವ ಸೂತ್ರದಿಂದ ಕ್ಲಿಷ್ಟತೆ ಹುಟ್ಟುತ್ತದೆ. ಎಚ್ಚರವಾದ ಮನಸ್ಸಿಗೆ ತೋರುವ ಸಂಗತಿಗಳಿಗೆ ಭಾವಗಳಿಗೆ ಪ್ರತಿಯಾಗಿಯೋ ಪೋಷಕವಾಗುವಂತೆಯೋ ಗುಪ್ತವಾದ ಮನಸ್ಸಿನ ಇತರ ಪದರಗಳಲ್ಲಿನ ಆಸೆ, ಕಲ್ಪನೆ ವೇದನೆಗಳನ್ನು ತುಂಬಿ ಒಂದು ಚಿತ್ರವನ್ನೋ ಸನ್ನಿವೇಶವನ್ನೋ ತಿಳಿಸುವುದು; ಪ್ರಪಂಚದ ಎಲ್ಲಿನದೋ ಯಾವುದೋ ಅನುಭವಕ್ಕೋ ಸಂಗತಿಗೋ ದೂರ ಸಂಬಂಧವನ್ನು ಕಲ್ಪಿಸಿ ಪ್ರಕರಣಕ್ಕೆ ಬೆಳಕು ಹಾಯಿಸುವುದು; ಸಹಜವಾಗಿ ಸುಲಭವಾಗಿ ಹೇಳುವುದಕ್ಕಿಂತ ಕಟುವಾದ ವಿಷಯವನ್ನು ದಾಳಿಮಾಡಿ ತೆಗೆದಂತೆ ತೀಕ್ಷ್ಣವಾದ ಕಹಿಯಾದ ವಿರಸವಾದ ಕಲ್ಪನೆಗಳನ್ನೆ ಬಳಸುವುದು, ಇತ್ಯಾದಿ ತಂತ್ರ ಪ್ರಕಾರಗಳಿವೆ. ನಮ್ಮ ಜನರ ಬದುಕು ಹಿಂದೂ ಇಂದೂ ಏನಾಗಿದೆ ಏನಾಗುತ್ತಿದೆ ಎಂಬುದಕ್ಕೆ ಬದಲಾಗಿ ಪಾಶ್ಚಿಮಾತ್ಯದ ಒಂದು ರೀತಿಗೆ ಮನಸೋತ ಚಿತ್ತವೃತ್ತಿ ಇಲ್ಲಿನ ಎಲ್ಲವೂ ಹಾಗಿದೆ ಎಂದು ಇಲ್ಲಿನ ಜೀವನಕ್ಕೆ ಅದನ್ನು ತೊಡಿಸುವುದರ ಫಲವಾಗಿ ನವ್ಯಕಾವ್ಯದ ಸ್ವರೂಪ ಅನೇಕವೇಳೆ ತನ್ನ ಸತ್ತ್ವಕ್ಕಿಂತ

ತಂತ್ರವೇ ಪ್ರಮುಖವಾಗಿ ಅನ್ಯದೇಶಿಯಾಗಿ ಕಾಣುತ್ತದೆ. ಇದು ನಮ್ಮ ವಸ್ತುವಾಗುವುದಕ್ಕೆ ಇನ್ನಷ್ಟುಕಾಲ, ಇನ್ನಷ್ಟು ಒಳನೋಟ ಅಗತ್ಯ. ತಂತ್ರ ವಸ್ತುವಿಗೆ ಅಧೀನವಾಗುವ ತನಕ (subordinating technique to substance) ಕಾವ್ಯದ ಸೆಳವು ನಿರ್ಧಾರ (What is the final conclusion of the poem) ಏನೆಂಬುದು ಹೊಳೆಯುವುದಿಲ್ಲ. ಚಮತ್ಕಾರ ಕವಿತೆಯಲ್ಲ.

The living body of a new content ಎಂಬ ಮಾತು ಮತ್ತೆ ಸ್ಮರಣೆಗೆ ಬರುತ್ತಿದೆ. ನವ್ಯಕವಿತೆ ಸಹಸ್ರಧಾರೆಗಳಾಗಿ ಏಕೆ ಹರಿಯುತ್ತಿಲ್ಲ, ಅದರ ಆಸೆ ಏನು ಎಂಬ ಪ್ರಶ್ನೆಗಳಿವೆ. ಇಲ್ಲಿ ನಿರಾಶೆಯ ಶಿಲ್ಪ ನಡೆದಿರು ವಷ್ಟು ಇತರ ಮಾನವ ಸಂಬಂಧಗಳು ಮೂಡಿಲ್ಲ ಎಂದು ಕಾಣುತ್ತದೆ. 'ನಮ್ಮ ಬಾಳಿನಲ್ಲಿ ಸಂತೋಷ ಕೊಡುವ ಅಷ್ಟೇನೂ ನನಗೆ ಕಂಡುಬಂದಿಲ್ಲ' ಎಂದು ಒಬ್ಬ ಕವಿ ಪ್ರಾಮಾಣಿಕವಾಗಿ ಹೇಳಬಹುದು; ಇದು ಸರ್ವದರ್ಶನ ತೀರ್ಥವೆಂದು ಯಾರೂ ಹೇಳಿಲ್ಲ. ಈ ನಿರಾಶೆಯನ್ನೆ ಸಮರ್ಥಿಸುವುದು-ಏಕನಯನ ವಿಮರ್ಶೆ; ಇದರಿಂದ ಪ್ರಯೋಜನವಿಲ್ಲ. 'Each animal is nothing but a parcel of joy' ಎಂಬುದು ನಿರಾಶೆಗಿಂತ ಭಯಂಕರವಾದ ಭರವಸೆ; ಸ್ವಂತ ಆಸೆ ನಿರಾಶೆಗಳಿಗಿಂತ ದೊಡ್ಡಮಾತು ನವ್ಯಕಾವ್ಯದಲ್ಲಿ ಅದರ ಶಕ್ತ, ಸುಂದರ, ವಾಸ್ತವಿಕ ಶೈಲಿಯಲ್ಲಿ ಮೂಡಬೇಕು. ಭೂಮಿಯಿಂದ ಬಾನಿಗೆ ಬೆಳೆದು ಸೃಷ್ಟಿ ರಹಸ್ಯವನ್ನು ಕೆಣಕಿ

Make clear the sky and grant us
To see with our eyes
In the light be it, though thou slay us

ಎನ್ನುವ ಹೊಸಕಾಲದ ವಜ್ರವಾಣಿಯಾಗಬೇಕು ನವ್ಯಕವಿತೆ.

ನೀಲಗಗನ, ಪೂರ್ಣಚಂದ್ರ

ಶರದ್ವಿಲಾಸ. ಸರಸ್ವತಿಯ ಮಂದಹಾಸ ಶರದಿಂದು ವಿಕಾಸದಂತೆ ಎನ್ನುವ ಮಾತಿದೆ.

'ಯಾ ಕುಂದೇಂದು ತುಷಾರ ಹಾರ ಧವಳಾ ಯಾ ಶುಭ್ರ ವಸ್ತ್ರಾನ್ವಿತಾ' ಎಂಬ ಸರಸ್ವತೀ ವರ್ಣನೆಯೂ ಸುಂದರವಾಗಿದೆ. ಆ ಸುದೀರ್ಘ ಸ್ವರಗಳ ಸಂಗೀತದಿಂದ ಎಚ್ಚರಗೊಳ್ಳದ ಕವಿ ಹೃದಯವಿಲ್ಲ. ನಿಜ; ಶರತ್ತಿನ ಅಧಿದೇವತೆ ಶಾರದೆ.

ವರುಷಕ್ಕೊಂದು ಸಲ ಕೊಂಡು ತಂದು ಪೂಜೆಮಾಡಿ ತಗುಲಿಹಾಕಿ ಬಿಡುವ ಪಂಚಾಂಗದ ನಾಲ್ಕು ಪುಟಗಳಲ್ಲಿ ಎಷ್ಟು ಪ್ರಿಯವಾದ ಹಬ್ಬಗಳು ಸೇರಿಕೊಂಡಿವೆ. ಶರತ್ಕಾಲದ ರಜತ ರಜನಿಯೋ ! ನಾವದನ್ನು ನೋಡುತ್ತಿದ್ದರೇ, ನಮಗದರ ಹಿರಿಮೆ ತಾನಾಗಿ ತಿಳಿಯುತ್ತದೆ.

ಶರತ್ಕಾಲದ ದೀರ್ಘರಾತ್ರೆಗಳು. ಶೀತಲವೂ ನೀಲವೂ ಆದ ಸುಕ್ಕಿಲ್ಲದ ರೇಶಿಮೆಯ ಹರಹಿನಂತಿರುವ ಅನಂತ ವಿಶಾಲ ಗಗನ ತಲದಲ್ಲಿ ಉದುರಿದ ತಾರೆಗಳ ಧೂಲಿಯಲ್ಲಿ ಚದುರಿಹೋಗಿರುವ ರತ್ನಕಾಂತಿ ; ಏಕಕಾಲದಲ್ಲಿ ನೆಲಬಾನ್ಗಳ ಎಲ್ಲಕ್ಕೂ ತಂಬೆಳಕನ್ನು ಲೇಪಿಸಿ ಭಾವಪ್ರಕಾರಗಳನ್ನೆಬ್ಬಿಸಿ ತಾನು ಮಾತ್ರ ಜಿತವಾಗಿ ನಿರಪರಾಧಿಯಂತೆ ಬೆಳಗುತ್ತಿರುವ ಪೂರ್ಣಚಂದ್ರ:—ಇವು ವರುಷ ವರುಷವೂ ಬದುಕಿನ ಆಕಾಂಕ್ಷೆಗಳಿಗೆ ಸ್ವಾಭಾವಿಕವಾಗಿ ಒದಗುವ ಭಾಗ್ಯಗಳು. ಚಂದ್ರಿಕೆಯ ಸ್ಪರ್ಶದಿಂದ ಮಂಕಾಗಿ ಕಾಣುವ ಎಲ್ಲಾ ಭಾಷೆಗಳ ಏಕೈಕ ಪುಸ್ತಕದಂತಿರುವ ಗಗನದ ಚಿತ್ರವಿಚಿತ್ರ ನಕ್ಷತ್ರ ಪುಟಗಳು ಕವಿಗಳ ಗಮನವನ್ನು ಸೆಳೆಯುವುದು ಸಹಜ.

ಕೆನ್ನೆ ತುಂಬಿದ ದುಂಡು ಮುಖದ ಪೂರ್ಣಚಂದ್ರನನ್ನು ವಾಲ್ಮೀಕಿ ಋಷಿಗಳು ಪ್ರೀತಿಯಿಂದ ಹರಸಿದ್ದಾರೆ—

ಸುಪ್ತೈಕ ಹಂಸಂ ಕುಮುದೈರುಪೇತಂ
ಮಹಾಹ್ರದಸ್ಥಂ ಸಲಿಲಂ ವಿಭಾತಿ।
ಘನೈರ್ವಿಮುಕ್ತಂ ನಿಶಿಪೂರ್ಣಚಂದ್ರಂ
ತಾರಾಗಣಾಕೀರ್ಣಮಿವಾಂತರಿಕ್ಷಂ ||

ಅವರು ಕಂಡ ಶರದೃತು—

ಬಿಳಿಮುಗಿಲು, ಚಂದ್ರ, ನದಿ, ಕಮಲ, ಹಂಸ, ತಂಗಾಳಿ, ತಾರೆ,
ನವಿಲು ಎದೆ ಮುತ್ತು ಹವಳ ಉಸಿರಲ್ಲಿ ಕರಗಿ ದನಿಗೊಂಡ ತನ್ನ ಭಾವ.

ಋಷಿ ಸ್ಪರ್ಶದಿಂದ ಭೌತಿಕವಸ್ತುವಾದ ಚಂದ್ರನಿಗೂ ಭವ್ಯತೆ ಒದಗಿದೆ. ಮಹಾಕವಿ ಕಾಳಿದಾಸನಾದರೋ ತನ್ನ ಉತ್ಕೃಷ್ಟ ಭಾವಗೀತೆಯಾದ ಮೇಘ ಸಂದೇಶದಲ್ಲಿ 'ಹರಶಿರಶ್ಚಂದ್ರಿಕಾ ಧೌತ ಹರ್ಮ್ಯಾ' ಎಂಬ ಒಂದು ಪದ ಪುಂಜವನ್ನು ಝುಳಪಿಸಿ, ಪೂರ್ಣಚಂದ್ರ ಕೈಲಾಸದ ಉನ್ನತಿಯಿಂದ ಯಕ್ಷನಗರದ ರಾಜಭವನಗಳನ್ನು ಬೆಳ್ಳಿಬೆಳಕಿಂದ ಚುಂಬಿಸುತ್ತಿರುವುದನ್ನು ಚಿರಸ್ಮರಣೀಯವಾಗಿ ಚಿತ್ರಿಸಿದ್ದಾನೆ.

ಬೇರೆ ದೇಶಗಳ ಬೇರೆ ಕಾಲಗಳ ಕವಿಗಳೂ ಶರತ್ತಿಗೆ ಒಲಿದಿದ್ದಾರೆ; ಅವರ Autumn ವರ್ಷಭಾಗಕ್ಕೂ ನಮ್ಮ ಶರತ್ತಿಗೂ ಸುಮಾರು ಹೋಲಿಕೆಯಿದೆ.

ಗ್ರೀಕ್ ಕವಯಿತ್ರಿ ಸ್ಯಾಫ್ಟೋ ತನ್ನ ಪ್ರೇಮಗೀತೆಯೊಂದರಲ್ಲಿ

ಶರದೃತುವಿನ ಗರಿಕೆಗಿಂತ ನಿಸ್ತೇಜವಾಗಿ
ವಿರಹದ ಜೊಂಪಿನಲ್ಲಿ ತಾರಾಡುತ್ತಿದ್ದೇನೆ

ಎಂದು ಆಕ್ಷೇಪಿಸಿದ್ದರೆ,
ಶೆಲ್ಲಿ—

ಶರತ್ತಿನಲ್ಲೊಂದು ಸಾಮರಸ್ಯವಿದೆ
ಅದರ ಬಾನಿನಲ್ಲೊಂದು ವಿಶಿಷ್ಟವಾದ ಹೊಳಪಿದೆ
ನೀವದನ್ನು ಬೇಸಗೆಯಲ್ಲಿ ಕಂಡೂ ಇಲ್ಲ, ಕೇಳಿಯೂ ಇಲ್ಲ

ಎಂದು ವಾದಿಸಿದ್ದಾನೆ.
ಕೋಲ್‌ರಿಜ್—

ಕಣ್ಣಿನ ಮೂಲಕ ನಮಗಾಗುವ ಅನುಭವಗಳಲ್ಲಿ
ನೀಲಗಗನ ಒಂದು ಹೃದ್‌ಭಾವದ
ಅತ್ಯಂತ ಸಮೀಪ ಸಂಬಂಧಿ

ಎಂದಿದ್ದಾನೆ.

ಚಂದ್ರನನ್ನು 'ಅಗಾಧ ಮೌನಿ' ಎಂದು ಕರೆದ (Immense and

silent Moon) ವಾಲ್ಟ್ ವ್ಹಿಟ್ ಮನ್—

ಓ ! ನೋಡು ಚಂದಿರನ ಏಳಿಗೆಯನು;
ಬೆಳ್ಳಿಗುಂಡಾಗಿ ಮೂಡಲಲಿ ಚಂದಿರನೇರಿ
ಚೆಲುವ ಚಿಮ್ಮುವನು ಮನೆಮನೆಯ ನೆತ್ತಿಯಮೇಲೆ
ರುದ್ರ ಪೈಶಾಚಿಕ ಚಂದಿರ,

ಎಂದು ಭಯಾಶ್ಚರ್ಯಗಳನ್ನು ವ್ಯಕ್ತಪಡಿಸಿದ್ದಾನೆ.

ತರುಣಕವಿ ಕೀಟ್ಸನ ಕಣ್ಣಿಗೆ ಚಂದ್ರ

ಶುಭದಿನದುಡುಗೆಯುಟ್ಟ ಮುಗ್ಧ ಸಂನ್ಯಾಸಿಯಂತೆ

ಕಾಣಿಸಿದನಂತೆ.

ಇನ್ನು ಬರ್ನ್ಸ್ ಕವಿಯ

ಬಿಳಿತೆರೆಯ ಹಿಂದೆ ಮುಳುಗುವ ಚಂದಿರ
ಭಗ್ನಪ್ರೇಮದ ದೀನವದನದ ದುಗುಡದ ಪ್ರತಿಮೆ.

ಈ ಸಂದರ್ಭದಲ್ಲಿ ನಾವು ಕೋಲ್‌ರಿಜ್ ಕವಿಯ ಕ್ರಿಸ್ಟಬೆಲ್ ಕವನದಲ್ಲಿ ಬರುವ "ತುಂಬಿದ್ದರೂ ಕಳೆಯಿಲ್ಲದ" ಮಾಯಾಚಂದ್ರನನ್ನೂ ಟೆನಿಸನ್ ಕವಿಯ ಮಾರ್ಟ್ ಡಿ ಆರ್ಥರ್ ಕವನದಲ್ಲಿ

ಇತ್ತ ಸಾಗರ ಅತ್ತ ಸರೋವರ ; ನಡುವೆ
ಮುರಿದ ಶಿಲುಬೆಯ ಹೊತ್ತ ಮುರಿದ ಪ್ರಾರ್ಥನಾಮಂದಿರದಮೇಲೆ
ಪ್ರಶಾಂತವಾಗಿ ಬೆಳಗುತ್ತಿರುವ ಪೂರ್ಣಚಂದ್ರನನ್ನೂ

ನೆನೆಯಬೇಕು.

ಪ್ರಾಚೀನ ಮಹಾಕವಿಗಳೂ, ಆಮೇಲೆ ಬಂದ ರೊಮ್ಯಾಂಟಿಕ್ (ಭಾವಪ್ರಧಾನ) ಕವಿಗಳೂ ಎದೆತುಂಬಿ ಚಂದ್ರಾರಾಧನೆಯನ್ನು ಮಾಡಿದ್ದರೆ ಆಶ್ಚರ್ಯವಿಲ್ಲ. ಆದರೆ ಗಟ್ಟಿಮನಸ್ಸಿನಿಂದ ಅಭೇದ್ಯ ಕಾವ್ಯಕೋಟೆಗಳನ್ನು ಕಟ್ಟಿಕೊಳ್ಳುತ್ತಿರುವ ಹೊಸ ಸುಳಿಯ ಕವಿಗಳ ನಾಯಕಮಣಿಯಾದ ಎಸ್ರಾಪೌಂಡ್ ಕೂಡ

ನೀಲಿ ನೀರೊಳಗೆ ಚಂದಿರ ಹಿರಿಯ ಮುತ್ತು ;
ಹರಿವ ನೀರೆನ್ನ ಬೆರಳಿಗೆ ತಣ್ಣಗಿತ್ತು.

ಎಂದಿರುವುದರಿಂದ ಕವಿಗಳಿನ್ನೂ ಸೋಲುತ್ತಲೇ ಇದ್ದಾರೆ ಎಂಬುದು ಸ್ಪಷ್ಟ.

ಈ ನೀಲ ಗಗನವನ್ನೂ ರಜತರಜನಿಯನ್ನೂ ಬಣ್ಣಿಸುವುದರಲ್ಲಿ ನಮ್ಮ ಕನ್ನಡ ಕವಿಗಳೂ ಹಿಂದೆ ಬಿದ್ದಿಲ್ಲ. ಶರತ್ಕಾಲ ಬಂದದ್ದರಿಂದ ಲೋಕಕ್ಕೆ ಕಣ್ಣು ಬಂದಹಾಗಾಯಿತು ಎಂದಿದ್ದಾನೆ, ಮಹಾಕವಿ ಪಂಪ; ಇಷ್ಟನ್ನು ಎಲ್ಲರೂ ಹೇಳಿಯಾರು. ಆದರೆ ಶರನ್ನೀಲ ಗಗನವನ್ನು 'ಸಾಣೆ ಹಿಡಿದು ಹುಳಿಯಾಡಿಸಿ ಒರೆಯೊಳಗಿಟ್ಟಿದ್ದ ನೀಲಿಯಲುಗಿನ ಕತ್ತಿಯನ್ನು ಹೊರಗೆಳೆದಂತಿತ್ತು' ಎಂದು ಬಣ್ಣಿಸುವುದು ಪಂಪನಿಗೆ ಮಾತ್ರ ಸಾಧ್ಯವಾಯಿತು. ಹಾಗೆ ನೋಡಬಲ್ಲ ಕಣ್ಣು ನುಡಿಯಬಲ್ಲ ಮಾತು ಎಲ್ಲಿ ಹೋದವೋ! ಇದು ವಿರಹಕ್ಕಲ್ಲದೆ ಕಾಯದ ಬಿಸಿಲೆಂದು ಬೆಳ್ದಿಂಗಳನ್ನು ಹೆಸರಿಸಿದ ಲಘುಚಮತ್ಕಾರಕ್ಕೆ ಆ ಗೌರವವೆಲ್ಲಿಂದ ಬಂತು?

ಬೀದಿಯಲ್ಲಿ ಆಡುತ್ತಿದ್ದ ಮಗು 'ಚಂದಕ್ಕಿ ಮಾಮಾ' ಎಂದು ದನಿಯೆತ್ತುವುದು. ಕುವೆಂಪು ಅವರ ಪುಟ್ಟ ಕವಿ ಶಿಶು "ದೇವರ ಪೆಪ್ಪರಮೆಂಟೇ ನಮ್ಮ ಗಗನದೊಳಲೆಯುವ ಚಂದಿರನು ?" ಎಂದು ಕೇಳುವುದು. ಹಾಲುಗಡಲಿನ ಸೀಮೆಯ ಸ್ವಾಮಿಯಾಗಿದ್ದಾನೆ ಬೇಂದ್ರೆಯವರ ಚಂದ್ರ.

ಮೈಸೂರು ಮಲ್ಲಿಗೆಯ ತರುಣದಂಪತಿಗಳು ಗಂಧರ್ವರು;
ಎಲ್ಲ ಕಾಲದ ಎಲ್ಲ ಬದುಕಿನ ಸಂತೋಷ ಕಣ್ಣಲ್ಲಿ
ತುಂಬಿಕೊಂಡು ಗಂಡು-ಹೆಣ್ಣಿನ ಜೋಡಿಗಳು ಕಣ್ಣೆದುರಿಗೆ ಹಾದು ಹೋಗುತ್ತಿವೆ.

ತೆಂಗುಗರಿಗಳ ಮೇಲೆ ತುಂಬು ಚಂದಿರ ಬಂದು
ಬೆಳ್ಳಿಹಸುಗಳ ಹಾಲು ಕರೆಯುವಂದು
ಅಂಗಳದ ನಡುವೆ ಬೃಂದಾವನದ ಬಳಿ ನಿಂದು
ಹಾಡುವೆವು ಸಿರಿಯ ಕಂಡು
ತಾರೆಗಳ ಮೀಟುವೆವು ಚಂದಿರನ ದಾಟುವೆವು

ಎಂದವರ ಹಾಡು.

ಜ್ಯೋತ್ಸ್ನಾಮಯ ರಾತ್ರಿಯಲ್ಲಿ ಮುಗಿಲ ಕರೆಯನು ಬಿಟ್ಟ ರಾಜನೌಕೆ ಪು. ತಿ. ನ. ಅವರ ಚಂದ್ರ;

ಕದಡು ನೀರು ತಿಳಿವ ತೆರದಿ ನೀಲವಾದ ಬಾನ ಶರಧಿ.

ಪ್ರೀತಿಯನ್ನೇ ಮನೋದೌರ್ಬಲ್ಯವೆಂದು ಪರಿಗಣಿಸಿ, ಕೃತಕ ನಿರಾಶೆಯ ಸ್ವಯಂಕೃತ ಮರುಭೂಮಿಗಳಲ್ಲಿ ತೊಳಲುತ್ತಿರುವ ಬುದ್ಧಿವಂತರೂ ಅವರಲ್ಲಿ ಕವಿಗಳಾದವರೂ ಇರಬಹುದು. ಅವರು ಬೇಡವೆಂದರೂ ಸೃಷ್ಟಿಸಂಪತ್ತು ನಿತ್ಯಪುಷ್ಪಿಣಿಯಾಗಿ ಅವರ ಮೇಲೂ ಹಾಲುಬೆಳಕನ್ನು ಚೆಲ್ಲುತ್ತಿದೆ.

ಜೀವನದಲ್ಲಿ ಒದಗಿದ ದುಃಖಭಾರದಿಂದ ತಾನು ನೊಂದರೂ, ತನ್ನ ಸತಿಗೆ ಧೈರ್ಯ ಹೇಳುತ್ತಿರುವ ಒಬ್ಬ ಪ್ರತಿಭಾಶಾಲಿ ಇದ್ದಕ್ಕಿದ್ದ ಹಾಗೆಯೇ ಹುಣ್ಣಿಮೆಯ ಚಂದ್ರನನ್ನು ರಾತ್ರಿಯಿಂದ ಹಗಲಿಗೆ ವರ್ಗಮಾಡಿ

ಹುಣ್ಣಿಮೆಯ ಚಂದ್ರನ ಹೆಣ ಬಂತು ಮುಗಿಲಲ್ಲಿ ತೇಲಿ

ಎಂದು ಹೃದಯವನ್ನು ಕಲಕಿಬಿಡುತ್ತಾನೆ; ಆ ಕವಿ ನಮ್ಮ ಗಾರುಡಿಗ ಬೇಂದ್ರೆ.

ಮಹರ್ಷಿಗಳು, ಮಹಾಕವಿಗಳು, ಕವಿಗಳು ಶರತ್ತನ್ನೂ ಚಂದ್ರನನ್ನೂ ತಮ್ಮ ತಮ್ಮ ರೀತಿಯಲ್ಲಿ ಬಣ್ಣಿಸಿದ್ದಾರೆ. ಆ ಆ ಕಾಲದಲ್ಲಿ ಅವರವರು ಕಂಡ ಅನುಭವ ಸತ್ಯಕ್ಕೆ ಕಲ್ಪನಾಸೌಂದರ್ಯವನ್ನು ತೊಡಿಸಿದರು. ನಾವು ಈಗ ನಮ್ಮ ನಮ್ಮ ಜೀವನದಲ್ಲಿ ಕಾಣುತ್ತಿರುವ ಅನುಭವಗಳೂ ಅಷ್ಟೇ ಸತ್ಯ; ನಮ್ಮ ಕಾಲದ ಮೆರವಣಿಗೆಯಲ್ಲಿ ನಾವು ಭಾಗವಹಿಸುತ್ತಿದ್ದೇವೆ. ನಾವು ಭೂಮಿಯಮೇಲೆ ನಿಂತಿದ್ದೇವೆ; ನೀಲಗಗನದಲ್ಲೂ ಪೂರ್ಣಚಂದ್ರನಲ್ಲೂ ನಮಗೆ ಕೆಲಸವಿದೆ. ಮಾನವ ಸಾಹಸಗಳ ಸ್ಪೂಟ್ನಿಕ್ ಯುಗ ಪ್ರಾರಂಭವಾಗಿದೆ. ಚಂದ್ರನ ಸುತ್ತ ರಾಕೆಟ್ ಸುತ್ತುವ ಕಾಲ ಸನ್ನಿಹಿತವಾಗಿದೆ. ಇಂದಲ್ಲ ನಾಳೆ ಚಂದ್ರನಿಗೆ ನಾವು ಹೋಗಿಬರುವುದು ಸಾಧ್ಯ. ಅಷ್ಟರಿಂದಲೇ ನೀಲಗಗನಕ್ಕಾಗಲೀ ಪೂರ್ಣಚಂದ್ರನಿಗಾಗಲೀ ಏನೂ ನಷ್ಟವಿಲ್ಲ. ಏಕೆಂದರೆ ಕವಿಗಳು ಅನೇಕ ನೂತನ ರೀತಿಗಳಲ್ಲಿ ಸೌಂದರ್ಯವನ್ನು ಕಾಣಬಲ್ಲರು, ಹಾಡಬಲ್ಲರು. ಮಕ್ಕಳು ಬೆಳೆದರೆ ದೊಡ್ಡ ದೊಡ್ಡ ಸಾಹಸಗಳನ್ನು ಕೈಗೊಂಡರೆ ತಂದೆತಾಯ್ಗಳಿಗೆ ಸಂತೋಷವಾಗುವುದಿಲ್ಲವೇ? ಹಾಗೆಯೇ ನಮಗೆ ಅನಂತ ಅವಕಾಶಗಳನ್ನು ಕಲ್ಪಿಸಿಕೊಟ್ಟು ತಾನು ಮಾತ್ರ ಮರೆಯಲ್ಲಿ ಉಳಿದುಕೊಂಡ ಸೃಷ್ಟಿಕರ್ತನಿಗೂ ಅನಂತಕೋಟಿ ಜೀವರಾಶಿಗಳನ್ನು ಮಡಿಲಲ್ಲಿ ತುಂಬಿಕೊಂಡು ತನ್ನನ್ನು ಹಳಿ

ದವರೂ ತನ್ನವರೆಂಬ ಹೆಮ್ಮೆಯಿಂದ ಕಾಪಾಡುತ್ತಿರುವ ಭೂರೂಪದ ಮಾತೃ ಶಕ್ತಿಗೂ ನಮ್ಮ ಪ್ರಗತಿ ಅಪ್ರಿಯವಲ್ಲ. ಶರತ್ಕಾಲದ ಕಾಂತಿಯುತ ಗಗನ ವನ್ನು ಕಂಡರೆ ಆ ತಂದೆಯ ಸ್ಮರಣೆ ಬರುತ್ತದೆ; ಈ ತಾಯ ಕರುಣೆಯೂ ಕಣ್ಣಮುಂದೆ ನಿಲ್ಲುತ್ತದೆ; ಅವರ ಪ್ರೀತಿಯಿಂದ ಪಾವನವಾದ ನೀಲಗಗನ ದಲ್ಲಿ ಪೂರ್ಣ ಚಂದ್ರನಂತೆ ಬೆಳಗುವ ಆಸೆ ನಮಗೆ ಬರುತ್ತದೆ.

ನೀಲಗಗನ, ಪೂರ್ಣಚಂದ್ರ.

ಶ್ರೀ ತಳುಕಿನ ವೆಂಕಣ್ಣಯ್ಯನವರು

ಒಬ್ಬರಿದ್ದರು ಕಲ್ಪವೃಕ್ಷದಂತೆ ಎತ್ತರವಾಗಿ, ತಂಪಾಗಿ, ಪ್ರಬಲವಾಗಿ. ಕಣ್ತುಂಬ ಪ್ರೀತಿ. ಮನಸ್ಸು ಎತ್ತರದಲ್ಲಿ ನಿಂತು ಜಯಶಾಲಿಯಾಗಿ ಕೆಲಸಮಾಡುತ್ತಿತ್ತು. ಹೊರನೋಟಕ್ಕೆ ಮೆರೆಯದ ಜೀವ ಒಳಗೇ ಮಿಂಚಿನ ಲಾಳಿಯಂತೆ ದುಡಿದು ಸಾರಸ್ವತ ಪೀತಾಂಬರಗಳನ್ನೇ ಸಿದ್ಧಪಡಿಸುತ್ತಿತ್ತು. ಎಂಥ ಅಚ್ಚುಕಟ್ಟು! 'ಕೃಷ್ಣಾರ್ಪಣಮಸ್ತು' ಎನ್ನುವುದು ಸುಮ್ಮನೆ ಬಾಯಿ ಮಾತಾಗದೆ, ಮಾಡಿದ ಕೆಲಸದಲ್ಲಿ ಒಡಮೂಡಿತ್ತು. ಆಡಿದ ಮಾತು ಅಟ್ಟಡುಗೆಯಂತೆ ಖಚಿತ. ತನ್ನ ಕೆಲಸದ ಗುರು, ಗುರಿ, ಸಿದ್ಧಿ, ಸಾಧನ ಎಲ್ಲವೂ ತಾನೆ, ತನ್ನ ಆನಂದವೇ. ಆ ಪ್ರಭೆಯಿಂದ ಬರೆದುಬಂದದ್ದು ಒಂದೋ ಎರಡೋ ಮುತ್ತಿನ ಹಾರವಾಯಿತೇ ಹೊರತು ಭೂಮಿಗೆ ಭಾರ ವಾಗಲಿಲ್ಲ. ಅದೆಂಥ ಗಾಂಭೀರ್ಯ! ಅದರ ಬೆಳದಿಂಗಳ ಬೆರಳು ಬೆಟ್ಟ ಗಳನ್ನೇ ಮುಟ್ಟಿ ಆಡಿಸಿತು. ತನ್ನ ಕೃತಿಗಿಂತ ತನ್ನ ಮಹಿಮೆ ಹಿರಿದಾ ಯಿತು; ಮಾಡಿದ ಕೆಲಸಕ್ಕಿಂತ ಮಾಡಿಸಿದ ಕೆಲಸವೇ ಮುಂದಾಯಿತು. ಒಬ್ಬರ ಧ್ವನಿಯಲ್ಲಿ, ಇನ್ನೊಬ್ಬರ ಶೈಲಿಯಲ್ಲಿ, ಮತ್ತೊಬ್ಬರ ರೀತಿಯಲ್ಲಿ, ಮಗದೊಬ್ಬರ ಬಾಳ್ನಡೆಯಲ್ಲಿ ಆ ಜೀವ ಸೇರಿಹೋಯಿತು. ಕಬ್ಬಿನ ಗದ್ದೆ ಯಲ್ಲಿ ಕಣ್ಮರೆಯಾದ ನವಿಲಿನಂತೆ ಆ ಜೀವ ಹಾರಿಹೋಯಿತು. ಭೂಮಿಯ ಮೇಲೆ ತನ್ನ ಕಿರಣಗಳನ್ನೆಲ್ಲ ಎಂದೋ ಏಕೋ ಮರೆತು ಮುಳುಗಿದ ರವಿ ಯಂತೆ ಆ ಜೀವ ಬಾನಿಗೆ ಸೇರಿಹೋಯಿತು. ತಾನೇ ಮಾಡಬೇಕಾಗಿದ್ದ ಎಷ್ಟೋ ಕೆಲಸ ಇನ್ನೂ ಬಹಳವಿದ್ದಾಗ, ತನ್ನ ಕಾರ್ಯ ಸಮೃದ್ಧಿಯ ನಡುವೆ, ತಾನೊಂದುಮಾತ್ರ ಕಣ್ಮರೆಯಾಯಿತು ಒಂದುದೊಡ್ಡ ಬದುಕು. ಕಣ್ಮರೆಯಾಯಿತು ಅರಮನೆಯ ಹೆಬ್ಬಾಗಿಲನ್ನು ತೆರೆದು ನಡೆದ ರಾಜ ಕುಮಾರನಂತೆ, ನಿರಾಯಾಸವಾಗಿ, ನಿರ್ಭಯವಾಗಿ, ನಿರಾತಂಕವಾಗಿ. ತಗ್ಗು ಎತ್ತರ ಬನ ಬಯಲು ನೆಳಲು ಬೆಳಕುಗಳನ್ನೆಲ್ಲ ಸಮವಾಗಿ ಆದರಿಸಿದ ಆ ಜೀವ ನಗುತ್ತಲೇ ನಿರ್ಗಮಿಸಿತು; ಆ ದಿಕ್ಕಿನಿಂದಲೇ ಕೇಳಿಬರುತ್ತಿದೆ ಅದರ ಸಮತಾವೇದಸ್ವಸ್ತಿವಾಚನ:—

"ನಮೋ ಮಹದ್ಭ್ಯಃ, ನಮೋ ಯುವಭ್ಯಃ, ನಮೋ ಅರ್ಭಕೇಭ್ಯಃ"

ಈ ಮಾತು ಸುಲಭ; ಇದರಂತೆ ನಡೆಯುವುದಕ್ಕೆ ಇಷ್ಟವಿದ್ದರೂ, ಕಷ್ಟ ತಪ್ಪಿದ್ದಲ್ಲ. ಇದರಂತೆ ನಡೆದು ಹಿರಿಯರಾದವರಲ್ಲಿ ಎತ್ತರದ ಆಳು ದಿವಂಗತ ವೆಂಕಣ್ಣಯ್ಯನವರು. ಬಹುಕಾವ್ಯ ಪರಿಚಯವಿದ್ದೂ ಬರವಣಿಗೆ ಗಿಂತ ಆಲೋಚನೆ, ಆಲೋಚನೆಗಿಂತ ಜೀವನ ದೊಡ್ಡದು ಎಂದು ಆ ಜೀವ ನಂಬಿದ್ದಂತೆ ಕಾಣುತ್ತದೆ. ಈ ಮಾತನ್ನೂ ಅದು ಸ್ಪಷ್ಟವಾಗಿ ಹೇಳಲಿಲ್ಲ. ಅದಲ್ಲವೆ ಆ ಜೀವನದ ಸಂಸ್ಕೃತಿ! ಪ್ರಾಚೀನ ಸಾಹಿತ್ಯದ ಸೌಂದರ್ಯ ವನ್ನು ಕಂಡು, ಹೃದಯದಲ್ಲಿ ತುಂಬಿಕೊಂಡು, ಆಗತಾನೆ ತಮ್ಮ ಕಣ್ಣೆದು ರಿಗೆ ಅಂಕುರಿಸುತ್ತಿದ್ದ ಒಂದು ಹೊಸರೀತಿಯ ಸಾಹಿತ್ಯಸೃಷ್ಟಿಗೆ ಬೆಂಬಲ ವಾಗಿ ನಿಂತು, ಅದಕ್ಕೆ ಸರ್ವಶಕ್ತಿಯನ್ನೂ ದಾನಮಾಡಿದ ಹಿರಿಯರ ಪಂಕ್ತಿಯಲ್ಲಿ ಎತ್ತರದ ಆಳು ವೆಂಕಣ್ಣಯ್ಯನವರು. ಇಂದು ಬೆಳಗು ತ್ತಿರುವ ಎಷ್ಟೋ ದೀಪಗಳಲ್ಲಿ ಇವರ ಬೆಳಕು. ಸಾಹಿತ್ಯದಲ್ಲಿ ಕ್ರಾಂತಿ ಯಾದದ್ದೂ ಇಂಥವರ ಇರುವಿಕೆಯಿಂದಲೇ ಹೊರತು ಪ್ರಯತ್ನದಿಂದಲ್ಲ. ಆಜ್ಞೆಗೆ ಒಳಗಾಗದೆ ಆಜ್ಞೆ ಮಾಡದೆ ಎಷ್ಟೋ ಕೆಲಸ ಎತ್ತಿದ ಹೂವಾಯ್ತು ಇಂಥವರ ಪ್ರಭಾವದಿಂದ.

ತಮ್ಮ ಕಾಲದ ಸಾಹಿತ್ಯ ಸಂಸಾರದಲ್ಲಿ ಹೆಚ್ಚಾಗಿ ನುಡಿಯದೆ, ತಮ್ಮ ನಂಬಿಕೆಯಂತೆ ನೇರವಾಗಿ ಸಿರಕಾಗಿ ನಡೆದು, ಮುಚ್ಚಿದ ವೀಣೆಯಂತೆ ಒಳಗೇ ಇದ್ದು ಪರಿಮಳದಂತೆ ದಾಟಿಹೋದವರು ಯಜಮಾನ ವೆಂಕ ಣ್ಣಯ್ಯನವರು. ಇವರು ಸದಾ ವಸಂತ; ಇವರಿಗೆ ನಿತ್ಯೋತ್ಸವ. ಜನನ ಮರಣ ಜನ್ಮ ಜನ್ಮಾಂತರಗಳೆಲ್ಲ ಇಂಥ ಶಕ್ತಿ ಪುರುಷರು ದಾಟುವ ಸೇತುವೆ ಗಳು. ಇಂಥವರು ಆಗಾಗ ಬರುತ್ತಾರೆ; ಬಂದು, ಸಾಮಾನ್ಯ ಸುಲಭ ವಲ್ಲದ ಕೆಲಸವನ್ನು ಒಂದು ಬೆರಳಿನಿಂದ ಮಾಡಿಬಿಡುತ್ತಾರೆ. ವಜ್ರದ ಬಳ್ಳಿಯಂಥ ಆ ಬೆರಳಿಗೆ ಕೀರ್ತಿಗೂ ಮಿಗಿಲಾದ ಧನ್ಯತೆಯೇ ಸಹಜವಾದ ಉಂಗುರವಾಗುತ್ತದೆ.

ಪ್ರಬುದ್ಧಕರ್ಣಾಟಕದ ಸಂಪಾದಕರಾಗಿ ಇವರು ನನಗೆ ಎರಡು ಕಾಗದಗಳನ್ನು ಬರೆದಿದ್ದರು. ಮೂರುನಾಲ್ಕುಸಲ ನಾನಿವರನ್ನು ವಿಶ್ವವಿದ್ಯಾ ನಿಲಯದ ಆವರಣದಲ್ಲಿ ದೂರದಿಂದ, ಹತ್ತಿರದಿಂದ ಕಂಡಿದ್ದೇನೆ. ಒಂದು ಸಲ ಮಾತ್ರ ಇವರು ನನ್ನನ್ನು ಹತ್ತಿರ ಕರೆದು "ನಿಮ್ಮ ಹೆಸರು?...."ಎಂದು

ಮೆಲ್ಲಗೆ ಮಾತಾಡಿಸಿದ್ದಾರೆ. ಪ್ರಾಮಾಣಿಕವಾಗಿ ನನಗೆ ಇವರ ಪರಿಚಯ ವಿಷ್ಟೇ. ಸಮುದ್ರದ ಪರಿಚಯವಿರುವಷ್ಟೇ ಇವರ ಪರಿಚಯ. ಆಗ ತುಂಬ ಹತ್ತಿರ ಹಾದು ಹೆಚ್ಚು ಸಲಿಗೆಯಿಂದ ಮಾತಾಡಿಸುವ ಧೈರ್ಯ ನನಗಿಲ್ಲವಾಯಿತು; ಕರುಣಾಮೂರ್ತಿಯೆಂದು ತಿಳಿದಿದ್ದರೂ ಇವರ ಹತ್ತಿರ ನಿಲ್ಲುವುದು ಇವರಲ್ಲಿ ನನಗಿರುವ ಗೌರವಕ್ಕೆ ಒಗ್ಗಲಿಲ್ಲ. ಈಗ ಇವರಿಗೂ ನನಗೂ ನಡುವೆ ಬೀಸಿಹಾಸಿರುವ ಯುಗಯುಗಾಂತರ ಮೌನದಲ್ಲಿ ನಾನಿವರನ್ನು ನೆನೆಯುತ್ತಿದ್ದೇನೆ. ಇವರ ಸ್ಮರಣೆಯಲ್ಲಿ ಗೋಚರವಾಗುತ್ತದೆ ನಾನು ಬೇರೆ ಕಡೆ ಕಂಡ 'A rose-red city half as old as time'-ಎಂಬುದರ ಪರಮ ಸುಂದರ ಜೀವಂತ ಚಿತ್ರ. ಇವರಿಗೆ ಮಂದಹಾಸವೇ ಕಾಣಿಕೆ; ತಂಗಾಳಿಯೇ ಸ್ಮಾರಕ. ಒಂದೊಂದು ಸಂಜೆ ವಿಶ್ವವಿದ್ಯಾನಿಲಯದ ಪುಸ್ತಕ ಮಂದಿರದ ಬಳಿ ನಾನೊಬ್ಬನೇ ಬರುತ್ತಿರುವಾಗ ಇವರನ್ನು ಕುರಿತು ಮನಸ್ಸು ಒಳಮುಖವಾಗುತ್ತದೆ; ಸುತ್ತ ತುಂಬಿದ ನೀಲಿಯಲ್ಲಿ ಒಂದೇ ಒಂದು ಬೆಳಕಿನ ಮುತ್ತು ಮಿನುಗಿದಂತಾಗುತ್ತದೆ. ಈಗಲೂ ನಾನಿವರಿಗೆ ಕೈಮುಗಿದರೆ ಇವರ ಗಮನವನ್ನು ನನ್ನ ಕಡೆ ಸೆಳೆದಂತಾಗಬಹುದು ಎನ್ನುವ ಭಯವಿದೆ. ಕಾವ್ಯವನದಲ್ಲಿ ನನ್ನನ್ನು ನಾನೇ ಮರೆತಾಗ, ಇವರ ಸ್ಮರಣೆ ಗಾಳಿಗೆ ಆದ ಹೂವಿನುಂಗುರದಂತೆ, ಮಳೆಹನಿಗೆ ಆದ ಕೊಳದ ನೀರಿನುಂಗುರದಂತೆ, ಅನಿರೀಕ್ಷಿತವಾಗಿ ಬಂದ ಇನಿಯನನ್ನು ಕಂಡು ಬೆರಗಾದ ಮುಗ್ಧೆಯ ಕೆನ್ನೆಯಲ್ಲಿ ಆದ ಪ್ರೀತಿಯುಂಗುರದಂತೆ....... ...ಕಂಡು ಮರೆಯಾಗುತ್ತದೆ. ಆ ಶುಭಸ್ಮರಣೆಯ ಸಂತೋಷದ ಪದತಲದಲ್ಲಿ-ಇವರ ಪೂರ್ವಾನುಜ್ಞೆಯನ್ನು ಪಡೆಯುವುದು ಈಗ ಸಾಧ್ಯವಾಗದೆ—ಈ ಸಣ್ಣ ಹೂವಿನುಂಗುರವನ್ನು ಅರ್ಪಿಸುತ್ತಿದ್ದೇನೆ. ಇವರು ಬೇಕು ಎನ್ನುವಂತಿಲ್ಲ; ಬೇಡ ಎನ್ನುವಂತಿಲ್ಲ. ಅಂತೂ ನನ್ನ ಹೃದಯದ ಹೊರೆ ಈ ಕಂಬನಿಯುಂಗುರದಿಂದ ಹಗುರವಾಗುತ್ತಿದೆ. 'ಶಾಂತಿರಸ್ತು, ಪುಷ್ಟಿರಸ್ತು'.

‘ಕೆಂಪುವೂ ಸಾಲ್ಮರನ ದಾರಿಯಲಿ....’

ಬೆಳಗಿನ ಬಿಸಿಲು, ಕೆಂಪುವೂ ಸಾಲ್ಮರನ ದಾರಿ. ತಳ್ಳುಗಾಡಿಯಲ್ಲಿ ಬರುತ್ತಿರುವ ಆ ಮಗು ಎಷ್ಟು ಚೆಲುವು! ಅದರ ಮೈ ಬಣ್ಣಕ್ಕೆ ಒಪ್ಪುವ ಅಚ್ಚಗೆಂಪು ಉಲ್ಲನ್ ಅಂಗಿ; ತುಟಿಯಂಚಿನ ಕಿರುನಗೆಯೂ ತೆಳುಗೆಂಪು. ಎಂಥಕಾಲವಾದರೂ ಮೈಮೇಲಿದ್ದರೆ ಅದಕ್ಕೆ ಹಿತವೆನಿಸುವ ಗುಲಾಬಿ ಕೆಂಪು ಶಾಲು. ಎಲ್ಲಿಗಿದರ ಸವಾರಿ? ‘ಮನೆ ಬಿಟ್ಟು ಬಂದದ್ದಾಯಿತು; ಎಲ್ಲಿಗೆ ಹೋಗುತ್ತೇನೆಂಬುದು ನನಗೆ ತಿಳಿಯದು.’ ಕುಡಿಬೆರಳನ್ನು ಚೆಂದುಟಿಯ ಮೇಲೆ ಸುಳಿಸುತ್ತಿದೆ ಮಗು. ಹೊಸ ಬಾಳಿನ ತಂಗಾಳಿಗೆ ಹೊಂಬಿಸಿಲಿಗೆ ಓಗೊಡುತ್ತಿದೆ ಈ ಪುಟ್ಟ ಅತಿಥಿ. ಹಸಿರೆಲೆಗಳನ್ನೆಲ್ಲ ಮುಚ್ಚಿಬಿಟ್ಟಿರುವ ಕೆಂಪು ಹೂಗಳಲ್ಲಿ ಕಣ್-ತೆರೆದ ಗಿಡಮರಗಳ ಈ ಹುಚ್ಚಿಗೇನು ಹೇಳೋಣ!

All of the Trees that now
Overhang us here
Turn their faces to us.

ಬಿಸಿಲು ಏರುತ್ತಿದೆ. ತರುಣ ದಂಪತಿಗಳಿತ್ತ ಬಂದರು. ಆ ತಂಗಿಯ ಕೈಬಳೆಗಳ ಕುಲುಕು, ಉಂಗುರದ ಮಿಂಚು, ಮದುವೆಯ ದಿನದ ಪರಿಮಳವನ್ನು ಇನ್ನೂ ಹಿಡಿದಿಟ್ಟಿರುವ ಸರಿಗೆಯ ಪತ್ತಲ; ಈಗತಾನೆ ಸಮುದ್ರದಾಚೆಯಿಂದ ವಿಮಾನವಿಳಿದುಬಂದ ಈ ಸೊಗಸುಗಾರನ ನಾಟಕೀಯ ಉಪನ್ಯಾಸ.

My Love’s like a red, red rose,

ನಾನು ‘ನವ್ಯ ಕವಿ’ಯಲ್ಲ! ಇದನ್ನು ಮೆಚ್ಚುತ್ತೇನೆ; ಆದರೆ ಗುಲಾಬಿ ಹೂಗಳಲ್ಲಿ ಬಿಳಿಯವೂ ಇರುತ್ತವೆ. ಕೆಂಪಿಗೇ ಏನು ಕೋಡು? ಆದರಿದು ಕೆಂಪುವೂ ಸಾಲ್ಮರನ ದಾರಿ; ಕೆಂಬಣ್ಣವೇ ಪ್ರಧಾನವಿಲ್ಲಿ.

“ಕೆಂಪು ನದಿಗಳು ಹರಿವ ಪಚ್ಚೆ ಬಯಲನು ಕಂಡೆ;
ತುಂಬು ಚಂದಿರನಂತೆ ನಾ ನಿಂತ ಬಂಡೆ”

ಇದು ಕನಸಾದರೆ, ನಾನೊಂದು ಕಂಬನಿ.

ಸಂಜೆಯಾಯಿತು. ಬಿಸಿಲು ಮನೆ ಮನೆಗಳೆತ್ತರದಿಂದ ಇಳಿದು ಹೋಯಿತು. ಕೆಲವರು ಮುದುಕರು ಬಂದರು. ಹೆಜ್ಜೆ ನಿಧಾನ; ಛತ್ರಿ

ನಡೆಗೋಲು; ಉಡುಪಿನಲ್ಲಿ ವ್ಯವಸ್ಥೆಯಿಲ್ಲ. ಬದುಕನ್ನು ಕಂಡವರು. ಇವರಲ್ಲಿ ನಿವೃತ್ತಾಧಿಕಾರಿಗಳೇ ಬಹಳ. ಬೇಸರದಿಂದ ಮಾತಾಡುವುದೇ ಹೆಚ್ಚು.

'ಇವತ್ತಿನ ಪೇಪರಿನಲ್ಲಿ ಬರೀ ನೀರಿನ ಅಭಾವವೇ ತುಂಬಿಹೋಗಿದೆ; ಸರಕಾರದವರು—'

'ಅವರೇನು ಮಾಡ್ತಾರೆ; ಹೊಳೆಯಲ್ಲಿ ನೀರು ಕಡಿಮೆ; ಹಳೆಯ ಯಂತ್ರಗಳು. ರಿಪೇರಿ ಮಾಡ್ತಾ ಇದಾರಂತೆ.'

'ಅದು ಸರೀಂದ್ರೆ.....ಅಂತೂ ಕಾಲ ಕೆಡ್ತಾ ಬಂದಿದೆ. ರೂಪಾಯಿಗೊಂದು ಸೇರಾಗಿದೆ ತೊಗರಿಬೇಳೆ. ನಮ್ಮಕಾಲ ಎಷ್ಟು ಚೆನ್ನಾಗಿತ್ತು.'

'ಅದಕ್ಕೇನು ಮಾಡೋಣ ? ಬೆಳೆ ಚೆನ್ನಾಗಿದ್ರೆ ಬೇಳೆ ಅಗ್ಗವಾಗ್ತಾ ಇತ್ತು. ಬೇಳೆ ಒಂದರ ಬೆಲೆಯೇ ಏರಿಲ್ಲವಲ್ಲ! ಜೊತೆಗೆ ಇತರ ಧಾನ್ಯಗಳ ಬೆಲೆಯೂ—'

'ಮನುಷ್ಯರ ಬೆಲೆ ಮಾತ್ರ ಇಳಿತಾ ಇದೆ ಅನ್ನಿ',

ಇಂಥ ಮಾತುಗಳನ್ನೂ ಕೇಳಿದೆ ಕೆಂಪುವೂ ಸಾಲ್ಮರನ ದಾರಿ. ಪಿಂಚಣಿದಾರರಲ್ಲಿ ಎಲ್ಲರೂ ಒಂದೇ ಎನ್ನುವ ಹಾಗಿಲ್ಲ. ತಲೆ ಬೆಳ್ಳಗಾದವರು, ಬೆಳ್ಳಗಾಗಲು ತಲೆಯಲ್ಲಿ ಕೂದಲಿಲ್ಲದವರು,ಅಧಿಕಾರದಲ್ಲಿದ್ದಾಗ ಟಿಪ್‌ಟಾಪ್ ದಿರುಸಿನಲ್ಲಿ ಬರುತ್ತಿದ್ದು ಈಗ ದಟ್ಟಿಪಂಚೆ, ಜುಬ್ಬ ವಲ್ಲಿಗಳಿಗಿಳಿದವರು, ತಮ್ಮ ಆಗಿಹೋದ ಅಧಿಕಾರ ಜ್ವಾಲೆಯನ್ನು ಇನ್ನೂ ತಮ್ಮ ಸುಪ್ತಚಿತ್ತದಲ್ಲಿ ಉಳಿಸಿಕೊಂಡಿರುವವರು, ಇಂಗ್ಲಿಷ್ ಭಾಷಣಗಳು ಮತ್ತು ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳಿಗೆ ಮಾತ್ರ ತಪ್ಪದೆ ಒದಗುವ ಖಾಯಂ ಸಭಿಕರು–ಹೀಗೆ ಹಂಚಿ ಹೋಗಿದ್ದಾರೆ. ಇವರಲ್ಲಿ ಪ್ರತಿಯೊಬ್ಬರೂ ವೃತ್ತಪತ್ರಿಕೆಗಳನ್ನು ಆಮೂಲಾಗ್ರವಾಗಿ ಓದಿ ನಡೆದುಹೋದ ಸಂಗತಿಗಳ ಮೇಲೆ ಘಂಟಾಘೋಷವಾಗಿ ಚರ್ಚೆ ಮಾಡಬಲ್ಲರು; ಮಾಡುತ್ತಾರೆ. ಲೋಕದಲ್ಲಿದ್ದ ಹಾಗೆಯೇ ದೂರಸರಿದು ಲೋಕವನ್ನು ಕುರಿತು ಇವರು ಮಾಡುವ ಟೀಕೆಗಳಲ್ಲಿ ಸ್ವಾರ್ಥದ ಪ್ರಶ್ನೆಯೇ ಇಲ್ಲ. ಇವರ ಟೀಕೆಗಳು ಕೇವಲ ಖಾಸಗಿಯಾದ್ದರಿಂದ ಯಾರಿಗೂ ತೊಂದರೆ ಆಗುತ್ತಿಲ್ಲ. ಆಡಂಬರಕ್ಕೆ ಅವಕಾಶವೇ ಇಲ್ಲದೆ, ಖಾಸಗಿ ಆಸಕ್ತಿಗಳಿರದೆ, ನಮ್ಮ ಕಾಲದ ನಮ್ಮ ಜನದ–ಸಾಧ್ಯವಾದರೆ ಈ ಪ್ರಪಂಪಚದ-ಸಮಸ್ಯೆಗಳನ್ನು ಅರಿತು ಬಿಡಿಸುವುದು ಕಷ್ಟವೇನಲ್ಲ ಎಂಬುದನ್ನು ನಾವು ಈ ನಡ

ವಳಿಕೆಯಿಂದ ತಿಳಿಯಬಹುದು; ತಿಳಿದರೂ ಇನ್ನೊಂದು ಕಷ್ಟ ಹುಟ್ಟಿಕೊಳ್ಳು ತ್ತದೆ; ಹತ್ತೊಂಬತ್ತನೆಯ ಶತಮಾನದ ತೀರ್ಮಾನಗಳಿಂದ ಇಪ್ಪತ್ತನೆಯ ಶತಮಾನವನ್ನು ಕಟ್ಟಿಹಾಕುವುದು ಹೇಗೆ? ಸರಕಾರವೋ ಮತ್ತೊಂದು ಸಾರ್ವಜನಿಕ ಸಂಸ್ಥೆಯೋ, ಐವತ್ತೈದರ ಗಡಿ ದಾಟಿದವರೆಲ್ಲ ತಮ್ಮ ಕೆಲ ಸಕ್ಕೆ ಉಪಯೋಗವಿಲ್ಲದವರೆಂದು ಮನೆಗೆ ಕಳಿಸಿಕೊಟ್ಟಮಾತ್ರಕ್ಕೆ ಪಿಂಚಣಿ ದಾರರೆಲ್ಲ ಯಾವ ತಂಟೆಗೂ ಹೋಗದೆ ಸುಮ್ಮನಿರುವುದು ಹೇಗೆ ಸಾಧ್ಯ? ಅವರೂ ಈ ಲೋಕದ ಒಂದು ಭಾಗ; ಬೇರೆಬೇರೆ ಕಾರ್ಯಕ್ಷೇತ್ರಗಳಲ್ಲಿ ಕಾಲಿಡ ಲೇಬೇಕು. ಕೆಲವರಂತೂ ನೇರವಾಗಿ ರಾಜಕೀಯಕ್ಕೆ ಧಾವಿಸಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸುತ್ತಾರೆ. ಅಂಥವರನ್ನು ಮಾತ್ರ ನಾವು ಈ ಕೆಂಪುವೂ ಸಾಲ್ಮರನ ದಾರಿಯಲ್ಲಿ ಕಾಣುವುದು ಅಪರೂಪ. ಏಕೆಂದರೆ ಅವರಿಗೆ Evening walk ಮುಂತಾದ ವಿರಾಮ ವಿನಿಯೋಗಕ್ಕೆ ವೇಳೆ ಇರುವುದಿಲ್ಲ. ಒಟ್ಟಿನಲ್ಲಿ ತಮ್ಮ ಕಾಲದ ಜೀವನ ವಿಧಾನಗಳು ಒಂದು ಸಂಪ್ರದಾಯವಾಗಿ ನೆಲೆ ನಿಂತು, ಅಲ್ಲಿಂದ ಇನ್ನೊಂದು ಹೊಸರೀತಿ ಚಿಗುರೊಡೆಯುತ್ತಿರುವುದನ್ನು ಇವರು ಕಾಣುತ್ತಾರೆ. ಅದು ಸರಿಯೋ ತಪ್ಪೋ ಎನ್ನುವ ಸಂಶಯ ಬರುತ್ತದೆ. ಕೆಲವರು ಹೊಸದರ ಜೀವಾಳ ವನ್ನೂ ಅರಿತು ಬೆರೆಯುತ್ತಾರೆ. ಉಳಿದವರು ಹೊಂದಿಕೊಳ್ಳುತ್ತಲೇ ಇರು ತ್ತಾರೆ. ಈ ಪ್ರಶಾಂತ ವಲಯದಿಂದ ಬರುವ ದೀರ್ಘಾನುಭವದ ಟೀಕೆ ಗಳನ್ನು ಪರಿಶೀಲಿಸುವುದರಿಂದ ಹೊಸ ಬಾಳಿಗೆ, ಹೊಸ ಕವಿತೆಗೆ ಲಾಭವಿದೆ. ಕಿವಿ ಇರುವುದು ಕೇಳುವುದಕ್ಕೆ; ಮುಚ್ಚಿಕೊಳ್ಳುವುದಕ್ಕಲ್ಲ.

ಕೆಂಪುವೂ ಸಾಲ್ಮರನ ದಾರಿಯಲ್ಲಿ ತಳ್ಳುಗಾಡಿಯಲ್ಲಿ ಸರಿದ ತುಂಬು ಗೆನ್ನೆಯ ಮಗು ಆ ಹೂಗಳ ಸೌಂದರ್ಯಕ್ಕೆ ಆಶ್ಚರ್ಯಪಟ್ಟಿರಬೇಕು, ಮಾತು ಬಾರದ ಮಗು ಮಾತಾಡಲಿಲ್ಲ ಅಷ್ಟೆ!

ಕೆಂಪುವೂ ಸಾಲ್ಮರನ ದಾರಿಯಲ್ಲಿ ಪ್ರೇಮಸಂಭ್ರಮದಿಂದ ಸಾಗಿದ ತರುಣದಂಪತಿಗಳು ಹೃದಯದಲ್ಲಿ ತುಂಬಿಕೊಂಡಿದ್ದ ಆಸೆ ಆಕಾಂಕ್ಷೆ ಗಳೇನೋ: ಅವೆಲ್ಲ ಕೆಂಪು ಹೂಗಳಾಗಿ ಅವರ ಕಣ್ಣಿಗೆ ಮೋಡಿ ಹಾಕಿರ ಬೇಕು. ಅದನ್ನು ವರ್ಣಿಸಲು ಮಾತು ದೊರೆಯದೆ ಅವರು ಧನ್ಯಕವಿ ಯೊಬ್ಬನ ಮಧುರ ಗೀತವೊಂದನ್ನು ನೆನಸಿಕೊಂಡರು.

ಕೆಂಪುವೂ ಸಾಲ್ಮರನ ದಾರಿಯಲ್ಲಿ ನಿಧಾನವಾಗಿ ನಡೆದು ಹೋದ ವಯೋವೃದ್ಧರು ಲೋಕಾನುಭವಿಗಳು, ಈ ಮರಗಳಲ್ಲಿ ಇಂಥವೇ ಹೂವರಳುವುದು ಬಹು ಸಹಜವೆಂದು ಅವರಿಗೆ ತಿಳಿದಿರುವುದರಿಂದ ಆಶ್ಚರ್ಯವನ್ನಾಗಲಿ, ಪ್ರೀತಿಯನ್ನಾಗಲಿ ಅಲ್ಲಿ ಅನುಭವಿಸಲಿಲ್ಲ. ಚರ್ಚೆಗೆ ಯೋಗ್ಯವಾದ ವಿಷಯಗಳು ಬೇರೆ ಇವೆ!

ನನ್ನ ದೃಷ್ಟಿಯಲ್ಲಿ ಕೆಂಪುವೂ ಸಾಲ್ಮರನ ದಾರಿ ಲಾಲ್‌ಬಾಗಿಗೆ ಹೋಗಿ ಸೇರುವ ವಿಶಾಲ ಮಾರ್ಗವಷ್ಟೇ ಅಲ್ಲ. ಇಕ್ಕೆಲದ ಸುಂದರ ವೃಕ್ಷಗಳು ಕಾಲಕಾಲಕ್ಕೆ ಯಾಂತ್ರಿಕವಾಗಿ ಹೂ ಬಿಡುವಷ್ಟರಿಂದಲೆ ತೃಪ್ತಿಗೊಳ್ಳುವ ಮೂಕಸಾಕ್ಷಿಗಳಲ್ಲ. ಕೆಂಪುವೂ ಸಾಲ್ಮರನ ದಾರಿಯಲ್ಲಿ ಕೆಂಪು ಹೂಗಳ ಆನಂದಭರಿತ ಉತ್ಸಾಹವಷ್ಟನ್ನೆ ಅಲ್ಲ; ಕುಪ್ಪೆ ಕುಪ್ಪೆ ಕಸಬಿದ್ದಿರುವುದನ್ನೂ ಕಂಡಿದ್ದೇನೆ. ತಮ್ಮ ಜೇಬಿನ ಕಸವನ್ನು ಬೀದಿಗೆ ವರ್ಗಾಯಿಸಿರುವ ಜನ ಈ ದಾರಿಯ ಹೂಗಳ ಭವ್ಯತೆಯನ್ನು ಕಾಣಲಾರರು. ಇಂಥ ಕೆಲಸ ಬದುಕಿನಲ್ಲಿ ಮತ್ತು ಕೆಲವು ಕವಿತೆಯಲ್ಲಿ ನಡೆಯುತ್ತಿದೆ. ಇದಕ್ಕಾಗಿ ಈ ಗಿಡಮರಗಳು ತಲೆ ತಗ್ಗಿಸಿವೆ. ದಾರಿಯೂ ಗುರಿಯಷ್ಟೇ ನಿರ್ಮಲವಾಗಿರಬೇಕೆಂದು ಕೆಂಪುವೂ ಸಾಲ್ಮರನ ನೆರಳಲ್ಲಿ ಬಿದ್ದ ಕಸದ ಕಣಕಣವೂ ಎಚ್ಚರಿಕೆ ಕೊಡುತ್ತಿದೆ.

ಇದಕ್ಕೆ ಕಾರಣ ಕೆಲವರ ಕಣ್ಣಿಗೆ ಮಾತ್ರ ಭೂತಾಕಾರವಾಗಿ ಗೋಚರಿಸುತ್ತಿರುವ ನಿರಾಶೆಯೆಂದು ಕೇಳಿರುವುದುಂಟು. ಈ ನಿರಾಶೆಯನ್ನು ಕನಿಕರದಿಂದ ಕಾಣುವಷ್ಟು ಸಹನೆ ಭೂಮಿಗಿದೆ ಎಂದು ನನ್ನ ನಂಬಿಕೆ. ಏಕೆಂದರೆ ಎಲ್ಲ ವೈಜ್ಞಾನಿಕ ಸಾಹಸಗಳೂ, ರಾಷ್ಟ್ರ ನಿರ್ಮಾಣ ಕಾರ್ಯಗಳೂ ಆಧ್ಯಾತ್ಮಿಕ ಪರ್ವತಾರೋಹಣಗಳೂ ಆಸೆಯಿಂದ ಹುಟ್ಟುತ್ತವೆ; ಪ್ರೀತಿಯಿಂದ ಬಾಳುತ್ತವೆ, ಅರಿವಿನಲ್ಲಿ ಅರ್ಥವನ್ನು ಕಾಣುತ್ತವೆ. ಆಶೆಯೇ ಇಲ್ಲದವರಿಗೆ ನಿರಾಶೆ ಆಗಿರುವುದು ಸುಳ್ಳು ಎಂಬುದನ್ನು ಒಂದೊಂದು ಕೆಂಪು ಹೂವೂ ನುಡಿಯುತ್ತಿದೆ. ಜೀವನದ ಸತ್ಯಸೌಂದರ್ಯಗಳ ರಾಜಮಾರ್ಗದ ಪ್ರತೀಕದಂತಿದೆ ಕೆಂಪುವೂ ಸಾಲ್ಮರನ ದಾರಿ; ಇಲ್ಲಿ ಕಸ ಹಾಕುವುದು ಯೋಗ್ಯರು ಮಾಡುವ ಕೆಲಸವಲ್ಲ. ನಿರಾಶೆ ಬದುಕಿನ ಅರ್ಥವಲ್ಲ.

ಅರಿವಿಗಿಂತ ಮೊದಲು ಪ್ರೀತಿ
ಒದಗಿ ಬರುವುದದರ ರೀತಿ-
'ಆಸೆಯಿಂದ ಪ್ರೀತಿ'ಎಂದು
ನನ್ನ ಚಳುವಳಿ.

ಎಲ್ಲ ಹಸಿರ ಮಣ್ಣಿನಾಸೆ;
ಹೂವು ಹಸಿರು ತುಂಬಿದಾಸೆ:
ಹಣ್ಣು ತೆರೆದ ಹೂವಿನಾಸೆ;
ನೆಲದ ಬಳುವಳಿ.

ಉಪವನ . . . .ಕೆ. ಎಸ್. ನರಸಿಂಹಸ್ವಾಮಿ

ಕಾವ್ಯಪ್ರಪಂಚದಲ್ಲಿ ಹೆಸರಾದ ಕವಿಯೊಬ್ಬರ, ನರಸಿಂಹಸ್ವಾಮಿಯವರ, ಮೊದಲನೆಯ ಗದ್ಯಸಂಗ್ರಹವಿದು. ಹತ್ತು ಹನ್ನೆರಡು ವರ್ಷಗಳಲ್ಲಿ ಆಗಾಗ್ಗೆ ಬೆಳಕು ಕಂಡವು. ಮೊದಲನೆಯ ಗದ್ಯಸಂಕಲನವಾದರೂ ತಕ್ಕಮಟ್ಟಿಗೆ ತೋರವಾಗಿದೆ, ವೈವಿಧ್ಯಯುತವಾಗಿದೆ, ತೂಕವಾಗಿದೆ.

ಇಲ್ಲಿ ಹಿರಿಯ ಕವಿಗಳಾದ ಕುವೆಂಪು, ಬೇಂದ್ರೆಯವರ ಕೃತಿಗಳ ಪರಿಚಯಾತ್ಮಕವಾದ ದೀರ್ಘ ಲೇಖನಗಳಿವೆ. ಅವರಿಗೂ ಹಿರಿಯರಾದ ಮಾಸ್ತಿ, ಡಿ. ವಿ. ಜಿ. ಅವರ ಕಾವ್ಯಗಳ ವಿಚಾರವೂ ಇದೆ. ಕಿರಿಯ ಕವಿಗಳೀರ್ವರ ಸಂಗ್ರಹಗಳನ್ನು ಕುರಿತಾದ ವಿಮರ್ಶೆ ಇದೆ; ನವ್ಯಕಾವ್ಯದ ಸ್ವರೂಪದ ವಿವೇಚನೆಯಿದೆ; ಬೆಟ್ಟದ ಹಾಡುಗಳನ್ನು ಕುರಿತ ಸರಸ ವಿಷಯವಿದೆ.

'ಮುಗುದೆಯರ ಪತ್ರಗಳು' 'ರೂಪದರ್ಶಿ' ಇಂಥ ಸುಂದರ ಗದ್ಯ ಕೃತಿಗಳನ್ನು ಕುರಿತ ಸಹೃದಯ ವಿಮರ್ಶೆಯಿದೆ; 'ತುಂಗಭದ್ರೆ' 'ನಾಯಿಮಲ್ಲಿಗೆ'ಯಂಥ ಹೃದಯಸ್ಪರ್ಶಿಯಾದ ಪ್ರಬಂಧಗಳಿವೆ; ಹರಟೆಗಳಿವೆ. ತಳುಕಿನ ವೆಂಕಣ್ಣಯ್ಯನವರ, ವೀ.ಸೀ. ಯವರ ವ್ಯಕ್ತಿಚಿತ್ರಗಳಿವೆ; ಬಾನುಲಿಯಿಂದ ಹೊರಟು ಹಬ್ಬಿದ ಮಾತುಗಳಿವೆ. ಭಿನ್ನರುಚಿಗೆ, ಭಾವಕ್ಕೆ ತಕ್ಕ ಔತಣವಿದೆ.

ಕವಿತೆಯ ತಂತಿಯನ್ನು ನುಡಿಸುವ ಬೆರಳುಗಳು ಗದ್ಯದ ತಂತ್ರಿಯನ್ನೂ ಅದೇ ಚಳಕದಿಂದ ಮೀಟಬಲ್ಲವು. ನರಸಿಂಹಸ್ವಾಮಿಯವರ ಕವನಗಳಲ್ಲಿ ಕಂಡುಬರುವ ನವುರು ಇಲ್ಲಿಯೂ ಸುಳಿಯುವುದುಂಟು; ಗದ್ಯಬಂಧಕ್ಕೆ ಅಗತ್ಯವಾದ ಬಿಗುವೂ ಇಲ್ಲಿ ಉಂಟು; ಎಲ್ಲಕ್ಕು ಮಿಗಿಲಾಗಿ ಮನಸ್ಸಿಗೆ ಹರ್ಷವೀವ ಗೆಲವುಂಟು.

ಪುಟಗಳು ೧೩೭ ಬೆಲೆ : ರೂ. ೨.೨೫ (೩.೭೫)

ಕಾವ್ಯಾಲಯ ★ ಪ್ರಕಾಶಕರು ★ ಮೈಸೂರು